ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 12 ಶನಿವಾರ 2022

ಸಂಪುಟ: 43 | ಸಂಚಿಕೆ: 205 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ನಮಸ್ಕಾರ ಬೆಂಗಳೂರು

ನಾಡಪ್ರಭು ಕೆಂಪೇಗೌಡರ ಕಲ್ಪನೆಯಂತೆ ಅಭಿವೃದ್ಧಿ

● ಪ್ರಧಾನಮಂತ್ರಿ ನರೇಂದ್ರ ಮೋದಿ ಭರವಸೆ ● ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–2 ಉದ್ಘಾಟನೆ; ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ 'ಪ್ರಗತಿಯ ಪ್ರತಿಮೆ' ಅನಾವರಣ ನಂತರ ಸಾರ್ವಜನಿಕ ಸಭೆ ಉದ್ದೇಶಿಸಿ ಪ್ರಧಾನಿ ಭಾಷಣ ● ದೇಶದಲ್ಲೇ ಕರ್ನಾಟಕಕ್ಕೆ ಅತ್ಯಧಿಕ ಬಂಡವಾಳ ಹರಿದು ಬರುತ್ತಿದೆ ● ವಿದ್ಯುತ್ ಚಾಲಿತ ವಾಹನಗಳ ಉತ್ಪಾದನೆಯಲ್ಲಿ ಬೆಂಗಳೂರು ಅಗ್ರಮಾನ್ಯ

ಬೆಂಗಳೂರು ನ.11(ಕೆಎಂಶಿ)–ಕೇಂದ್ರ ಮತ್ತು ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಇರುವುದರಿಂದ ಕರ್ನಾಟಕ ಶಕ್ತಿಯುತವಾಗಿ ಎಲ್ಲಾ ರಂಗಗಳಲ್ಲಿ ಅಭಿವೃದ್ಧಿಯತ್ತ ಸಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೆ ಮಾತನಾಡಿದ ಪ್ರಧಾನಿ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಮ್ಮಿಕೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಎಳೆಎಳೆಯಾಗಿ ಬಿಡಿಸಿಟ್ಟರು.

ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಸರ್ಕಾರ ಇದ್ದರೆ ಇಂತಹ ಅಭಿವೃದ್ಧಿ ಕಾರ್ಯಗಳು ಸಾಧ್ಯ ಎಂದು ತಿಳಿಸುವುದರ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲೂ ನಮ್ಮ ಸರ್ಕಾರ ಬೆಂಬಲಿಸಿದರೆ ಅಭಿವೃದ್ಧಿಗೆ ಶಕ್ತಿ ಬರುತ್ತದೆ ಎಂಬುದನ್ನು ಪರೋಕ್ಷವಾಗಿ ತಿಳಿಸಿದರು.

ವಿದೇಶಿ ನೇರ ಬಂಡವಾಳ ಹೂಡಿಕೆಯಲ್ಲಿ ದೇಶದ ಶೇ.25ರಷ್ಟು ಪಾಲು ಹೊಂದಿರುವ ಕರ್ನಾಟಕ ಹಾಗೂ ಬೆಂಗಳೂರು ಅಭಿವೃದ್ಧಿಯ ಮುಂಚೂಣಿ ಪಥದಲ್ಲಿವೆ. ನಾಡಪ್ರಭು ಕೆಂಪೇಗೌಡರ ಕಲ್ಪನೆಯ ಬೆಂಗಳೂರಿನ ಸಮಗ್ರ ವಿಕಾಸಕ್ಕೆ ▶ 3ನೇ ಪುಟಕ್ಕೆ



ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯಿಂದ ಬೆಂಗಳೂರು ಬೆಳಗುತ್ತಿದೆ: ಚುಂಚ ಶ್ರೀಗಳು

ಆದಿಚುಂಚನಗಿರಿ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಕೊರೊನಾ ತುತ್ತ ತುದಿಯಲ್ಲಿದ್ದ ಸಂಕಷ್ಟದ ದಿನಗಳಲ್ಲಿ–2020ರ ಜೂನ್ ತಿಂಗಳಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶಂಕುಸ್ಥಾಪನೆ ನೆರವೇರಿಸಿದರು. ಸಂಸ್ಕೃತಿ, ಪರಂಪರೆ, ಆಧ್ಯಾತ್ಮ ಅರಿತವರು ಭವಿಷ್ಯ ಸೃಷ್ಟಿಸಬಲ್ಲರು. ಜ್ಞಾನದ ಜೊತೆ ಕರ್ಮ ಜ್ಞಾನವೂ ಬೇಕು. ಭಾರತ ಉಳಿದರೆ ಎಲ್ಲರೂ ಉಳಿಯುತ್ತಾರೆ. ಭಾರತ ಅಳಿದರೆ ಎಲ್ಲರೂ ಅಳಿಯುತ್ತಾರೆ. ಕೊರೊನಾ ಸಂಕಷ್ಟದ ಕಾಲವನ್ನು ಭಾರತ ಸಮರ್ಥವಾಗಿ ಎದುರಿಸಿ ದೇಶ ಮುನ್ನಡೆಯುತ್ತಿದೆ.ಸುಮಾರು 500 ವರ್ಷಗಳ ಹಿಂದೆ ಯಾವುದೇ ಜಾತಿ, ಪಂಥಗಳಿಗೆ ಸೀಮಿತವಾಗದೇ ದೂರದೃಷ್ಟಿಯಿಂದ ▶ 6ನೇ ಪುಟಕ್ಕೆ



ಮೈಸೂರು–ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್‌ಗೆ ಪ್ರಧಾನಿ ಮೋದಿ ಹಸಿರು ನಿಶಾನೆ



ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣದ ನಂತರ ಗಣ್ಯರೊಂದಿಗೆ ಪ್ರಧಾನಿ ಮೋದಿ

ಕೆಂಪೇಗೌಡರ ವಿಚಾರಧಾರೆ ಹಾದಿಯಲ್ಲಿ ಸಾಗುವ ಸಂಕಲ್ಪ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ
● ಕರ್ನಾಟಕದ ಅಭಿವೃದ್ಧಿಗೆ ಪ್ರಧಾನಿ ಮೋದಿ ದೊಡ್ಡ ಕೊಡುಗೆ ನೀಡಿದ್ದಾರೆ

ಬೆಂಗಳೂರು ನ.11(ಕೆಎಂಶಿ)–ಕೆಂಪೇಗೌಡರ ಚಿಂತನೆ ಹಾಗೂ ವಿಚಾರಧಾರೆಗಳ ಹಾದಿಯಲ್ಲಿ ನಡೆದು ಕರ್ನಾಟಕವನ್ನು ಅಭಿವೃದ್ಧಿಗೊಳಿಸುವ ಸಂಕಲ್ಪವನ್ನು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಅವರು ಇಂದು ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಪ್ರಗತಿಯ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರೊಂದಿಗೆ ಭಾಗವಹಿಸಿ ಮಾತನಾಡಿದರು.

ಪ್ರಧಾನಮಂತ್ರಿಗಳು ರಾಜ್ಯಕ್ಕೆ ಎರಡು ಕೊಡುಗೆಗಳನ್ನು ಕೊಟ್ಟಿದ್ದಾರೆ. ವಂದೇ ಭಾರತ್ ರೈಲು ಮತ್ತು ವಿಮಾನ ನಿಲ್ದಾಣದ 2ನೇ ಟರ್ಮಿನಲ್, ಸಬರ್‌ಬನ್ ರೈಲು. ಕರಾವಳಿಯಲ್ಲಿ ಬಂದರು ನಿರ್ಮಾಣ ಸೇರಿದಂತೆ ಕರ್ನಾಟಕದ ಅಭಿವೃದ್ಧಿಗೆ ದೊಡ್ಡ ಕೊಡುಗೆಯನ್ನು ನೀಡುತ್ತಿರುವ ▶ 3ನೇ ಪುಟಕ್ಕೆ

ಕೆಂಪೇಗೌಡರು ಬಿಜೆಪಿ ಆಸ್ತಿಯಲ್ಲ; ಕೆಲವು ಸಚಿವರ ಜಹಗೀರಲ್ಲ: ಜೆಡಿಎಸ್ ಕಿಡಿ

● ನಾಡಪ್ರಭು ಕೆಂಪೇಗೌಡರನ್ನು ರಾಜಕೀಯಕ್ಕೆ ಎಳೆದು ತಂದ ಪ್ರಧಾನಿ ಮೋದಿ ● ರಾಜ್ಯ ಬಿಜೆಪಿ ಸರಕಾರದ ವಿರುದ್ಧ ಜೆಡಿಎಸ್ ಮುಖಂಡರ ಆಕ್ರೋಶ

ಬೆಂಗಳೂರು, ನ.11– ನಾಡಪ್ರಭು ಕೆಂಪೇಗೌಡರ ನೂರೆಂಟು ಅಡಿ ಎತ್ತರದ ಪ್ರತಿಮೆ ಅನಾವರಣ ಸಮಾರಂಭಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸದೇ ಇರುವ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಜೆಡಿಎಸ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಪಕ್ಷವು, ಬಿಜೆಪಿ ಸರಕಾರ ಹಾಗೂ ಆ ಪಕ್ಷದ ನಾಯಕರ ವಿರುದ್ಧ ಕಿಡಿಕಾರಿದೆ. ಅಲ್ಲದೆ, ಕೆಂಪೇಗೌಡರನ್ನು ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ರಾಜಕೀಯಕ್ಕೆ ಎಳೆದು ತಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ನಾಡಪ್ರಭು ಕೆಂಪೇಗೌಡರ ನಂತರ ಬೆಂಗಳೂರು ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿದ, ಕನ್ನಡ ನೆಲದಿಂದ ಪ್ರಧಾನಿ ಆಗಿದ್ದ ಏಕೈಕ ಕನ್ನಡಿಗರಾದ ಹೆಚ್.ಡಿ. ದೇವೇಗೌಡರನ್ನು ಕೆಂಪೇಗೌಡರ ಪ್ರತಿಮೆ ಲೋಕಾರ್ಪಣೆ ಕಾರ್ಯಕ್ರಮಕ್ಕೆ ರಾಜ್ಯ ಬಿಜೆಪಿ ಸರಕಾರವು ಆಹ್ವಾನ ಮಾಡದಿರುವುದು ಸಮಸ್ತ ಕನ್ನಡಿಗರಿಗೆ ಮಾಡಿದ ▶ 6ನೇ ಪುಟಕ್ಕೆ

ಬಿಜೆಪಿ ಸರ್ಕಾರ ಕೆಂಪೇಗೌಡರ ಅನುಯಾಯಿಯೇ?: ಸಿದ್ದರಾಮಯ್ಯ ವಾಗ್ದಾಳಿ

ಬೆಂಗಳೂರು, ನ.11– ನಾಡಪ್ರಭು ಕೆಂಪೇಗೌಡರ ಪ್ರತಿಮೆ ಉದ್ಘಾಟನೆಗೆ ಆಗಮಿಸಿದ ಪ್ರಧಾನಿ ಮೋದಿ ಅವರಿಗೆ ಸ್ವಾಗತ ಕೋರಿರುವ ವಿಪಕ್ಷ ನಾಯಕ ಸಿದ್ದರಾಮಯ್ಯ ಬಿಜೆಪಿ ವಿರುದ್ಧ ವಾಗ್ದಾಳಿ ಮುಂದುವರೆಸಿದ್ದು, ಸರ್ಕಾರ ಮತ್ತು ಬಿಜೆಪಿ ಕೆಂಪೇಗೌಡರು ಮತ್ತು ಅವರ ಮೌಲ್ಯಗಳ ನಿಜವಾದ ಅನುಯಾಯಿಗಳೇ? ಎಂದು ಪ್ರಶ್ನೆ ಮಾಡಿದ್ದಾರೆ.

ಮಾಜಿ ಸಿಎಂ ಸಿದ್ದರಾಮಯ್ಯ, ಮೋದಿ ಆಗಮನದ ಬಗ್ಗೆ ಚಕಾರವೆತ್ತದೇ ರಾಜ್ಯ ಸರ್ಕಾರದ ವಿರುದ್ಧ ಟ್ವಿಟರ್‌ನಲ್ಲಿ ಹರಿಹಾಯ್ದಿದ್ದಾರೆ. ಮೊದಲನೆಯದಾಗಿ ರಾಜ್ಯ ಸರ್ಕಾರ ಮತ್ತು ಬಿಜೆಪಿ, ಕೆಂಪೇಗೌಡರ ಅನುಯಾಯಿಯೇ ಎಂದು ಪ್ರಶ್ನೆ ಮಾಡಿದ್ದಾರೆ. ಮುಂದುವರೆದು ನಮ್ಮ ಕಾಂಗ್ರೆಸ್ ನಾಡಪ್ರಭು ಕೆಂಪೇಗೌಡರ ಮೌಲ್ಯಗಳ ನೈಜ ಅನುಯಾಯಿಯಾಗಿದೆ. ಅವರ ಗೌರವಾರ್ಥ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಂದು ಹೆಸರಿಟ್ಟಿದ್ದೇವೆ. ಬೆಂಗಳೂರಿನ ಮುಖ್ಯ ಮೆಟ್ರೋ ನಿಲ್ದಾಣಕ್ಕೂ ನಾಡಪ್ರಭು ಕೆಂಪೇಗೌಡ ಮೆಟ್ರೋ ನಿಲ್ದಾಣ ಎಂದು ನಾಮಕರಣ ಮಾಡಲಾಗಿದೆ ಎಂದು ಅವರ ಸರ್ಕಾರದ ಅವಧಿಯಲ್ಲಿ ▶ 6ನೇ ಪುಟಕ್ಕೆ

ಮಳೆ ನಡುವೆಯೂ ಕನಕದಾಸರ ಪ್ರತಿಮೆಯ ಭವ್ಯ ಮೆರವಣಿಗೆ

● ಮೆರವಣಿಗೆಗೆ ಮೆರಗು ನೀಡಿದ ವಿವಿಧ ಜಾನಪದ ಕಲಾತಂಡಗಳು
● ಹಾಲುಮತ ಸಮುದಾಯದ ಮಹನೀಯರ ಚರಿತ್ರೆ ಬಿಂಬಿಸಿದ ಸ್ತಬ್ಧಚಿತ್ರಗಳು
● ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದ ಯುವಕ ಸಮೂಹ

ಮೈಸೂರು, ನ.11(ಎಂಟಿವೈ)– ಸಂತಶ್ರೇಷ್ಠ ಭಕ್ತ ಕನಕದಾಸರ ಜಯಂತಿ ಮಹೋತ್ಸವದ ಅಂಗವಾಗಿ ಜಿಲ್ಲಾಡಳಿತ ಹಾಗೂ ಕನಕದಾಸರ ಜಯಂತ್ಯೋತ್ಸವ ಸಮಿತಿ, ಶುಕ್ರವಾರ ಆಯೋಜಿಸಿದ್ದ ಕನಕದಾಸರ ಪ್ರತಿಮೆಯ ಭವ್ಯ ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಕುರುಬ ಸಮುದಾಯದ ಮಹನೀಯರ ಜೀವನ ಚರಿತ್ರೆ ಬಿಂಬಿಸುವ ಸ್ತಬ್ಧಚಿತ್ರಗಳು ಗಮನ ಸೆಳೆದವು.

ಅರಮನೆಯ ಉತ್ತರ ದ್ವಾರದ ಬಳಿ ಇರುವ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂದೆ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಹಾಗೂ ಜಯಂತ್ಯೋತ್ಸವ ಸಮಿತಿಯ ಪದಾಧಿಕಾರಿಗಳು ಪುಷ್ಪಾರ್ಚನೆ ನೆರವೇರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಕನಕದಾಸರ ಪ್ರತಿಮೆ ಹಾಗೂ ಭಾವಚಿತ್ರದ ಮೆರವಣಿಗೆ ಕೆ.ಆರ್.ವೃತ್ತ, ನ್ಯೂ ಸಯ್ಯಾಜಿ ರಾವ್ ರಸ್ತೆ, ಚಾಮರಾಜ ಜೋಡಿ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆಯ ಮೂಲಕ ಕಲಾಮಂದಿರ ತಲುಪಿತು. ಮೆರವಣಿಗೆಯಲ್ಲಿ ಅಲಂಕೃತ ತೆರೆದ ವಾಹನದಲ್ಲಿ ಭಕ್ತ ಕನಕದಾಸರ ಪ್ರತಿಮೆಯನ್ನು ಮಂಗಳವಾದ್ಯ ಹಾಗೂ ಕಳಸ ಹೊತ್ತ ಮುತ್ತೈದೆಯರು ಹಾಗೂ ಅಶ್ವಾರೋಹಿ ಪಡೆಯೊಂದಿಗೆ ಕೊಂಡೊಯ್ಯಲಾಯಿತು. ಬಳಿಕ ವೀರಗಾಸೆ ಕುಣಿತ, ಡೊಳ್ಳು ಕುಣಿತ, ಪೂಜಾ ಕುಣಿತ, ಕಂಸಾಳೆ, ನಗಾರಿ, ಕಂಗೀಲು ಕುಣಿತ, ಗಾರುಡಿ ಗೊಂಬೆ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾತಂಡಗಳು ಸಾಗಿ ಮೆರವಣಿಗೆಗೆ ಕಳೆ ಕಟ್ಟಿದವು. ಮೆರವಣಿಗೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಸಂಗೊಳ್ಳಿ ರಾಯಣ್ಣ, ವಿಜಯನಗರ ಸಾಮ್ರಾಜ್ಯ ಕಟ್ಟಿದ ಹಕ್ಕ–ಬುಕ್ಕರು, ಚಂದ್ರಗುಪ್ತ ಮೌರ್ಯರ ಸಾಮ್ರಾಜ್ಯ, ಅಹಲ್ಯಾಬಾಯಿ ಹೋಳ್ಕರ್ ಜೀವನ ಚರಿತ್ರೆ, ಸಾಧನೆ ಕುರಿತಂತೆ ನಿರ್ಮಿಸಿದ್ದ ಸ್ತಬ್ಧಚಿತ್ರಗಳು ಗಮನ ಸೆಳೆದವು.



ಡಿಜೆ ಸಂಗೀತಕ್ಕೆ ಕುಣಿದು ಕುಪ್ಪಳಿಸಿದ ಯುವ ಸಮೂಹ: ಮೆರವಣಿಗೆಯ ಮುಂಚೂಣಿಯಲ್ಲಿ ಜಾನಪದ ಕಲಾತಂಡಗಳ ನೃತ್ಯ ವೈಭವವಿದ್ದರೆ, ಮಧ್ಯ ಭಾಗದಲ್ಲಿ ಡಿಜೆ ಸಂಗೀತಕ್ಕೆ ಯುವ ಸಮೂಹ ಮೈಮರೆತು ಕುಣಿದು ಕುಪ್ಪಳಿಸಿ ಸಂಭ್ರಮಿಸಿತು.

> "ನಾಡಿಗೆ ತನ್ನದೇ ಆದ ಕೊಡುಗೆ ನೀಡಿರುವ ಭಕ್ತ ಕನಕದಾಸರ ಜಯಂತಿ ಮಹೋತ್ಸವದ ಮೆರವಣಿಗೆಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಜಿಲ್ಲಾಡಳಿತ ಕಾಟಾಚಾರಕ್ಕೆ ಕಾರ್ಯಕ್ರಮ ರೂಪಿಸಿದಂತೆ ಕಂಡು ಬರುತ್ತಿದೆ. ಮಹನೀಯರ ಜಯಂತಿ ಆಚರಿಸುವಾಗ ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು. ಆದರೆ, ಇಂದು ಅಚ್ಚುಕಟ್ಟಾದ ವ್ಯವಸ್ಥೆ ಮಾಡಲು ಜಿಲ್ಲಾಡಳಿತ ವಿಫಲವಾಗಿದೆ.
> – ಅಡಗೂರು ಹೆಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ


ಬೆಳಗ್ಗೆ 10.30ಕ್ಕೆ ಆರಂಭವಾದ ಮೆರವಣಿಗೆ ಮಧ್ಯಾಹ್ನ 2.10ಕ್ಕೆ ಕಲಾಮಂದಿರ ತಲುಪಿತು. ಈ ವೇಳೆ ಮಾರ್ಗದುದ್ದಕ್ಕೂ ಕುರುಬ ಸಮುದಾಯದ ವೈಶಿಷ್ಟ್ಯತೆ ಬಿಂಬಿಸುವ ಗೀತೆಗಳನ್ನು ಡಿಜೆ ಸಂಗೀತದಲ್ಲಿ ಬಿತ್ತರಿಸಲಾಯಿತು.

ಮಳೆಯ ನಡುವೆಯೂ ಸಂಭ್ರಮ

ಮೆರವಣಿಗೆ ಆರಂಭವಾಗುತ್ತಿದ್ದಂತೆ ಮಳೆ ಸುರಿಯಲಾರಂಭಿಸಿತು. ಮೆರವಣಿಗೆಯುದ್ದಕ್ಕೂ ಮಳೆ ನಡುವೆಯೂ ಜಾನಪದ ಕಲಾವಿದರ ಒಳಗೊಂಡಂತೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರು ಉತ್ಸಾಹದಿಂದಲೇ ಹೆಜ್ಜೆ ಹಾಕಿದರು.

ಪ್ರಸಾದ ವಿತರಣೆ: ಕನಕದಾಸರ ಪ್ರತಿಮೆಯಿದ್ದ ವಾಹನ ಮುಂದೆ ಮುಂದೆ ಸಾಗುತ್ತಿದ್ದಂತೆ ಚಾಮರಾಜ ಜೋಡಿ ರಸ್ತೆ, ಶಾಂತಲಾ ಚಿತ್ರಮಂದಿರದ ವೃತ್ತ, ದೇವರಾಜ ಅರಸ್ ರಸ್ತೆಯಲ್ಲಿ ಸ್ಥಳೀಯರು ಕನಕದಾಸರ ಪ್ರತಿಮೆಗೆ ಪೂಜೆ ಸಲ್ಲಿಸಿದರು. ಮೆರವಣಿಗೆಯಲ್ಲಿ ಜಿ.ಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ, ಪಾಲಿಕೆ ಸದಸ್ಯ ಜೆ.ಗೋಪಿ, ಕೆಪಿಸಿಸಿ ಕಾನೂನು ಘಟಕದ ರಾಜ್ಯ ಕಾರ್ಯದರ್ಶಿ ಲೀಲಾ ಕಾಳೆ, ಮುಖಂಡರಾದ ಬ್ಯಾಂಕ್ ಪುಟ್ಟಸ್ವಾಮಿ, ಎಂ.ಶಿವಣ್ಣ, ಹಿನಕಲ್ ಪ್ರಕಾಶ್, ಹಿನಕಲ್ ಉದಯ್, ಕೆಇಬಿ ಸೋಮಣ್ಣ, ಮಂಜು, ಮೈಸೂರು ಬಸವಣ್ಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪಡುವಾರಹಳ್ಳಿಯ ಸ್ನೇಹ ಬಳಗದಿಂದ ಕನಕ ಜಯಂತಿ ಆಚರಣೆ



ಮೈಸೂರು, ನ. 11– ಮೈಸೂರಿನ ಪಡುವಾರಹಳ್ಳಿಯ ಸ್ನೇಹ ಬಳಗದ ವತಿಯಿಂದ ಜಲದರ್ಶಿನಿ ಅತಿಥಿಗೃಹದ ಚಾಮರಾಜ ಕ್ಷೇತ್ರದ ಶಾಸಕ ನಾಗೇಂದ್ರ ಅವರ ಕಚೇರಿಯಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು. ಶ್ರೀ ಕನಕದಾಸರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ನಂತರ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಜಾತಿ, ಕುಲ, ಮತಗಳ ಸಂಕೋಲೆಗಳನ್ನು ತೊರೆದು ಭಕ್ತಿಯಿಂದ ಭಗವಂತನನ್ನು ಒಲಿಸಿಕೊಂಡವರು ದಾಸಶ್ರೇಷ್ಠ ಶ್ರೀ ಕನಕದಾಸರು. ನಾಡು ಕಂಡ ಅಪ್ರತಿಮ ದಾರ್ಶನಿಕರು. ತಮ್ಮ ಕೀರ್ತನೆಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ಸಮಾಜಕ್ಕೆ ಪ್ರಶ್ನೆಹಾಕಿ ತಿದ್ದುವ ಪ್ರಯತ್ನ ಮಾಡಿದರು ಎಂದರು. ಈ ಸಂದರ್ಭದಲ್ಲಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ಬಿಜೆಪಿ ಚಾಮರಾಜ ಅಧ್ಯಕ್ಷ ಸೋಮಶೇಖರ ರಾಜು, ನಗರಪಾಲಿಕೆ ಸದಸ್ಯ ಎಂ. ಚಿಕ್ಕವೆಂಕಟು, ಮಾಜಿ ಸದಸ್ಯ ಗುರುವಿನಾಯಕ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಉಪಾಧ್ಯಕ್ಷೆ ಮಹಾಲಕ್ಷ್ಮಿ, ನಿರ್ದೇಶಕ ಸಿ.ಡಿ.ಕುಮಾರ್, ಗಂಗೋತ್ರಿ ರಮೇಶ್, ದಿನೇಶ್ ಗೌಡ, ಚಾಮರಾಜ ಆಶ್ರಯ ಸಮಿತಿಯ ಸದಸ್ಯರಾದ ಅನುಜ್ ಸಾರಸ್ವತ್, ಎಂ.ಮಹೇಶ್, ಗಿರೀಶ್, ನಾಗನಾಯಕ, ಜಯಣ್ಣ, ವೇಣು, ಶ್ರೀನಿವಾಸ್, ಗೋವಿಂದ, ಶರತ್, ಕೇಬಲ್ ಕಿಟ್ಟಿ, ವಿ.ಭೈರವ್, ಟೈಲರ್ ಸ್ವಾಮಿ, ಮತ್ತಿತರರಿದ್ದರು.

ನ.14, ಅಪ್ರೆಂಟಿಸ್‌ಶಿಪ್ ಮೇಳ

ಮೈಸೂರು, ನ.11–ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖಾ ವತಿಯಿಂದ ನ.14 ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಎನ್.ಆರ್.ಮೊಹಲ್ಲಾ. ಮೈಸೂರು–7 ಇಲ್ಲಿ ಅಪ್ರೆಂಟಿಸ್‌ಶಿಪ್ ಮೇಳ ನಡೆಯಲಿದ್ದು ವಿವಿಧ ಪ್ರತಿಷ್ಠಿತ ಉದ್ದಿಮೆಗಳು ಪಾಲ್ಗೊಳ್ಳುತ್ತಿವೆ. ಈ ಮೇಳದಲ್ಲಿ ಐಟಿಐ ಉತ್ತೀರ್ಣರಾದ ಅಭ್ಯರ್ಥಿಗಳು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಮಾಹಿತಿಗಾಗಿ ಸಂಸ್ಥೆಯ ಉಪ ಪ್ರಾಚಾರ್ಯ ಎಂ.ಜಯೇಂದ್ರ ಮೊ.8792426277 ಹಾಗೂ ಎಂ.ಎಚ್.ನಾಗೇಶ್ ಮೊ. 9945616088 ರವರನ್ನು ಸಂಪರ್ಕಿಸಿ ಎಂದು ಎನ್.ಆರ್. ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ನೈಪುಣ್ಯ ದಸರಾ ಪ್ರಶಸ್ತಿ ಪ್ರದಾನ

ನಿಮ್ಮ ಅಪೂರ್ಣ ಕನಸುಗಳ ಮಕ್ಕಳ ಮೇಲೆ ಹೇರಬೇಡಿ

● ಶಿಕ್ಷಣ ತಜ್ಞ ಪ್ರೊ. ಗುರುರಾಜ್ ಕರ್ಜಗಿ ಎಚ್ಚರಿಕೆ ● ಮಕ್ಕಳನ್ನು ಮುಕ್ತವಾಗಿ ಬೆಳೆಯಲು ಬಿಡಿ ● ಮಕ್ಕಳ ಮೇಲೆ ಒತ್ತಡ ಹಾಕದಿದ್ದರೆ ಮುಂದಿನ 15 ವರ್ಷದಲ್ಲಿ ಭಾರತದಲ್ಲಿಯೇ ಗೂಗಲ್, ಅಮೆಜಾನ್ ಸ್ಥಾಪನೆ ಆಗ್ತಾವೆ: ಡಾ. ಬಾಲಸುಬ್ರಹ್ಮಣ್ಯಂ

ಮೈಸೂರು, ನ.11(ಜಿಎ)– ನಿಮ್ಮ ಅಪೂರ್ಣ ಕನಸುಗಳನ್ನು ಮಕ್ಕಳ ಮೇಲೆ ಹೇರಿ ಮಕ್ಕಳನ್ನು ಒತ್ತಡದಲ್ಲಿ ದೂಡಿ ಅವರಿಂದ ಏನು ಅಪೇಕ್ಷಿಸಬೇಡಿ ಎಂದು ಶಿಕ್ಷಣ ತಜ್ಞ, ಚಿಂತಕರೂ ಆದ ಗುರುರಾಜ್ ಕರ್ಜಗಿ ಅವರು ಪೋಷಕರಿಗೆ ಸಲಹೆ ನೀಡಿದರು.

ವಿಜಯನಗರದ 3ನೇ ಹಂತದಲ್ಲಿರುವ ಬಂಟ್ಸ್ ಕನ್ವೇನ್ಷನ್ ಹಾಲ್‌ನಲ್ಲಿ ನೈಪುಣ್ಯ ಶಾಲೆ ವತಿಯಿಂದ ಆಯೋಜಿಸಿದ್ದ 'ನೈಪುಣ್ಯ ದಸರಾ ಪ್ರಶಸ್ತಿ' ಪ್ರದಾನ ಕಾರ್ಯಕ್ರಮ ಹಾಗೂ ಶಾಲಾ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡುತ್ತಿದ್ದರು.

ಶಾಲೆಗಳಲ್ಲಿ ವಿಷಯದ ಅಂಶಗಳನ್ನು ಕಲಿಸುವ ಬದಲು ಮೌಲ್ಯಗಳನ್ನು ಕಲಿಸಿದರೆ, ಅದು ಯಾವಾಗಲೂ ನೆನಪಿನಲ್ಲಿರುತ್ತದೆ. ಏಕೆಂದರೆ, ನೀವು ಕಲಿಸುವ ಅಂಶಗಳನ್ನು ಮಕ್ಕಳು ಆರು ತಿಂಗಳ ಅವಧಿಯಲ್ಲಿಯೇ ಮರೆತು ಬಿಡುತ್ತಾರೆ. ಆದರೆ, ಮೌಲ್ಯಗಳನ್ನು ಕಲಿಸಿದರೆ ಮಕ್ಕಳು ಎಂದಿಗೂ ಮರೆಯುವುದಿಲ್ಲ. ಅದನ್ನು ಜೀವನ ಪೂರ್ತಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಅದರಂತೆ ಪೋಷಕರು ಮಾರ್ಕ್ಸ್ ಮುಖ್ಯ ಎಂಬುದನ್ನು ತಲೆಯಿಂದ ತೆಗೆದು ಹಾಕಿ, ಮಕ್ಕಳು ಮುಖ್ಯ ಎಂಬುದರ ಬಗ್ಗೆ ಆಲೋಚನೆ ಮಾಡಿ ಎಂದು ಸಣ್ಣ ಸಣ್ಣ ಕಥೆಗಳ ಮೂಲಕ ಮಕ್ಕಳ ಜೀವನದಲ್ಲಿ ಶಿಕ್ಷಕರು ಮತ್ತು ಪೋಷಕರ ಪಾತ್ರ ಏನು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.



ಮಕ್ಕಳ ಬಗ್ಗೆ ಪೋಷಕರು ನಾಲ್ಕು ಪ್ರಮುಖ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳ ಬೇಕಿದೆ. ಮೊದಲು ಮಕ್ಕಳನ್ನು ಅತೀ ಪ್ರೀತಿಸಿ, ಅವರು ಕೇಳುವ ಎಲ್ಲಾ ವಸ್ತುಗಳನ್ನು ಅವರ ಕೈಗೆ ಸಿಗುವಂತೆ ಮಾಡಬೇಡಿ. ಅದರಿಂದ ಅವರಿಗೆ ಒಂದು ವಸ್ತುವಿನ ಬೆಲೆ ತಿಳಿಯದಂತೆ ಬೆಳೆಯುತ್ತಾರೆ. ನಿಮ್ಮ ಈ ತಪ್ಪಿನಿಂದ ಮುಂದಿನ ದಿನಗಳಲ್ಲಿ ಸಣ್ಣ ಸಣ್ಣ ವೈಫಲ್ಯಗಳಿಗೂ ಆತ್ಮಹತ್ಯೆಗೆ ಮುಂದಾಗುತ್ತಾರೆ. ಅದರ ಬದಲೂ ಸಮಸ್ಯೆಗಳನ್ನು ಎದುರಿಸುವ ಬಗ್ಗೆ ಅರಿವು ಮೂಡಿಸಿ, ಅವರಲ್ಲಿ ಆತ್ಮಸ್ಥೈರ್ಯ ತುಂಬುವ ಮೂಲಕ ಮಕ್ಕಳನ್ನು ಪ್ರೀತಿಸಿ.

ಎರಡನೇ ಅಂಶ ಬೇರೆ ಮಕ್ಕಳೊಂದಿಗೆ ನಿಮ್ಮ ಮಕ್ಕಳನ್ನು ಹೋಲಿಕೆ ಮಾಡಿ ರೇಸಿಗೆ ಕುದುರೆ ಬಿಟ್ಟಂತೆ ಮಾಡದಿರಿ, ನೀವು ಡಾಕ್ಟರ್, ಇಂಜಿನಿಯರ್, ಪೊಲೀಸ್ ಆಗಬೇಕಿತ್ತು ಎಂಬ ನಿಮ್ಮ ಅಪೂರ್ಣ ಕನಸುಗಳನ್ನು ಅವರ ಮೇಲೆ ಹೇರಬೇಡಿ. ಅವರಲ್ಲಿಯೇ ಏನಾದರೂ ವಿಶೇಷ ಶಕ್ತಿ ಇರುತ್ತದೆ ಅದನ್ನು ಗುರುತಿಸಿ ಅದಕ್ಕೆ ಪ್ರೋತ್ಸಾಹ ನೀಡಿ.

ಮೂರನೇ ಅಂಶ ಅನೇಕ ತಂದೆ–ತಾಯಂದಿರು ಮಕ್ಕಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಕೆಲವು ಮನೆಗಳಲ್ಲಿ ಮಕ್ಕಳು ಯಾವ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂಬುದು ತಂದೆಗೆ ತಿಳಿದಿರುವುದಿಲ್ಲ. ನಾವು ಇಷ್ಟು ಕಷ್ಟ ಪಡುತ್ತಿರುವುದೆಲ್ಲ ನಮ್ಮ ಮಕ್ಕಳಿಗಾಗಿ ಎಂದು ಹೇಳುತ್ತಾರೆ. ಆದರೆ, ಅವರ ಬಗ್ಗೆ ಗಮನಹರಿಸುವುದಿಲ್ಲ. ನಿಮ್ಮ ಮಕ್ಕಳ ಬಗ್ಗೆ ಗಮನಹರಿಸಿ ಎಂದು ಸಲಹೆ ನೀಡಿದರು.

ನಾಲ್ಕನೇ ಅಂಶ ಮಕ್ಕಳನ್ನು ಹೆಚ್ಚು ಬಿಗಿಯಾಗಿ ಬೆಳೆಸಬೇಡಿ. ಅದರಿಂದ ಅವರು ಮುಂದಿನ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳಲು ಹೆದರುತ್ತಾರೆ. ನಿಮ್ಮ ನಡುವಳಿಕೆಯಿಂದಲೇ ಮಕ್ಕಳಲ್ಲಿ ಸಂಸ್ಕೃತಿ ಬೆಳೆಯುವುದು. ಒಟ್ಟಾರೆ ಮೊದಲು ಮಕ್ಕಳೊಂದಿಗೆ ಪ್ರೀತಿಯನ್ನು ಹಂಚಿಕೊಳ್ಳುವುದರ ಜೊತೆಗೆ ಮಕ್ಕಳಲ್ಲಿ ಶ್ರದ್ಧೆಯನ್ನು ಬೆಳೆಸಿ ಎಂದರು.

ಮಕ್ಕಳ ಮೇಲೆ ಒತ್ತಡ ಹಾಕ್ಬೇಡಿ : ನಂತರ ಕೇಂದ್ರದ ಸಾಮರ್ಥ್ಯ ನಿರ್ಮಾಣ ಆಯೋಗ ಸದಸ್ಯರಾದ ಡಾ.ಆರ್.ಬಾಲ ಸುಬ್ರಹ್ಮಣ್ಯಂ ಮಾತನಾಡಿ, ನಾನು ಕೆಲಸದ ನಿಮಿತ್ತ ದೂರದ ದೆಹಲಿಯಲ್ಲಿ ವಾಸವಿ ದ್ದೇನೆ. ಅಲ್ಲಿ ಒಂದು ವರ್ಷ ಜೀವನ ಸಾಗಿಸಿದರೆ, 5 ವರ್ಷ ಆಯಸ್ಸು ಕಡಿಮೆ ಆದಂತೆ. ಅಷ್ಟು ಮಾಲಿನ್ಯವಾಗಿದೆ ದೆಹಲಿಯ ವಾತಾವರಣ. ದೇಶದಲ್ಲಿಯೇ ಅತೀ ಕೆಟ್ಟ ಪರಿಸ್ಥಿತಿಯಲ್ಲಿರುವ ನಗರವೆಂದರೆ ಅದು ದೆಹಲಿಯಾಗಿದೆ. ಅದರಿಂದ ನಾನು ಉತ್ತಮ ಆಮ್ಲಜನಕಕ್ಕಾಗಿ ನನ್ನ ಮೈಸೂರಿಗೆ ಬಂದಿದ್ದೇನೆ ಎಂದು ಮೈಸೂರಿನ ವಾತಾವರಣದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತ ಅತೀ ಹೆಚ್ಚು ಸಂಪನ್ಮೂಲ ಹೊಂದಿರುವ ದೇಶವಾಗಿದ್ದು, ಮಕ್ಕಳೇ ನಮ್ಮ ದೇಶದ ಮುಂದಿನ ಸಂಪನ್ಮೂಲಗಳು. ಅವರ ಮೇಲೆ ಒತ್ತಡ ಹೇರದೆ ಮಕ್ಕಳನ್ನು ಮಕ್ಕಳಂತೆ ಇರಲು ಬಿಟ್ಟು ಬಿಡಿ. ಇತ್ತೀಚಿನ ದಿನಗಳಲ್ಲಿ ಹೇಳುತ್ತಿದ್ದೇವೆ, ಗೂಗಲ್, ಅಮೆಜಾನ್ ಸೇರಿದಂತೆ ವಿಶ್ವದ ಪ್ರಮುಖ ಸಂಸ್ಥೆಗಳ ಮುಖ್ಯಸ್ಥರು ನಮ್ಮ ಭಾರತೀಯರಾಗಿದ್ದಾರೆ ಎಂದು ಹರ್ಷ ಪಡುತ್ತಿದ್ದೇವೆ. ನಮ್ಮ ಮಕ್ಕಳನ್ನು ಯಾವುದೇ ಒತ್ತಡ ಹೇರದೆ ಬಿಟ್ಟರೆ, ಮುಂದಿನ 15 ವರ್ಷಗಳ ನಂತರ ಗೂಗಲ್, ಅಮೆಜಾನ್ ಸೇರಿದಂತೆ ಇತರ ಸಂಸ್ಥೆಗಳು ನಮ್ಮ ಭಾರತದಲ್ಲಿಯೇ ನಿರ್ಮಾಣವಾಗುತ್ತವೆ ಎಂದರು.

ಇತ್ತೀಚಿನ ದಿನಗಳಲ್ಲಿ 21 ರಿಂದ 25 ವರ್ಷದೊಳಗಿನ ಯುವ ಸಮೂಹ ಸಣ್ಣ ಪುಟ್ಟ ವಿಚಾರಗಳಿಗೆ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ. ಇದಕ್ಕೆ ಮುಖ್ಯ ಕಾರಣ ಬೇರೆ ಮಕ್ಕಳೊಂದಿಗೆ ನಮ್ಮ ಮಕ್ಕಳನ್ನು ಹೋಲಿಕೆ ಮಾಡುತ್ತಿರುವುದು ಅದನ್ನು ತಪ್ಪಿಸಿ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಸ್ಥರಾದ ರಘು ಆರ್.ಕೌಟಿಲ್ಯ, ಶಾಲೆಯ ಪ್ರಾಂಶುಪಾಲರಾದ ಶಿಲ್ಪ ಪ್ರಶಾಂತ್ ಉಪಸ್ಥಿತರಿದ್ದರು.

ಟ್ಯಾಲೆಂಟ್ಸ್–2022 ಅಂತರ ಶಾಲಾ ಸಾಂಸ್ಕೃತಿಕ ಸ್ಪರ್ಧೆ: ಬಿವಿಬಿ ವಿದ್ಯಾರ್ಥಿಗಳಿಗೆ ಸಮಗ್ರ ಚಾಂಪಿಯನ್‌ಶಿಪ್ ಪ್ರಶಸ್ತಿ

ಮೈಸೂರು, ನ.11– ಮೈಸೂರು ರೌಂಡ್ ಟೇಬಲ್ (ಎಂಆರ್‌ಟಿ–21) ಮತ್ತು ಮೈಸೂರು ಲೇಡೀಸ್ ಸರ್ಕಲ್–9 (ಎಂಎಲ್‌ಸಿ–9) ಜಂಟಿಯಾಗಿ ಇತ್ತೀಚೆಗೆ ಹುಣಸೂರು ರಸ್ತೆಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಿದ್ದ ಟ್ಯಾಲೆಂಟ್ಸ್–2022 ಅಂತರ ಶಾಲಾ ಸಾಂಸ್ಕೃತಿಕ ಸ್ಪರ್ಧೆಯಲ್ಲಿ 370 ವಿದ್ಯಾರ್ಥಿಗಳು ಆಕರ್ಷಕ ಪ್ರದರ್ಶನ ನೀಡಿದರು.

ಸ್ಪರ್ಧೆಯು ಏಕವ್ಯಕ್ತಿ ಪ್ರದರ್ಶನ, ಸಮೂಹ ಪ್ರದರ್ಶನ, ಮೈಮ್ ಪ್ರದರ್ಶನ ಮತ್ತು ಚರ್ಚೆ–ಹೀಗೆ ನಾಲ್ಕು ವಿಭಾಗಗಳಲ್ಲಿ ನಡೆಯಿತು. ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಿಂದ ಸುಮಾರು 25 ಶಾಲೆಗಳ ಪ್ರತಿಭಾವಂತ ವಿದ್ಯಾರ್ಥಿಗಳು ಭಾಗವಹಿಸಿದ್ದು, ಆಕರ್ಷಕ ಪ್ರದರ್ಶನಗಳನ್ನು ನೀಡಿದರು. ಭಾರತೀಯ ವಿದ್ಯಾ ಭವನ (ಬಿವಿಬಿ) ವಿದ್ಯಾರ್ಥಿಗಳು ಸಮಗ್ರ ಚಾಂಪಿಯನ್‌ಶಿಪ್ ಪ್ರಶಸ್ತಿ ಪಡೆದುಕೊಂಡರೆ, ಚನ್ನರಾಯಪಟ್ಟಣದ ಜ್ಞಾನಸಾಗರ ಇಂಟರ್‌ನ್ಯಾಷನಲ್ ಪಬ್ಲಿಕ್ ಶಾಲೆ ಮತ್ತು ಕೊಳ್ಳೇಗಾಲ ವಿಸ್ಡಂ ಶಾಲೆ ಕ್ರಮವಾಗಿ ಪ್ರಥಮ ರನ್ನರ್ ಅಪ್ ಮತ್ತು ದ್ವಿತೀಯ ರನ್ನರ್ ಅಪ್ ಆಗಿ ಹೊರಹೊಮ್ಮಿದವು.

ಟ್ಯಾಲೆಂಟ್ಸ್ ಅಂತರ ಶಾಲಾ ಸಾಂಸ್ಕೃತಿಕ ಸ್ಪರ್ಧೆಯನ್ನು ಕಳೆದ 19 ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ವಿದ್ಯಾರ್ಥಿಗಳು ಪ್ರತಿ ವರ್ಷ ನಾಟಕ, ಹಾಡು ಅಥವಾ ನೃತ್ಯ ಪ್ರಾಕಾರದಲ್ಲಿ ಹೊಸತನವನ್ನು ಪ್ರದರ್ಶಿಸುತ್ತಿದ್ದಾರೆ. ಈ ವರ್ಷದ ಸ್ಪರ್ಧೆಯ ವಿಷಯ ವಸ್ತು 'ಮಹಿಳಾ ಸಬಲೀಕರಣ' ಆಗಿತ್ತು. ಆಶಿಯಾನ ಶಾಲೆಯಿಂದ ವಿಶೇಷಚೇತನ ಮಕ್ಕಳು ಸಮಾರೋಪ ಸಮಾರಂಭದಲ್ಲಿ ಪ್ರದರ್ಶನ ನೀಡಿದರು. ಇದೇ ವೇಳೆ ವಿಶೇಷ ವ್ಯಕ್ತಿಗಳಾದ ಲೇಡಿಸ್ ಸರ್ಕಲ್ ಇಂಡಿಯಾ, ನ್ಯಾಷನಲ್ ಮಾಜಿ ಅಧ್ಯಕ್ಷರಾದ ಮಾಸುಮಾ ವಾಗ್; ಶಿಕ್ಷಣ ತಜ್ಞರು ಮತ್ತು ಉದ್ಯಮಿ ಪೂಜಾ ಜೋಶಿ, ಕಲಾವಿದರಾದ ಮಾಧುರ್ಯ ರಾಮಸ್ವಾಮಿ ಅವರನ್ನು ಅವರ ಕ್ಷೇತ್ರದಲ್ಲಿನ ಅಸಾಧಾರಣ ಪ್ರತಿಭೆ, ಶ್ರದ್ಧೆ ಮತ್ತು ಸಾಧನೆಯನ್ನು ಗುರುತಿಸಿ ಸನ್ಮಾನಿಸಲಾಯಿತು.



ಮೈಸೂರು ಲೇಡಿಸ್ ಸರ್ಕಲ್ ಅಧ್ಯಕ್ಷೆ ಪೂಜಿತಾ ಪುರುಷೋತ್ತಮ್, ಮೈಸೂರು ರೌಂಡ್ ಟೇಬಲ್ –21 ಅಧ್ಯಕ್ಷ ಎಂ.ಎಂ. ನಿಖಿಲೇಶ್, ಟ್ಯಾಲೆಂಟ್ಸ್ ಸಂಚಾಲಕ ಹೆಚ್.ಹೆಚ್. ರಾಮ್, ಎಂಆರ್‌ಟಿ–21 ಸದಸ್ಯರಾದ ಕೌಶಿಕ್, ಚಿರಂತ್, ಪವನ್, ಪಿ. ನಿತಿನ್, ಪವನ್, ಅಕ್ಷಯ್, ಜಿ. ನಿತಿನ್, ಎಂಎಲ್‌ಸಿ–9ರ ಸದಸ್ಯರಾದ ಸವಿತಾ ಶೆಣೈ, ಕೆ.ಎಸ್. ನಾಗಶ್ರೀ, ಕೆಖ್ ಕಾಶನ್, ಶ್ರುತಿ ಗಿರಿ, ಶ್ರೀನಿಜಾ, ಡಾ. ಕವಿತಾ, ಶ್ರೀ ವಿದ್ಯಾ, ಪೂಜಾ, ವನಿತಾ, ನಿತ್ಯಾ ಮತ್ತು ಸುನೀತಾ ಹಾಜರಿದ್ದರು.

ವಿಜೇತರು ಸಮಗ್ರ ಪ್ರಶಸ್ತಿ : ಭಾರತೀಯ ವಿದ್ಯಾ ಭವನ ಶಾಲೆ, ಮೈಸೂರು (ಪ್ರಥಮ), ಜ್ಞಾನಸಾಗರ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಚನ್ನರಾಯಪಟ್ಟಣ (ದ್ವಿತೀಯ), ಕೊಳ್ಳೇಗಾಲ ವಿಸ್ಡಂ ಶಾಲೆ (ತೃತೀಯ).

ಏಕವ್ಯಕ್ತಿ ಹಾಡು/ನೃತ್ಯ : ವೈಭವಿ–ರೈನ್‌ಬೋ ಪಬ್ಲಿಕ್ ಸ್ಕೂಲ್, ಸೋಲೋ ನೃತ್ಯ: ಹರ್ಷಿತಾ –ರೋಟರಿ ವೆಸ್ಟ್ ಸ್ಕೂಲ್, ಸಂಜನಾ– ಕೌಟಿಲ್ಯ ವಿದ್ಯಾಲಯ, ಸಮೂಹ ಗೀತೆ: ಪೂರ್ಣಚೇತನ ಪಬ್ಲಿಕ್ ಸ್ಕೂಲ್, **ಸಮೂಹ ನೃತ್ಯ :** ಎಕ್ಸೆಲ್ ಪಬ್ಲಿಕ್ ಸ್ಕೂಲ್, ವಿಜಯ ವಿಠ್ಠಲ ಸ್ಕೂಲ್, ಶಿಷ್ಕರಣಿ ಶಾಲೆ.

ಗ್ರೂಪ್ ನಾಟಕ : ಜ್ಞಾನಸಾಗರ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್, ಚನ್ನರಾಯಪಟ್ಟಣ, ವಿಸ್ಡಂ ಸ್ಕೂಲ್, ಕೊಳ್ಳೇಗಾಲ, ಮಾತೃಮಂಡಳಿ ಸ್ಕೂಲ್, ಮೈಸೂರು. **ಚರ್ಚೆ :** ಪದ್ಮನಾಭ್ ಭಟ್, ಭಾರತೀಯ ವಿದ್ಯಾಭವನ, ರಕ್ಷಿತಾ–ವಿದ್ಯಾವರ್ಧಿ ಎಜುಕೇಷನಲ್ ಇನ್ಸ್‌ಟಿಟ್ಯೂಟ್, ಪೂರ್ಣಿ –ಶಿಷ್ಕರಣಿ ಶಾಲೆ.

ಒಕ್ಕಲಿಗರ ಪ್ರಶ್ನಾತೀತ ನಾಯಕರಾದ ದೇವೇಗೌಡರ ಆಹ್ವಾನಿಸದಿರುವುದು ಅಕ್ಷಮ್ಯ

ಮೈಸೂರು, ನ.11– ನಾಡಪ್ರಭು ಕೆಂಪೇಗೌಡರ 108 ಅಡಿಯ ಲೋಹದ ಪ್ರತಿಮೆ



ಲೋಕಾರ್ಪಣೆ ಕಾರ್ಯಕ್ರಮಕ್ಕೆ ನಾಡಿನ ಹಿರಿಯ ಮುತ್ಸದ್ಧಿ ರಾಜಕಾರಣಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸದಿರುವುದು ಬಿಜೆಪಿಯ ದುರಹಂಕಾರದ ಪರಾಮಾವಧಿ ಎಂದು ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷರೂ ಆದ ಮೈಸೂರು ನಗರ ಪಾಲಿಕೆ ಕಾರ್ಪೊರೇಟರ್ ಕೆ.ವಿ.ಶ್ರೀಧರ್ ಕಿಡಿಕಾರಿದ್ದಾರೆ.

ಹೆಚ್.ಡಿ.ದೇವೇಗೌಡರು ಒಕ್ಕಲಿಗ ಸಮುದಾಯದ ಪ್ರಶ್ನಾತೀತ ನಾಯಕರು ಮಾತ್ರವಲ್ಲ. ಅವರು ಎಲ್ಲಾ ಸಮುದಾಯದವರ ಬಂಧು, ರೈತರ ಜೀವಾಳವಾಗಿದ್ದಾರೆ. ಇಂತಹ ಮಹನೀಯರನ್ನು ಮಹತ್ವದ ಕಾರ್ಯಕ್ರಮದಲ್ಲಿ ಕಡೆಗಾಣಿಸಿರುವುದು ಖಂಡನಾರ್ಹ. ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು ಒಕ್ಕಲಿಗ ಸಮುದಾಯದ ಅಸ್ಮಿತೆ ಮಾತ್ರವಲ್ಲದೆ ಈ ನಾಡಿನ ಹೆಮ್ಮೆ. ಅವರ ಬೃಹತ್ ಪ್ರತಿಮೆ ಅನಾವರಣಕ್ಕೆ ಅದೇ ಸಮುದಾಯದ ರಾಜಕೀಯ ಮುತ್ಸದ್ಧಿ ಹೆಚ್.ಡಿ.ದೇವೇಗೌಡರನ್ನು ಆಹ್ವಾನಿಸದಿರುವುದು ಈ ನೆಲಕ್ಕೆ ಮಾಡಿರುವ ಅಪಮಾನ. ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ. ಆದರೆ ಜನ ಜಾಗೃತರಾಗಿದ್ದಾರೆ. ಬಿಜೆಪಿಯ ದುರಂಹಂಕಾರಕ್ಕೆ ಮುಂದಿನ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾನಸ ಗಂಗೋತ್ರಿ ಆವರಣದಲ್ಲಿ ವಾಯುವಿಹಾರ ನಿರ್ಬಂಧ ವಿರೋಧಿಸಿ ಇಂದು ಪ್ರತಿಭಟನೆ

ಮೈಸೂರು, ನ.11–ಮೈಸೂರು ವಿಶ್ವವಿದ್ಯಾನಿಲಯದ ಮಾನಸ ಗಂಗೋತ್ರಿ ಕ್ಯಾಂಪಸ್‌ನಲ್ಲಿ ವಾಯುವಿಹಾರಿಗಳಿಗೆ ನಿರ್ಬಂಧ ಹೇರಿರುವುದನ್ನು ವಿರೋಧಿಸಿ ನಾಳೆ(ನ.12) ಬೆಳಗ್ಗೆ 6.30 ರಿಂದ 7 ಗಂಟೆವರೆಗೂ ಗಂಗೋತ್ರಿಯ ಮುಖ್ಯ ದ್ವಾರದ ಕುವೆಂಪು ಪ್ರತಿಮೆ ಮುಂಭಾಗ ವಾಯುವಿಹಾರಿಗಳು ಪ್ರತಿಭಟನೆ ನಡೆಸಲಿದ್ದಾರೆ.

ನಿವೃತ್ತ ಐಬಿ ಅಧಿಕಾರಿ ಆರ್.ಎನ್.ಕುಲಕರ್ಣಿ ಅವರ ಹತ್ಯೆಯ ನಂತರ ವಿವಿಯು ಕ್ಯಾಂಪಸ್‌ನಲ್ಲಿ ವಾಯುವಿಹಾರ ಮಾಡುವವರನ್ನು ನಿರ್ಬಂದಿಸಿತ್ತು. ಇದನ್ನು ವಿರೋಧಿಸಿರುವ ವಾಯುವಿಹಾರಿಗಳು ನಾಳೆ ಪ್ರತಿಭಟನೆ ನಡೆಸುವುದಾಗಿ ಮೈಸೂರು ವಿವಿ ಕುಲಪತಿಗಳಿಗೆ ಪತ್ರ ಬರೆದಿದ್ದಾರೆ. ಕುಲಕರ್ಣೀ ಅವರ ಹತ್ಯೆ ಪೂರ್ವ ನಿಯೋಜಿತ ಸಂಚಾಗಿದ್ದು, ಇದರಲ್ಲಿ ವಾಯುವಿಹಾರಿಗಳ ಪಾತ್ರವಿಲ್ಲ. ಕ್ಯಾಂಪಸ್‌ನ ನಾಲ್ಕು ಕಡೆಗಳಲ್ಲಿ ದಿನದ 24 ಗಂಟೆ ಸೆಕ್ಯೂರಿಟಿಗಳನ್ನು ನಿಯೋಜಿಸಿದ್ದರೂ, ಕ್ಯಾಂಪಸ್ ಒಳಗಿನ ಹಾಸ್ಟಲ್‌ಗಳ ಬಳಿ ಟ್ಯಾಕ್ಸಿ ಗಳು ಮತ್ತು ಅನಧಿಕೃತ ವ್ಯಕ್ತಿಗಳು ಇರಲು ವಾಯುವಿಹಾರಿಗಳು ಕಾರಣರಲ್ಲ. ಕ್ಯಾಂಪಸ್ ಒಳಗೆ ನಡೆಯುವ ಕೃತ್ಯಗಳಿಗೆ ಸೆಕ್ಯೂರಿಟಿ ವೈಫಲ್ಯ ಕಾರಣವೇ ಹೊರತು ಬೇರ್‍ಯಾರು ಕಾರಣರಲ್ಲ. ಎಂದಿನಂತೆ ಮುಕ್ತವಾದ ವಾತಾವರಣದಲ್ಲಿ ಸಾರ್ವಜನಿಕರು ಮತ್ತು ಹಿರಿಯ ನಾಗರಿಕರು ವಾಯುವಿಹಾರ ಮಾಡಲು ಅವಕಾಶ ಕಲ್ಪಿಸುವಂತೆ ಒತ್ತಾಯಿಸಿ ನಾಳೆ ಬೆಳಗ್ಗೆ 6.30ರಿಂದ 7 ಗಂಟೆವರೆಗೆ ಮಾನಸಗಂಗೋತ್ರಿಯ ಮುಖ್ಯ ದ್ವಾರದ ಕುವೆಂಪು ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಪತ್ರದಲ್ಲಿ ತಿಳಿಸಿದ್ದು, ನಾಗರಿಕರ ಹಕ್ಕನ್ನು ಮೊಟಕುಗೊಳಿಸಬಾರದು ಎಂದು ಒತ್ತಾಯಿಸಿದ್ದಾರೆ.


ನಿಧನ



ಎಂ.ಆರ್. ಶ್ವೇತಾ

ಮೈಸೂರು, ನ. 11–ಮೈಸೂರಿನ ಪೊಲೀಸ್ ಲೇಔಟ್ ನಿವಾಸಿ ನಾಗೇಂದ್ರಕುಮಾರ್ ಅವರ ಪತ್ನಿ ಎಂ.ಆರ್. ಶ್ವೇತಾ (37) ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ, ಪುತ್ರಿ ಕೀರ್ತಿ, ತಾಯಿ ವಿಜಯಲಕ್ಷ್ಮಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗಾಂಧಿನಗರದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.11.2022 ಶನಿವಾರ, ಮಳೆ ನಕ್ಷತ್ರ: ವಿಶಾಖ, 08.11.2022 ರಿಂದ 19.11.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ,
ತಿಥಿ: ಚತುರ್ಥೀ, ನಕ್ಷತ್ರ : ಆರಿದ್ರಾ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.30 ಕವಿನುಡಿ ಸವಿನುಡಿ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 6.35 ಋಷಿ ಮನೀಷಿಗಳು–ಲೇಖನ ದಾ. ಶ್ರೀರಾಮ್ ಭಟ್, ಪ್ರಸ್ತುತಿ– ದಿವಾಕರ ಹೆಗಡೆ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ–ಅನೂರಾಧ ಕಟ್ಟಿ, 9.00 ಕನ್ನಡ ಕಜ್ಜಾಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಬಿ. ನಿಂಗಮ್ಮ ಮತ್ತು ತಂಡ , 1.20 ಭಾವಗೀತೆ–ಎಸ್.ಜಿ. ರಘುರಾಂ, 3.30 ಮಕ್ಕಳ ಮಂಟಪ–ಚಾಮರಾಜ ನಗರ ಮೆಲ್ಲಹಳ್ಳಿಯ ಆದರ್ಶ ವಿದ್ಯಾಲಯದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ, 4.30 ನೆನಪಿನಂಗಳ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–"ತೋರಣ ಹೂರಣ", ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.15 ಬೆಳ್ಳಿತೆರೆಯ ಕನ್ನಡ ಬೆಳೆದು ಬಂದದ್ದು ಹೇಗೆ? ಎ.ವಿ. ಸೂರ್ಯನಾರಾಯಣ ಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು– ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ನೀತಾ ಮಾಥುರ್–ಗಾಯನ, ಪಂಡಿತ್ ರಾಧೇಯ್ ಶ್ಯಾಮ್ ಶರ್ಮ –ಫಖಾವಾಜ್ ಸೋಲೋ, 10.30 ಸವಿನೆನಪು

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಶ್ವವಾಯು ಪೀಡಿತರಿಗೆ ಚಿಕಿತ್ಸೆ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಲಲಿತ ಮಹಲ್ ಹೆಲಿಪ್ಯಾಡ್ ಬಳಿ, ಆಲನಹಳ್ಳಿ, ಬೆಳಗ್ಗೆಯಿಂದ.

■ **ರೋಟರಿ ಕ್ಲಬ್ ಮೈಸೂರು ಪಶ್ಚಿಮ :** ರಿಫ್ಲೆಕ್ಸೊಲೊಜಿ, ಸುಜೋಕ್ ಮ್ಯಾಗ್ನೆಟ್ ಮತ್ತು ವೈಬ್ರೇಶನ್ ತೆರಪಿ ಚಿಕಿತ್ಸಾ ಶಿಬಿರ, ಸ್ಥಳ: ರೋಟರಿ ವೆಸ್ಟ್ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9 ರಿಂದ.

■ **ಸದ್ವಿದ್ಯಾ ಪ್ರೌಢಶಾಲೆ :** ಮೈಸೂರು ನಗರ ಮಟ್ಟದ ಅಂತರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢಶಾಲಾ ಶ್ರೀಮದ್ಭಗವದ್ಗೀತಾ ಕಂಠಪಾಠ ಸ್ಪರ್ಧೆ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಉದ್ಘಾಟನೆ : ಗೌರವ ಸಹ ಕಾರ್ಯದರ್ಶಿ ಪ್ರೊ. ಕೆ.ಎಸ್. ಹಿರಿಯಣ್ಣ, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ :** ರಾಷ್ಟ್ರೀಯ ಆಯುರ್ವೇದ ದಿನಾಚರಣೆ, ಸಾನ್ನಿಧ್ಯ : ಆರ್ಕಧಾಮ ಸ್ಥಾಪಕ ಶ್ರೀ ಶ್ರೀನಿವಾಸ ಆರ್ಕ ಗುರೂಜಿ, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಗೌರವ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಜಿ. ಹೇಮಂತಕುಮಾರ್, ಮುಖ್ಯ ಅತಿಥಿಗಳು : ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್. ಹೆಗ್ಡೆ, ಆಯುಷ್ ನಿವೃತ್ತ ಜಂಟಿ ನಿರ್ದೇಶಕ ಎನ್. ಆಂಜನೇಯಮೂರ್ತಿ, ಜಿಲ್ಲಾ ಆಯುಷ್ ಅಧಿಕಾರಿ ಡಾ. ಪುಷ್ಪಾ, ಆಯುರ್ವೇದ ಅಕಾಡೆಮಿ ಜಂಟಿ ಕಾರ್ಯದರ್ಶಿ ಡಾ. ಪ್ರಶಾಂತ್ ಗೋಖಲೆ, ಕೇಂದ್ರದ ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಸೆಮಿನಾರ್ ಹಾಲ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ, ಬೆಳಗ್ಗೆ 9.30ಕ್ಕೆ.

■ **ಆಶಾ ಕಿಸಾನ್ ಸ್ವರಾಜ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ :** ಕಿಸಾನ್ ಸ್ವರಾಜ್ ಸಮ್ಮೇಳನ, ಸ್ಥಳ: ಮುಕ್ತ ವಿವಿ ಘಟಿಕೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಸುರಭಿ ಗಾನಕಲಾ ಮಂದಿರ ಚಾರಿಟಬಲ್ ಟ್ರಸ್ಟ್ :** ವಿದುಷಿ ಡಾ. ಸುಕನ್ಯಾ ಪ್ರಭಾಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಶಿಬಿರ, ಸ್ಥಳ: 510, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4.30ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ನಮ್ಮನ್ನು ನಾವು ಅರ್ಥ ಮಾಡಿಕೊಳ್ಳುವುದು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ–73, ತಿಂಗಳ ಸಾಧಕರು ಕನ್ನಡ ಪರ ಚಳುವಳಿಯ ಹಿರಿಯ ಹೋರಾಟಗಾರ ಮೈ.ನಾ. ಗೋಪಾಲಕೃಷ್ಣ, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ಕನ್ನಡ ವೇದಿಕೆ :** ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ದ.ರಾ. ಬೇಂದ್ರೆ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ, ಪ್ರಧಾನ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಎಂ.ಸಿ. ಚೌಂದಮ್ಮ, ನಾಲಾ ಬೀದಿ ರವಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಸುಬ್ಬರಾಯನಕೆರೆ, ಬೆಳಗ್ಗೆ 11.30ಕ್ಕೆ.

■ **ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ :** ಶ್ರೀ ಭಕ್ತ ಕನಕದಾಸರ 535ನೇ ಜಯಂತ್ಯೋತ್ಸವ, ಸಾನ್ನಿಧ್ಯ : ಶ್ರೀಕಾಗಿನೆಲೆ ಕನಕ ಗುರುಪೀಠ ಶಾಖಾ ಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಅಧ್ಯಕ್ಷತೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಉದ್ಘಾಟನೆ : ವಿಧಾನಪರಿಷತ್ ಸದಸ್ಯರಾದ ಎ.ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಮುಖ್ಯ ಅತಿಥಿಗಳು : ಮಾಜಿ ಸಂಸದ ಸಿ.ಹೆಚ್. ವಿಜಯಶಂಕರ್, ಶಾಸಕರಾದ ತನ್ವೀರ್ ಸೇಠ್, ಯತೀಂದ್ರ ಸಿದ್ದರಾಮಯ್ಯ, ಮಾಜಿ ಸಂಸದ ಆರ್. ಧ್ರುವನಾರಾಯಣ್, ಮಾಜಿ ಶಾಸಕ ವಾಸು, ಜಿಪಂ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಮಾಜಿ ಮೇಯರ್‌ಗಳಾದ ನಾರಾಯಣ್, ಅರೀಫ್ ಹುಸೇನ್, ಅನಂತು, ಸ್ಥಳ: ಕನಕ ಭವನ, ಸಿದ್ಧಾರ್ಥನಗರ, ಬೆಳಗ್ಗೆ 10ಕ್ಕೆ

■ **ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಮತ್ತು ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಆಫ್ ಕರ್ನಾಟಕ ಹಾಗೂ ಮೈಸೂರು ಅಥ್ಲೆಟಿಕ್ಸ್ ಕ್ಲಬ್ :** 42ನೇ ಕರ್ನಾಟಕ ರಾಜ್ಯ ಮಟ್ಟದ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್, ಉದ್ಘಾಟನೆ : ಶಾಸಕ ಎಲ್. ನಾಗೇಂದ್ರ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಅಸೋಸಿಯೇಷನ್ ಅಧ್ಯಕ್ಷೆ ಶ್ರೀಮತಿ ಸುಮನ ನರಸಿಂಹಮೂರ್ತಿ, ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಅಧ್ಯಕ್ಷ ಹಾಗೂ ಮಾಜಿ ಶಾಸಕ ವಾಸು, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಡೇವಿಡ್ ಪ್ರೇಮ್‌ನಾಥ್, ಮೈಸೂರು ವಿವಿ ದೈಹಿಕ ಶಿಕ್ಷಣ ಇಲಾಖೆ ನಿವೃತ್ತ ನಿರ್ದೇಶಕ ಡಾ. ಸಿ. ಕೃಷ್ಣ, ಮೈಸೂರು ವಿವಿ ದೈಹಿಕ ಶಿಕ್ಷಣ ಇಲಾಖೆ ನಿರ್ದೇಶಕ ಪಿ. ಕೃಷ್ಣಯ್ಯ, ಸ್ಥಳ: ಮೈಸೂರು ವಿಶ್ವವಿದ್ಯಾನಿಲಯ ಓವಲ್ ಮೈದಾನ, ಡಿಸಿ ಆಫೀಸ್ ಹತ್ತಿರ, ಬೆಳಗ್ಗೆ 10ಕ್ಕೆ.

■ **ಮಹಾರಾಜ ಸರ್ಕಾರಿ ಪದವಿಪೂರ್ವ ಕಾಲೇಜು :** ವಾರ್ಷಿಕ ವಿಶೇಷ ಶಿಬಿರ, ಉಪನ್ಯಾಸ ಸಿ. ಕೃಷ್ಣೇಗೌಡ ಅವರಿಂದ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಎನ್. ಉದಯಶಂಕರ್, ಸ್ಥಳ: ಶ್ರೀ ಗಣೇಶಪುರಿ ನಿತ್ಯಾನಂದ ಆಶ್ರಮ, ಚಾಮುಂಡಿಬೆಟ್ಟದ ಪಾದ, ಮಧ್ಯಾಹ್ನ 4.30ಕ್ಕೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಶ್ರೀ ನಿರಂಜನ ಮಠ ಹೋರಾಟ ಸಮಿತಿ :** ದತ್ತಿ ಕಾರ್ಯಕ್ರಮ, ಉದ್ಘಾಟನೆ : ಬಿರ್ಲಾ ಕಂಪನಿ ಜನರಲ್ ಮ್ಯಾನೇಜರ್ ಎಂ.ಚಿನ್ನಸ್ವಾಮಿ, ಉಪನ್ಯಾಸಕ ದೇವರಾಜ ಪಿ. ಚಿಕ್ಕಳ್ಳಿ ಅವರಿಂದ ಷಟ್‌ಸ್ಥಲ–ಒಂದು ಚಿಂತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಮ.ಗು. ಸದಾನಂದಯ್ಯ, ಉಪಸ್ಥಿತರು : ಬಸವ ಸಮಿತಿ ಅಧ್ಯಕ್ಷ ಹಿನಕಲ್ ಬಸವರಾಜ, ವೈ.ಬಿ. ಪ್ರಭುಸ್ವಾಮಿ, ಶ್ರೀಮತಿ ಪಾರ್ವತಮ್ಮ, ಪಿ.ಎಸ್. ಚಂದ್ರಣ್ಣ, ಸ್ಥಳ: ಶ್ರೀ ನಿರಂಜನ ಮಠದ ಆವರಣ, ದೇವರಾಜ ಮೊಹಲ್ಲಾ, ಸಂಜೆ 5ಕ್ಕೆ.

■ **ಭೂಷಣ್ಸ್ ಪ್ರದರ್ಶಕ ಕಲೆಗಳು ಮತ್ತು ದೃಶ್ಯ ಪ್ರಸ್ತುತಿ ಕೇಂದ್ರ :** ರಾಷ್ಟ್ರೀಯ ನೃತ್ಯೋತ್ಸವ, ಉದ್ಘಾಟನೆ : ಬೊಂಬೆ ಮನೆ ರೂವಾರಿ ಆರ್.ಜಿ. ಸಿಂಗ್, ಚೆನ್ನೈನ ಶ್ರೀಮತಿ ರೋಜಾ ಕಣ್ಣನ್ ತಂಡದಿಂದ ತ್ಯಾಗ ರಹಸ್ಯ ಕಾರ್ಯಕ್ರಮ, ಬಾಲಕದ್ವಯರಾದ ಅಭ್ಯುದಯ ಧ್ಯಾನ್ ಭೂಷಣ್, ಅಭಿಜ್ಞಾನ ವೇದಾಂತ ಭೂಷಣ್ ಅವರು ತಮ್ಮ ತಾಯಿ ಅಂಜನಾರೊಂದಿಗೆ ಭರತನಾಟ್ಯ ಪ್ರದರ್ಶನ, ಕೂಚಿಪುಡಿ ಕಲಾವಿದೆ ಶ್ರೀಮತಿ ದೀಪ ಶಶಿಂಧ್ರನ್ ಮತ್ತು ಬೆಂಗಳೂರಿನ ಕೂಚಿಪುಡಿ ಪರಂಪರ ಫೌಂಡೇಷನ್ ಕಲಾವಿದರಿಂದ ನಂದನಾರ್ ಚರಿತಂ ಕಾರ್ಯಕ್ರಮ, ಸ್ಥಳ:ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಸಂಜೆ 6 ರಿಂದ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ವಿದುಷಿ ಅರ್ಚನ ಕೋವಿಲಾಡಿ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಮೋಹನ್ ಕೇಶವ–ಪಿಟೀಲು, ವಿದ್ವಾನ್ ಪವನ್ ಮಸೂರ್–ಮೃದಂಗ, ವಿದ್ವಾನ್ ಎಸ್. ಮಂಜುನಾಥ್–ಘಟಂ, ಸ್ಥಳ: ಸಂಗೀತ ಕಲಾನಿಧಿ ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಶ್ರೀ ಸುತ್ತೂರು ಕ್ಷೇತ್ರ

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ವತಿಯಿಂದ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಶ್ರೀ ಸುತ್ತೂರು ಕ್ಷೇತ್ರ, ಬೆಳಗ್ಗೆಯಿಂದ.


ದಾಸ ಶ್ರೇಷ್ಠರಾದ ಕನಕದಾಸರ ಜಯಂತಿ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿ ಕನಕದಾಸರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು.


ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಬೆಂಗಳೂರಿನ ಶಾಸಕರ ಭವನದ ಆವರಣದಲ್ಲಿ ವಾಲ್ಮೀಕಿ ಮಹರ್ಷಿಗಳ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು.


ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರ ಲೋಕಾರ್ಪಣೆ ಮಾಡಿದರು.


ಪ್ರಧಾನಿ ಮೋದಿ ಅವರು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ವೀರವನಿತೆ ಒನಕೆ ಓಬವ್ವ ಅವರಿಗೆ ಗೌರವ ಪುಷ್ಪ ನಮನ ಸಲ್ಲಿಸಿದರು.

ಒಂದನೇ ಪುಟದಿಂದ

ನಾಡಪ್ರಭು ಕೆಂಪೇಗೌಡರ ಕಲ್ಪನೆಯಂತೆ ಅಭಿವೃದ್ಧಿ

ಸರ್ಕಾರ ಬದ್ಧವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು.

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಂದು ಟರ್ಮಿನಲ್-2 ಹಾಗೂ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಭವ್ಯ 'ಪ್ರಗತಿಯ ಪ್ರತಿಮೆ' ಲೋಕಾರ್ಪಣೆ ನಂತರ ನಡೆದ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು ವಾಣಿಜ್ಯ, ಸಂಸ್ಕೃತಿ, ಪರಂಪರೆ, ಆಡಳಿತದ ಸಮರ್ಪಕ ಸಂಯೋಜನೆಯಿಂದ ಕೆಂಪೇಗೌಡರು, ಭವ್ಯ ನಗರ ನಿರ್ಮಾಣಕ್ಕೆ ಬುನಾದಿ ಹಾಕಿದರು.

ಇಂದು ಆಡಳಿತ, ವ್ಯಾಪಾರದ ರೂಪುರೇಷೆ ಬದಲಾದರೂ ಕೂಡ ಬೆಂಗಳೂರಿನ ಆರ್ಥಿಕತೆ ನಿರಂತರವಾಗಿ ಅಭಿವೃದ್ಧಿಯಾಗುತ್ತಲೇ ಸಾಗಿದೆ. ಭಾರತದ ಮೊದಲ ಮೇಕ್ ಇನ್ ಇಂಡಿಯಾ ವಂದೇ ಭಾರತ್ ರೈಲು ಕರ್ನಾಟಕದಿಂದ ಲೋಕಾರ್ಪಣೆ ಗೊಂಡಿರುವುದು ಸಂತಸ ತಂದಿದೆ ಎಂದರು.

ಇಲ್ಲಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರುವ ಟರ್ಮಿನಲ್-2 ಸಾಮಾಜಿಕ ಜಾಲತಾಣಗಳು ಹಾಗೂ ಭಾವಚಿತ್ರಗಳಲ್ಲಿರುವುದಕ್ಕಿಂತಲೂ ಸುಂದರವಾಗಿದೆ. ಈ ನಾಡಿನ ಜನರ ಹಳೆಯ ಬೇಡಿಕೆ ಈಗ ಈಡೇರಿದೆ. ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಭವ್ಯ ಕಂಚಿನ 'ಪ್ರಗತಿಯ ಪ್ರತಿಮೆ' ಲೋಕಾರ್ಪಣೆ ಮಾಡಿ, ಅವರ ಪಾದಗಳಿಗೆ ಜಲಾಭಿಷೇಕ ಮಾಡುವ ಅವಕಾಶ ದೊರೆತಿರುವುದು ತಮ್ಮ ಪಾಲಿನ ಸೌಭಾಗ್ಯವಾಗಿದೆ ಎಂದರು.

ಭಾರತವನ್ನು ಸಶಕ್ತಗೊಳಿಸಲು ಸ್ಟಾರ್ಟ್ ಅಪ್‌ಗಳು ರಹದಾರಿಯಾಗಿವೆ. ಬೆಂಗಳೂರು ಸ್ಟಾರ್ಟ್ ಅಪ್ ಯೋಜನೆಗಳ ಸ್ಫೂರ್ತಿಯ ಚಿಲುಮೆಯಾಗಿದೆ. ಯುವಶಕ್ತಿ, ಯುವ ಭಾರತದ ಪ್ರತಿಬಿಂಬ ಬೆಂಗಳೂರು ಎಂದು ಹಾಡಿ ಹೊಗಳಿದರು.

ಕರ್ನಾಟಕಕ್ಕೆ ಬಂಡವಾಳದ ಮಹಾಪೂರವೇ ಹರಿದು ಬರುತ್ತಿದೆ. ಅದರಲ್ಲೂ ವಿದ್ಯುತ್ ಚಾಲಿತ ವಾಹನಗಳ ಉತ್ಪಾದನೆಯಲ್ಲಿ ಈ ರಾಜ್ಯ ಮುಂದಿದೆ. ವೇಗ ಹೆಚ್ಚಾದಂತೆ ಅಭಿವೃದ್ಧಿಯೂ ವಿಸ್ತಾರವಾಗಿ ಹೋಗುತ್ತದೆ. ಆ ನಿಟ್ಟಿನಲ್ಲಿ ರಾಜ್ಯ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಶ್ಲಾಘಿಸಿದರು.

ವಂದೇ ಭಾರತ್ ಕೇವಲ ರೈಲು ಮಾತ್ರವಲ್ಲ ಅದು ನವಭಾರತ ನಿರ್ಮಾಣದ ಪ್ರತೀಕ. ಈ ಹಿಂದೆ ಭಾರತದ ರೈಲುಗಳು ನಿಧಾನಗತಿಯಲ್ಲಿ ಚಲಿಸುತ್ತಿದ್ದವು ಈಗ ಅವುಗಳು ಶಕ್ತಿಯಿಂದ ಓಡುತ್ತಿವೆ. ಹೊಸ ವಂದೇ ಭಾರತ್ ರೈಲುಗಳು ಭಾರತೀಯ ರೇಲ್ವೆಗೆ ಹೊಸ ಆಯಾಮ ನೀಡಿವೆ. ಸರಕು, ಸಾಗಣೆಗೆ ಅರ್ಪಿತವಾದ ಪ್ರತ್ಯೇಕ ಮಾರ್ಗ ನಿರ್ಮಿಸಲಾಗುತ್ತಿದೆ. ಹೊಸ ಹೊಸ ವಲಯಗಳನ್ನು ರೈಲು ಸಂಪರ್ಕಿಸುತ್ತಿವೆ. ಬೆಂಗಳೂರಿನಲ್ಲಿ ದೇಶದ ಮೊದಲ ಹವಾನಿಯಂತ್ರಿತ ಸರ್.ಎಂ.ವಿಶ್ವೇಶ್ವರಯ್ಯ ರೈಲು ನಿಲ್ದಾಣ ನಿರ್ಮಾಣವಾಗುತ್ತಿದೆ. ಯಶವಂತಪುರ ಹಾಗೂ ಕಂಟೋನ್ಮೆಂಟ್ ರೈಲು ನಿಲ್ದಾಣಗಳ ಸಮಗ್ರ ಸುಧಾರಣೆಗೆ ಒತ್ತು ನೀಡಲಾಗಿದೆ ಎಂದರು.





ವೈಮಾನಿಕ ಸಂಪರ್ಕಜಾಲವು ವಿಸ್ತಾರವಾಗುತ್ತಿದೆ. ವಿಮಾನಯಾನ ಮಾರುಕಟ್ಟೆಯಲ್ಲಿ ಭಾರತವು ಜಗತ್ತಿನಲ್ಲಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. 2014 ರ ಪೂರ್ವದಲ್ಲಿ ದೇಶದಲ್ಲಿ 70 ವಿಮಾನ ನಿಲ್ದಾಣಗಳಿದ್ದವು ಈಗ ಅವು ದುಪ್ಪಟ್ಟಾಗಿದೆ. ಪ್ರಧಾನ ಮಂತ್ರಿ ಗತಿ ಶಕ್ತಿ, ಪಿಎಂ ಸ್ವನಿಧಿ, ಪಿಎಂ ಕಿಸಾನ್ ಸಮ್ಮಾನ್, ಆಯುಷ್ಮಾನ್ ಭಾರತ ಆರೋಗ್ಯ ಕರ್ನಾಟಕ ಸೇರಿದಂತೆ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ದೇಶ ಹಾಗೂ ರಾಜ್ಯದ ಪ್ರಗತಿಯನ್ನು ನಾಡಿನ ಜನರ ಮುಂದೆ ವಿವರಿಸಿದರು.

ಉದ್ದೇಶಿತ ರಾಷ್ಟ್ರೀಯ ಲಾಜಿಸ್ಟಿಕ್ ನೀತಿಯು ಸಾರಿಗೆ ವೆಚ್ಚ ಕಡಿಮೆಗೊಳಿಸಿ, ಹೊಸತನ, ಅನ್ವೇಷಣೆಗೆ ದಾರಿ ಮಾಡಿಕೊಡಲಿದೆ. ಭೌತಿಕ ಮೂಲಸೌಕರ್ಯಗಳ ಅಭಿವೃದ್ಧಿಯೊಂದಿಗೆ ಸಾಮಾಜಿಕ ಮೂಲ ಸೌಕರ್ಯಗಳ ವಿಕಸನಕ್ಕೂ ಕರ್ನಾಟಕದ ಡಬಲ್ ಇಂಜಿನ್ ಸರ್ಕಾರ ಆದ್ಯತೆ ನೀಡಿದೆ.

ಭಗವದ್ ಶಕ್ತಿ ಹಾಗೂ ಸಾಮಾಜಿಕ ಶಕ್ತಿಯ ಜೋಡಣೆಯ ಪ್ರೇರಣೆ ಸಂತ ಕನಕದಾಸರಿಂದ ದೊರೆತಿದೆ.ಶ್ರೀಕೃಷ್ಣನ ಭಕ್ತರಾಗಿದ್ದ ಅವರು "ಕುಲ ಕುಲವೆಂದು ಹೊಡೆದಾಡದಿರಿ" ಎಂದು ಸಹಬಾಳ್ವೆಯ ಸಂದೇಶ ಸಾರಿದರು. ರಾಮಧ್ಯಾನ ಚರಿತೆ ಕೃತಿಯ ಮೂಲಕ ರಾಗಿಯ ಮಹತ್ವದ ಜೊತೆಗೆ ಸಿರಿಧಾನ್ಯಗಳು ಹಾಗೂ ಸಾಮಾಜಿಕ ಸಂದೇಶ ಹಾಗೂ ವೀರ ವನಿತೆ ಒನಕೆ ಓಬವ್ವನ ಸಾಹಸ ಮನೋಭಾವವನ್ನು ಪ್ರಧಾನಿ ಪ್ರಶಂಸಿಸಿದರು.

ಕೆಂಪೇಗೌಡರ ವಿಚಾರಧಾರೆ ಹಾದಿಯಲ್ಲಿ ಸಾಗುವ ಸಂಕಲ್ಪ

ಪ್ರಧಾನಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೆಂಪೇಗೌಡರ ವಿಚಾರಧಾರೆಯ ಹಾದಿಯಲ್ಲಿ ನಡೆಯುವ ಸಂಕಲ್ಪ ಮಾಡಲಾಗಿದೆ ಎಂದರು.

ಇಂದು ಕರ್ನಾಟಕದ ಅಭಿವೃದ್ಧಿ ಪಥದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿರುವ ದಿನವಾಗಿದೆ. ನಾಡಿಗೆ ಶ್ರೇಷ್ಠ ಸಂತರಾದ ಕನಕದಾಸರ ಜಯಂತಿ, ಮಹರ್ಷಿ ವಾಲ್ಮೀಕಿಯವರಿಗೆ ಹಾಗೂ ನಾಡಿನ ಸಂರಕ್ಷಣೆಗೆ ಜೀವತೆತ್ತ ವೀರ ವನಿತೆ ಒನಕೆ ಓಬವ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ನಾಡಿನ ಜನರ ಭಾವನೆಗಳಿಗೆ ಗೌರವ ಸಲ್ಲಿಸಿದ್ದಾರೆ. ಬೆಂಗಳೂರು, ಮೈಸೂರು ಚೆನ್ನೈಯನ್ನು ಸಂಪರ್ಕಿಸುವ ವಂದೇ ಭಾರತ್ ರೈಲಿಗೆ ಹಸಿರು ನಿಶಾನೆ ತೋರಿಸಲಾಗಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾಣ ನಿಲ್ದಾಣದ ಟರ್ಮಿನಲ್-2ಕ್ಕೆ ಚಾಲನೆ ನೀಡಲಾಗಿದ್ದು, ಇದು ದೇಶದ ಎರಡನೇ ಅತೀ ದೊಡ್ಡ ವಿಮಾನ ನಿಲ್ದಾಣವಾಗಿದೆ. ಇದಕ್ಕಾಗಿ ಸಮಸ್ತ ಕನ್ನಡ ನಾಡಿನ ಜನತೆಯ ಪರವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ ಎಂದರು. ನಾಡಪ್ರಭು ಕೆಂಪೇಗೌಡರು, ವಿಜಯ ನಗರ ಸಾಮ್ರಾಜ್ಯದ ಸುವರ್ಣಯುಗದ ದರ್ಶನವನ್ನು ಬೆಂಗಳೂರಿನ ಸುತ್ತಮುತ್ತಲಿನ ಗ್ರಾಮಗಳಿಗೆ ಮಾಡಿಸಿದ್ದಾರೆ. ಕೆಂಪೇಗೌಡರ ದೂರದೃಷ್ಟಿಯಿಂದ ಬೆಂಗಳೂರು ಇಂದು ಅಂತರರಾಷ್ಟ್ರೀಯ ನಗರವಾಗಿ ಬೆಳೆದಿದೆ. ಯೋಜನಾಬದ್ಧ ನಗರ ನಿರ್ಮಿಸಿ, ಹಲವು ಕೆರೆಕಟ್ಟೆಗಳು, ಪೇಟೆಗಳನ್ನು ನಿರ್ಮಿಸುವ ಮೂಲಕ ಜನ ನೆಮ್ಮದಿಯ ಜೀವನ ಬದುಕುವಂತೆ ಮಾಡಿದ್ದಾರೆ. ನಾಡಪ್ರಭು ಕೆಂಪೇಗೌಡರಿಗೆ ಗೌರವ ಸಲ್ಲಿಸುವ ಮುಖಾಂತರ ನಾಡಿನ ಸಂಸ್ಕೃತಿ, ಇತಿಹಾಸ ಪರಂಪರೆ, ಪ್ರಗತಿಪರ ಚಿಂತನೆಗೆ ಗೌರವ ಸಲ್ಲಿಸಿದಂತಾಗಿದೆ. ಗುಜರಾತಿನಲ್ಲಿ ಏಕತೆಯ ಪ್ರತಿಮೆಯಿದ್ದರೆ, ರಾಜ್ಯದ ಸರದಾರ ಕೆಂಪೇಗೌಡರ ಪ್ರಗತಿಯ ಪ್ರತಿಮೆಯನ್ನು ಉದ್ಘಾಟಿಸಲಾಗಿದೆ ಎಂದರು.

ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಆಧುನಿಕ ಭಾರತದ ವಿಕಾಸ ಪುರುಷರು. ದೇಶದ ಹತ್ತು-ಹಲವಾರು ಸವಾಲುಗಳನ್ನು ಬಗೆಹರಿಸಿ ಬಲಿಷ್ಠ ಭಾರತವನ್ನು ಕಟ್ಟಿ, ಆತ್ಮನಿರ್ಭರ ಭಾರತ ನಿರ್ಮಾಣದ ಸಂಕಲ್ಪದೊಂದಿಗೆ ಅಭಿವೃದ್ಧಿಯಲ್ಲಿ ಎಲ್ಲರಿಗೂ ಅವಕಾಶ ಕೊಟ್ಟು, ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಬಹಳ ಎತ್ತರಕ್ಕೆ ಕೊಂಡೊಯ್ದಿದ್ದಾರೆ. ಇಡೀ ವಿಶ್ವದಲ್ಲಿ ಆರ್ಥಿಕ ಹಿಂಜರಿತವಿದ್ದ ಸಂದರ್ಭದಲ್ಲಿ ಭಾರತ ಆರ್ಥಿಕವಾಗಿ ಬಲಿಷ್ಠಗೊಳ್ಳುತ್ತಿದ್ದರೆ, ಅದಕ್ಕೆ ಪ್ರಧಾನಿ ಮೋದಿಯವರ ಯೋಜನೆಗಳೇ ಕಾರಣ. ಒಬ್ಬ ವಿಕಾಸಪುರುಷ ದಾರಿಯಲ್ಲಿ ನವ ಭಾರತ ನಿರ್ಮಾಣ ಮಾಡುತ್ತಿರುವವರ ಕೈಯಿಂದ ಕೆಂಪೇಗೌಡರ ಮೂರ್ತಿ ಅನಾವರಣ ಮಾಡಿರುವುದು ದೈವೇಚ್ಛೆಯಾಗಿದೆ ಎಂದರು.

ನಿರ್ಮಲಾನಂದನಾಥ ಶ್ರೀಗಳ ಹೆಗಲ ಮೇಲೆ ಕೈ ಇಟ್ಟು ಫೋಟೋಗೆ ಪೋಸ್

ಸಚಿವ ಅಶೋಕ್ ನಡೆಗೆ ತೀವ್ರ ಖಂಡನೆ



ಬೆಂಗಳೂರು, ನ.11- ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡ ಪ್ರತಿಮೆಯ ಉದ್ಘಾಟನೆ ಕಾರ್ಯಕ್ರಮದ ಬಳಿಕ ಪ್ರಧಾನಿ ಮೋದಿ ಅವರೊಂದಿಗೆ ಫೋಟೋಗೆ ಪೋಸ್ ನೀಡುವಾಗ ಕಂದಾಯ ಸಚಿವ ಅಶೋಕ್ ಅವರು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಶ್ರೀಗಳ ಹೆಗಲ ಮೇಲೆ ಕೈ ಇಟ್ಟಿದ್ದು ಈಗ ವಿವಾದಕ್ಕೆ ಗುರಿಯಾಗಿದೆ.

ಸಚಿವ ಆರ್ ಅಶೋಕ್ ನಿರ್ಮಲಾನಂದನಾಥ ಶ್ರೀಗಳ ಹೆಗಲ ಮೇಲೆ ಕೈಯಿಟ್ಟಿರುವ ಫೋಟೋ ಈಗ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗತೊಡಗಿದೆ. ಸ್ವಾಮೀಜಿಗಳಿಗೆ ಅವರದ್ದೇ ಆದ ಗೌರವ ಇರುತ್ತದೆ. ಆದರೆ, ಅಶೋಕ್ ಸ್ವಾಮೀಜಿ ಗಳ ಹೆಗಲ ಮೇಲೆ ಕೈಇಟ್ಟುಕೊಂಡು ಫೋಟೋಗೆ ಪೋಸ್ ನೀಡಿ ನಿಂತಿರುವುದು ಶ್ರೀಗಳಿಗೆ ಮಾಡಿದ ಅವಮಾನ ಎಂದು ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಫೋಟೋವನ್ನು ವಿಪಕ್ಷಗಳು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಲು ಗುರಿಯಾಗಿಸಿಕೊಂಡಿದ್ದು, 'ಬಿಜೆಪಿ ನಾಯಕರೇ ಸ್ವಾಮೀಜಿಗಳಿಗೆ ನೀವು ನೀಡುವ ಗೌರವ ಇದೇನಾ?' ಎಂದು ಪ್ರಶ್ನಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್, ಸಚಿವ ಆರ್.ಅಶೋಕ್ ನಡವಳಿಕೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದು, ಹೆಗಲ ಮೇಲೆ ಕೈ ಹಾಕುವಷ್ಟು ಆದಿಚುಂಚನಗಿರಿ ಶ್ರೀಗಳು, ಆರ್.ಅಶೋಕ್ ಅವರಿಗೆ ಸದರ ಎನಿಸಿದ್ದಾರೆಯೇ, ಇದೇ ರೀತಿ ಮೋದಿ ಹೆಗಲಿಗೆ ಕೈ ಹಾಕುವ ಧೈರ್ಯವಿದೆಯೇ, ಧರ್ಮ, ಸಂಸ್ಕೃತಿಯ ಬಗ್ಗೆ ಮಾತಾಡುವ ಬಿಜೆಪಿಯ ನಾಯಕರಿಗೆ ಕನಿಷ್ಠ ಸಂಸ್ಕಾರದ ಜ್ಞಾನವಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಕೆಂಪೇಗೌಡರ ಮಾದರಿ ಪೇಟದಲ್ಲಿ ಕಂಗೊಳಿಸಿದ ಪ್ರಧಾನಿ ಮೋದಿ

ಬೆಂಗಳೂರು, ನ.11- ಪ್ರಧಾನಿ ನರೇಂದ್ರ ಮೋದಿಯವರು ನಾಡಪ್ರಭು ಕೆಂಪೇಗೌಡರು ಧರಿಸುತ್ತಿದ್ದ ಮಾದರಿಯ ಪೇಟ ತೊಟ್ಟು ಕಂಗೊಳಿಸಿದರು. ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ಭುವನಹಳ್ಳಿಯಲ್ಲಿ ಆಯೋಜಿಸಿದ್ದ ಬೃಹತ್ ಸಾರ್ವಜನಿಕ ಸಮಾವೇಶದಲ್ಲಿ ಕೆಂಪೇಗೌಡ ಪೇಟ ಧರಿಸಿ ಪ್ರಧಾನಿ ಮೋದಿ ಎಲ್ಲರ ಕೇಂದ್ರ ಬಿಂದುವಾಗಿದ್ದರು.

ಇಂದು ಮಧ್ಯಾಹ್ನ 12.30ಕ್ಕೆ ಸರಿ ಯಾಗಿ ಸಮಾವೇಶ ಆರಂಭವಾಯಿತು. ಸಮಾವೇಶದಲ್ಲಿ ಸಿಎಂ ಬಸವರಾಜ ಬೊಮ್ಮಾಯಿಯವರು ಆಕರ್ಷಕವಾದ ಕೆಂಬಣ್ಣದ ಕೆಂಪೇಗೌಡ ಪೇಟವನ್ನು ತೊಡಿಸಿ, ಶಾಲು ಹೊದಿಸಿ ಪ್ರಧಾನಿ ಮೋದಿ ಅವರನ್ನು ಸನ್ಮಾನಿಸಿದರು. ಇದೇ ವೇಳೆ ಮೋದಿಯವರಿಗೆ ಬೆಳ್ಳಿಯ ಕೆಂಪೇಗೌಡ ಪ್ರತಿಮೆಯನ್ನೂ ಮುಖ್ಯಮಂತ್ರಿಗಳು ಕೊಡುಗೆಯಾಗಿ ನೀಡಿದರು. ಬಳಿಕ ಸಮಾವೇಶ ಆರಂಭವಾಗಿ ಮೂವರು ಗಣ್ಯರು ಮಾತಾಡುವವರೆಗೂ ವೇದಿಕೆ ಮೇಲೆ ಕೆಂಪೇಗೌಡ ಪೇಟ ಧರಿಸಿಯೇ ಪ್ರಧಾನಿ ಮೋದಿ ಆಸೀನರಾಗಿದ್ದರು. ಈ ಸುಂದರ ಕೆಂಪೇಗೌಡ ಪೇಟವು ಮೋದಿಯವರನ್ನು ಸಮಾವೇಶದ ಕೇಂದ್ರಬಿಂದುವಾಗಿಸಿತ್ತು. ಕೆಂಪು ಬಣ್ಣದ ಕೆಂಪೇಗೌಡ ಪೇಟದಲ್ಲಿ ಕಂಗೊಳಿಸುತ್ತಿದ್ದ ಮೋದಿಯವರನ್ನು ಕಂಡು ಜನ ಕಣ್ತುಂಬಿಕೊಂಡು ಹರ್ಷೋದ್ಘಾರ ಮೊಳಗಿಸಿದರು.



ಮೈಸೂರಿನಲ್ಲಿ ತಯಾರಾದ ಕೆಂಪೇಗೌಡ ಪೇಟ: ಹಲವು ವಿಶೇಷತೆಗಳಿಂದ ಕೂಡಿರುವ ಕೆಂಪೇಗೌಡ ಪೇಟವು ಮೈಸೂರಿನಲ್ಲಿ ಸಿದ್ಧವಾಗಿದೆ. ಈ ಪೇಟವನ್ನು ಕೆಂಪೇಗೌಡರ ಪ್ರತಿಮೆಯಲ್ಲಿರುವ ಪೇಟದಂತೆಯೇ ವಿನ್ಯಾಸಗೊಳಿಸಲಾಗಿದೆ. ಮೈಸೂರಿನ ಕಲಾವಿದ ನಂದನ್ ಎಂಬವರು ತಯಾರಿಸಿರುವ ಪೇಟವಿದು. ಈ ಪೇಟದ ತಯಾರಿಗೆ ನಂದನ್ ಅವರು ಹತ್ತು ದಿನ ತೆಗೆದುಕೊಂಡಿದ್ದಾರಂತೆ. ಬನಾರಸ್ ರೇಷ್ಮೆ ಬಳಸಿ ಪೇಟವನ್ನು ತಯಾರಿಸಲಾಗಿದೆ. ಕೆಂಪು ಬಣ್ಣದ ಪೇಟದಲ್ಲಿ ರೇಷ್ಮೆ, ಗರಿ, ಮುತ್ತುಗಳನ್ನು ಸೇರಿಸಿ ಸೂಕ್ಷ್ಮ ಕುಸುರಿ ಕೆಲಸ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಈ ಥರದ ಪೇಟವನ್ನು ಮೋದಿಯವರಿಗಾಗಿ ಸಿದ್ಧಪಡಿಸಲಾಗಿದೆ.

ಪ್ರಧಾನಿ ಮೋದಿ ರಾಜ್ಯ ಭೇಟಿ; ಬಿಜೆಪಿಗೆ ಭರ್ಜರಿ ರಾಜಕೀಯ ಮೈಲೇಜ್

ಬೆಂಗಳೂರು ನ.11(ಕೆಎಂಶಿ)-ಪ್ರಧಾನಿ ನರೇಂದ್ರ ಮೋದಿ ಅವರ ಒಂದು ದಿನದ ಪ್ರವಾಸವನ್ನು ರಾಜ್ಯ ಬಿಜೆಪಿ ರಾಜಕೀಯವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಪ್ರಮುಖ ಜಾತಿಗಳನ್ನು ಓಲೈಕೆ ಮಾಡಿಕೊಳ್ಳಲೆಂದೇ ಪ್ರಧಾನಿ ಅವರ ಪ್ರವಾಸವನ್ನು ಸೀಮಿತಗೊಳಿಸಿತ್ತು.

ಪ್ರಬಲ ಸಮುದಾಯಗಳಾದ ಒಕ್ಕಲಿಗ, ಕುರುಬ, ನಾಯಕ ಹಾಗೂ ಛಲವಾದಿ ಸಮುದಾಯದ ಮತಗಳನ್ನು ಸೆಳೆದುಕೊಳ್ಳುವ ಉದ್ದೇಶಕ್ಕಾಗಿಯೇ ಪ್ರಧಾನಿ ಪ್ರವಾಸ ರೂಪಿಸಲಾಗಿತ್ತು.

ಪ್ರಧಾನಿ ನಗರಕ್ಕೆ ಬರುತ್ತಿದ್ದಂತೆ ಶಾಸಕರ ಭವನದ ಆವರಣದಲ್ಲಿರುವ ಕನಕದಾಸ ಹಾಗೂ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆಗಳಿಗೆ ಪುಷ್ಪಾರ್ಚನೆ ಮಾಡಿದರು. ಈ ಸಂದರ್ಭದಲ್ಲಿ ಆ ಸಮುದಾಯದ ಗುರುಗಳು ಉಪಸ್ಥಿತರಿದ್ದರು.

ತದನಂತರ ಮೈಸೂರು-ಬೆಂಗಳೂರು-ಚೆನ್ನೈ ವಂದೇ ಭಾರತ್ ಎಕ್ಸ್‌ಪ್ರೆಸ್ ಹಾಗೂ ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ್ ವಿಶೇಷ ರೈಲಿಗೆ ಚಾಲನೆ ನೀಡಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟರ್ಮಿನಲ್-2 ಉದ್ಘಾಟನೆಯೊಂದಿಗೆ ವಿಮಾನ ನಿಲ್ದಾಣದ ಸಮೀಪವೇ ನಿರ್ಮಾಣವಾಗಿರುವ 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡ ಪ್ರತಿಮೆ ಅನಾವರಣಗೊಳಿಸಿದರು.

ಪ್ರತಿಮೆ ಪಾದಗಳಿಗೆ ಜಲಾಭಿಷೇಕ ಮಾಡಿ ಗೌರವ ಸಲ್ಲಿಸಿ ಅಲ್ಲಿಂದ ನೇರವಾಗಿ ಸಾರ್ವಜನಿಕ ಸಮಾರಂಭ ವೇದಿಕೆಗೆ ಬರುತ್ತಿದ್ದಂತೆ ವೇದಿಕೆಯ ಬದಿಯಲ್ಲಿದ್ದ ಕೆಂಪೇಗೌಡರು, ಕನಕದಾಸರು, ಮಹರ್ಷಿ ವಾಲ್ಮೀಕಿ ಹಾಗೂ ಒನಕೆ ಓಬವ್ವ ಪಟಗಳಿಗೆ ಪುಷ್ಪಾರ್ಚನೆ ಮಾಡಿದರು.

ತಮ್ಮ ಭಾಷಣದಲ್ಲೂ ಕೆಂಪೇಗೌಡರ ಮಾದರಿಯಲ್ಲೇ ಸಾಮಾಜಿಕ ನ್ಯಾಯವನ್ನು ಕಲ್ಪಿಸುವಲ್ಲಿ ನಮ್ಮ ಡಬಲ್ ಇಂಜಿನ್ ಸರ್ಕಾರ ಬದ್ಧವಾಗಿದೆ ಎಂದು ಈ ಮಹನೀಯರ ಗುಣಗಾನ ಮಾಡಿದರು.

ಇಂದು ಮೈಸೂರಿಗೆ ವಂದೇ ಭಾರತ್ ಎಕ್ಸ್‌ಪ್ರೆಸ್

ವಂದೇ ಭಾರತ್ ಎಕ್ಸ್‌ಪ್ರೆಸ್

ಅಂತರ	ಛೇರ್ ಕಾರ್	ಎಕ್ಸಿಕ್ಯೂಟಿವ್ ಕಾರ್
ಚೆನ್ನೈ-ಮೈಸೂರು	1200 ರೂ.	2295 ರೂ.
ಚೆನ್ನೈ-ಬೆಂಗಳೂರು	995 ರೂ.	1885 ರೂ.
ಬೆಂಗಳೂರು-ಮೈಸೂರು	515 ರೂ.	985 ರೂ.
ಮೈಸೂರು-ಚೆನ್ನೈ	1365 ರೂ.	2485 ರೂ.
ಮೈಸೂರು-ಬೆಂಗಳೂರು	720 ರೂ.	1215 ರೂ.
ಬೆಂಗಳೂರು-ಚೆನ್ನೈ	940 ರೂ.	1835 ರೂ.

ಶತಾಬ್ದಿ ಎಕ್ಸ್‌ಪ್ರೆಸ್

ಅಂತರ	ಛೇರ್ ಕಾರ್	ಎಕ್ಸಿಕ್ಯೂಟಿವ್ ಕಾರ್
ಚೆನ್ನೈ-ಮೈಸೂರು	1135 ರೂ.	2280 ರೂ.
ಚೆನ್ನೈ-ಬೆಂಗಳೂರು	980 ರೂ.	1765 ರೂ.
ಬೆಂಗಳೂರು-ಮೈಸೂರು	315 ರೂ.	1030 ರೂ.
ಮೈಸೂರು-ಚೆನ್ನೈ	1355 ರೂ.	2385 ರೂ.
ಮೈಸೂರು-ಬೆಂಗಳೂರು	315 ರೂ.	925 ರೂ.
ಬೆಂಗಳೂರು-ಚೆನ್ನೈ	1130 ರೂ.	1975 ರೂ.

ಮೈಸೂರು, ನ.11- ಪ್ರಧಾನಿ ಮೋದಿ ಅವರು ವಿಧ್ಯುಕ್ತ ಚಾಲನೆ ನೀಡಿದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ನಾಳೆ(ನ.12) ಚೆನ್ನೈನಿಂದ ಮೈಸೂರಿಗೆ ಆಗಮಿಸಲಿದೆ. ಬೆಳಗ್ಗೆ 5.50ಕ್ಕೆ ಚೆನ್ನೈ ನಿಲ್ದಾಣದಿಂದ ಹೊರಟು ಬೆ.10.20ಕ್ಕೆ ಬೆಂಗಳೂರು ತಲುಪಲಿದೆ. ಅಲ್ಲಿಂದ 10.25ಕ್ಕೆ ಪ್ರಯಾಣ ಆರಂಭಿಸಿ, ಮಧ್ಯಾಹ್ನ 12.20ಕ್ಕೆ ಮೈಸೂರು ನಿಲ್ದಾಣಕ್ಕೆ ಆಗಮಿಸಲಿದೆ.

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಮೇಕ್ ಇನ್ ಇಂಡಿಯಾ ಯೋಜನೆಯ ಭಾಗವಾದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ದಕ್ಷಿಣ ಭಾರತದಲ್ಲಿ ಮೊದಲಿಗೆ ಬೆಂಗಳೂರು-ಚೆನ್ನೈ ನಡುವೆ ಇಂದಿನಿಂದ ಸಂಚಾರ ಆರಂಭಿಸಿದೆ. ಭಾರತದಲ್ಲಿ ಅತೀ ವೇಗದಲ್ಲಿ ಸಂಚರಿಸುವ ರೈಲು ಇದಾಗಿದೆ.



ಈ ಎಕ್ಸ್‌ಪ್ರೆಸ್ ರೈಲು ಒಟ್ಟು 16 ಬೋಗಿಗಳನ್ನು ಹೊಂದಿದ್ದು ಆಟೋಮ್ಯಾಟಿಕ್ ತಂತ್ರಜ್ಞಾನದ ಬಾಗಿಲುಗಳು ಮತ್ತು 180 ಡಿಗ್ರಿಯಲ್ಲಿ ತಿರುಗಬಹುದಾದ ಆಸನ ವ್ಯವಸ್ಥೆ ಇದೆ. ಇದು ಶತಾಬ್ದಿ ಎಕ್ಸ್‌ಪ್ರೆಸ್‌ಗಿಂತ ವೇಗವಾಗಿ ಸಂಚರಿಸಲಿದ್ದು, ಪ್ರಯಾಣದ ಸಮಯ ಸುಮಾರು ಅರ್ಧಗಂಟೆ ಕಡಿಮೆಯಾಗಲಿದೆ. ಶತಾಬ್ದಿಗಿಂತ ಸ್ವಲ್ಪ ಹೆಚ್ಚಿನ ದರ ನಿಗದಿಪಡಿಸಲಾಗಿದೆ.

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಎಲೆಕ್ಟ್ರಿಕ್ ಅಂಗಡಿಗೆ ಬಂದು) ಒಂದು ಕಪ್ಪು ಬಲ್ಬ್ ಕೊಡಿ.
ಅಂಗಡಿಯಾತ : ಕಪ್ಪು ಬಲ್ಬಾ! ಅದ್ಯಾಕೆ ಸಾರ್?
ಗಿರಾಕಿ : ಮಧ್ಯಾಹ್ನದ ಹೊತ್ತಲ್ಲಿ ಕತ್ತಲು ಮಾಡಿಕೊಂಡು ಮಲಗೋ ಮಜಾನೆ ಬೇರೆ ಗುರು!

ಮೈಸೂರು ಮಿತ್ರ
ಶನಿವಾರ, 12 ನವೆಂಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ನಿಮಗೆ ಅಧಿಕಾರದ ಅವಶ್ಯಕತೆಯಿದ್ದಾಗ ದೃಢವಾಗಿರಿ,
ಆದರೆ ಅಧಿಕಾರ ಚಲಾಯಿಸುವಾಗ ಸಹೃದಯಿಗಳಾಗಿರಿ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪ್ರಯಾಸ ಪಡದೆ ಪ್ರಯಾಗ ಸಿಗದು

ನಿಮ್ಮ ಪತ್ರಗಳು

ಸಾರ್ವಜನಿಕರು ಹಣ ಹೂಡಿಕೆ ಮಾಡುವಾಗ ಎಚ್ಚರ!!

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರು ತಮ್ಮ ಹಣವನ್ನು ಅನೇಕ ಖಾಸಗಿ ಕಂಪನಿಗಳು, ಚೀಟಿದಾರರಲ್ಲಿ ಹೂಡಿಕೆ ಮಾಡಿ ಕೈ ಸುಟ್ಟುಕೊಂಡ ಅನೇಕ ಘಟನೆಗಳು ನಡೆಯುತ್ತಲೇ ಇವೆ. ತಾವು ಕಷ್ಟಪಟ್ಟು ಬೆವರು ಸುರಿಸಿ ಹಗಲು, ರಾತ್ರಿ ಎನ್ನದೆ ದುಡಿದ ಹಣವನ್ನು ಭವಿಷ್ಯದಲ್ಲಿ ಮಗ ಮತ್ತು ಮಗಳ ಮದುವೆಗಾಗಿ, ನಿವೇಶನ ಕೊಳ್ಳಲು, ಮಕ್ಕಳ ಉನ್ನತ ಶಿಕ್ಷಣಕ್ಕಾಗಿ, ಮನೆ ಕಟ್ಟಲು ಹೀಗೆ ಹಲವು ಕಾರಣಗಳಿಂದ ದೊಡ್ಡ ಮೊತ್ತದ ಹಣ ಕಷ್ಟ ಕಾಲಕ್ಕೆ ಸಿಗುತ್ತದೆ ಎಂದು ತಾವು ಕೂಡಿಟ್ಟ ಹಣವನ್ನು ನಂಬಿಕೆ ಇಟ್ಟು ಹೂಡಿಕೆ ಮಾಡುತ್ತಾರೆ. ಆದರೆ ಕಂಪನಿಗಳ ಮತ್ತು ಚೀಟಿದಾರರ ಪೂರ್ವಾಪರತೆ, ಸರ್ಕಾರದಿಂದ ಅನುಮತಿಯನ್ನು ಪಡೆದಿದೆಯೇ, ಕಾನೂನಿನ ಪ್ರಕಾರ ಹಣಕಾಸಿನ ವ್ಯವಹಾರವನ್ನು ನಡೆಸುತ್ತಿದ್ದಾರೆಯೇ ಎಂಬುದನ್ನು ಅರಿಯದೆ, ಮಾತಿಗೆ ಮರಳಾಗಿ ನಂಬಿಕೆಯಿಂದ ಹಣ ಹೂಡಿಕೆ ಮಾಡುತ್ತಾರೆ. ಇದರಿಂದ ಮುಗ್ಧ ಅನೇಕ ಅಮಾಯಕ ಜನರಲ್ಲದೆ, ಸರ್ಕಾರಿ ಮತ್ತು ಖಾಸಗಿ ನೌಕರರ ವರ್ಗದವರು ಈ ಮೋಸದ ಜಾಲಕ್ಕೆ ಬಲಿಯಾಗುತ್ತಿದ್ದಾರೆ. ಮಾತಿನ ಮೋಡಿ, ಪ್ರೀತಿ, ವಿಶ್ವಾಸ, ನಂಬಿಕೆಯನ್ನು ಬಂಡವಾಳ ಮಾಡಿಕೊಂಡು ಮೋಸ ಮಾಡುವವರೇ ಇಂದಿನ ಸಮಾಜದಲ್ಲಿ ಹೆಚ್ಚಾಗುತ್ತಿದ್ದಾರೆ. ಇತ್ತೀಚೆಗೆ ನಂಜನಗೂಡಿನಲ್ಲಿ ನಡೆದ ಚೀಟಿದಾರರೊಬ್ಬರು ಆತ್ಮಹತ್ಯೆಗೆ ಶರಣಾಗಿರುವುದು ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಸುಮಾರು 600ಕ್ಕೂ ಹೆಚ್ಚು ಗ್ರಾಹಕರು ಚೀಟಿಯಲ್ಲಿ ಕೋಟ್ಯಾಂತರ ರೂಗಳನ್ನು ಹೂಡಿಕೆ ಮಾಡಿದ್ದು, ಚೀಟಿ ಮುಗಿದರೂ ಅನೇಕ ಜನರಿಗೆ ಹಣವನ್ನು ಕೊಡದೆ ಸತಾಯಿಸಿ ಮನ ನೋಯಿಸಿ ಕೊನೆಗೆ ಚೀಟಿಯನ್ನು ನಡೆಸುವವರೆ ಆತ್ಮಹತ್ಯೆಗೆ ಶರಣಾಗಿದ್ದಾರೆ. ಕಟ್ಟಿದ ಹಣವು ಸಿಗದೆ ಅನೇಕ ಜನರು ದುಃಖಿತರಾಗಿ ಪೊಲೀಸ್ ಸ್ಟೇಷನ್ ಅಲೆಯುತ್ತಿದ್ದಾರೆ. ಅವರ ಗೋಳು ಹೇಳತೀರದು. ಮುಗಿಲು ಮುಟ್ಟಿದ ಅವರ ದುಃಖಕ್ಕೆ ಅವರೇ ಸಾಂತ್ವನವನ್ನು ಹೇಳಿಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಘಟನೆಗಳು ಸಮಾಜದಲ್ಲಿ ಆಗಾಗ ನಡೆಯುತ್ತಿದ್ದರೂ ಜನರು ಮಾತ್ರ ಎಚ್ಚೆತ್ತುಕೊಳ್ಳದಿರುವುದು ವಿಪರ್ಯಾಸವಾಗಿದೆ. ಮೋಸ ಮಾಡಿಸಿಕೊಳ್ಳುವವರು ಎಲ್ಲಿಯವರೆಗೆ ಇರುತ್ತಾರೋ, ಅಲ್ಲಿಯವರೆಗೆ ಮೋಸ ಮಾಡುವವರು ಇದ್ದೇ ಇರುತ್ತಾರೆ ಎಂಬುದನ್ನು ಸಾರ್ವಜನಿಕರು ಅರ್ಥ ಮಾಡಿಕೊಂಡು ಕಷ್ಟಪಟ್ಟ ಹಣವನ್ನು ಹಣಕಾಸಿನ ವ್ಯವಹಾರಗಳಲ್ಲಿ ಹೂಡಿಕೆ ಮಾಡುವಾಗ ಯೋಚಿಸಿ ಮಾಡಬೇಕೆಂಬುದೇ ನನ್ನ ಆಶಯವಾಗಿರುತ್ತದೆ.

–ಪರಶಿವಮೂರ್ತಿ ಎನ್.ಪಿ., ನಂಜೀಪುರ, ಸರಗೂರು ತಾ.

ಪುನೀತ್ ರಾಜಕುಮಾರ್ ಜೊತೆ ಒಂದು ಸುಂದರ ಪಯಣ – ಗಂಧದಗುಡಿ

ಮಾನ್ಯರೆ,



ಪುನೀತ್ ರಾಜ್‌ಕುಮಾರ್ ಅವರಿಗೆ ಈ ಪರಿಕಲ್ಪನೆ ಹೇಗೆ ಬಂದಿತೋ ತಿಳಿಯದು. ಕರ್ನಾಟಕದ ನೆಲ, ಜಲ, ಹರಿದ್ವರ್ಣದ ಕಾಡು, ಎಂದೂ ಕಾಣದ ವಿಶೇಷ ಪ್ರಾಣಿ, ಪಕ್ಷಿಗಳು, ಅವುಗಳು ತಮ್ಮ ಸಹಚರರ ಪ್ರಾಣ ಉಳಿಸಲು ಅಳವಡಿಸಿಕೊಳ್ಳುವ ಸೂಕ್ಷ್ಮ ತಿಳುವಳಿಕೆ ಇಂದಿನ ಮಕ್ಕಳಿಗೆ ಇದೊಂದು ಜೀವಶಾಸ್ತ್ರದ ಪಾಠ. ಜೊತೆಗೆ ಕಾಡು, ಪರಿಸರ ಹಾಗೂ ವನ್ಯಜೀವಿಗಳನ್ನು ಮುಂದಿನ ಪೀಳಿಗೆಗೆ ಉಳಿಸುವ ಸಂದೇಶಗಳು. ಇದನ್ನರಿತೆ ಅಶ್ವಿನಿ ಪುನೀತ್ ಅವರು, ಎಲ್ಲ ಜನರಿಗೆ ಜನರಲ್ ನಾಲೆಡ್ಜ್ ಜೊತೆಗೆ ಉತ್ತಮ ಸಂದೇಶಗಳು ತಲುಪಲಿ ಎಂದು ಚಲನಚಿತ್ರದ ದರವನ್ನು ಕಡಿಮೆ ಮಾಡಿರುವುದು ಶ್ಲಾಘನೀಯ.

ನಾಗರಹೊಳೆಯ ಹುಲಿ, ಜಿಂಕೆ ಹಾಗೂ ಲಂಗೂರ್ ಕೋತಿಯ ಬಗೆಗಿನ ವಿವರಣೆಗಳು, ಆನೆ ಮಾವುತರ ನಡುವಿನ ಅವಿನಾಭಾವ ಸಂಬಂಧ, ಅರಣ್ಯ ಇಲಾಖೆಯವರ ದಿನಚರಿ ನಮ್ಮನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ.

"ನೇತ್ರಾಣಿ" ಜಲಚರಗಳು ಹಾಗೂ ಹವಳದ ಬಂಡೆಗಳ ಪರಿಚಯ, ಈಗಿನಂತೆಯೇ ಪ್ಲಾಸ್ಟಿಕ್ ಹಾವಳಿ ಮುಂದುವರೆದರೆ 2050ರ ಹೊತ್ತಿಗೆ ಸಮುದ್ರದ ಆಳದಲ್ಲಿ ಜಲಚರಗಳಿಗಿಂತ ಹೆಚ್ಚಾಗಿ ಪ್ಲಾಸ್ಟಿಕ್ಕೇ ತುಂಬುವ ಎಚ್ಚರಿಕೆಯ ಜೊತೆಗೆ ಪ್ಲಾಸ್ಟಿಕ್ ಅನ್ನು ಬಳಸಬೇಡಿ ಎನ್ನುವ ಸಂದೇಶ. ಪಶ್ಚಿಮ ಘಟ್ಟಗಳ ನಿತ್ಯ ಹರಿದ್ವರ್ಣ ಕಾಡುಗಳು, ಅಲ್ಲಿಯ ಪ್ರಾಣಿ, ಪಕ್ಷಿ ಹಾಗೂ ಸಸ್ಯ ಸಂಕುಲದ ಬಗ್ಗೆ ಸಂಕ್ಷಿಪ್ತವಾದ ವಿವರಣೆಗಳು ಹಾಗೂ ರುದ್ರ ರಮಣೀಯವಾದ ಜೋಗ್ ಜಲಪಾತ ದರ್ಶನ. ಹಾವುಗಳ ಸಂರಕ್ಷಣೆಯ ಮಹತ್ವವನ್ನು ಹೇಳಿರುವ ರೀತಿ ನಿಜಕ್ಕೂ ಸೋಜಿಗ.

ಕುರುಬರ ಅಲೆಮಾರಿ ಜೀವನ, ಅವರುಗಳ ಜೀವನ ಪ್ರೀತಿ ಮತ್ತು ತಮ್ಮ ಕುರಿಗಳನ್ನೇ ತಿನ್ನುವ ತೋಳಗಳನ್ನು ನೋಡೋ ಅವರ ಧನಾತ್ಮಕ ದೃಷ್ಟಿಕೋನ ನಮ್ಮಂತ ವಿದ್ಯಾವಂತರ ಆಲೋಚನೆಯ ದಿಕ್ಕನ್ನೇ ಬದಲಿಸುತ್ತದೆ.

ಕರ್ನಾಟಕದ ಒಂದು ಮೂಲೆಯಲ್ಲಿರುವ ಕುಗ್ರಾಮದ ಶಾಲೆಯನ್ನು ಅನಾವರಣಗೊಳಿಸುವ ಪರಿಯೇ ಅದ್ಭುತ. ಅಲ್ಲೂ ಕನ್ನಡತನ ಮೆರೆದು, ಉತ್ತಮ ಗುಣಮಟ್ಟದ ಎಜುಕೇಶನ್ ಎಲ್ಲರಿಗೂ ಒದಗಿಸಬೇಕೆನ್ನುವ ಮಾರ್ಮಿಕ ಸಂದೇಶವನ್ನು ಸಂಬಂಧಪಟ್ಟವರಿಗೆ ಸೂಕ್ಷ್ಮವಾಗಿ ನೀಡುತ್ತಾರೆ ಪುನೀತ್. ಒಬ್ಬ ಸೂಪರ್‌ಸ್ಟಾರ್ ಕಾಡುಮೇಡು ಅಲೆದು ಜನತೆಗೆ ಒಂದಷ್ಟು ಜ್ಞಾನದ ಜೊತೆಗೆ ಉತ್ತಮ ಸಂದೇಶಗಳನ್ನು ನೀಡಿರುವ ಪುನೀತ್ ನಿಜಕ್ಕೂ ಗ್ರೇಟ್. ಕೊನೆಯಲ್ಲಿ ಕಾಕತಾಳೀಯವೆಂಬಂತೆ ಕಾಳಿಯ ಉಗಮ ಸ್ಥಾನಕ್ಕೆ ಹೋಗಿ ನಮಸ್ಕರಿಸುವ ರಾಜಕುಮಾರನ ಪ್ರತಿಬಿಂಬ ಗಂಗೆಯಲ್ಲಿ ಲೀನವಾಗುವುದು ಎಲ್ಲರ ಕಣ್ಣಲ್ಲಿ ನೀರು ತರಿಸುತ್ತದೆ.

–ಸಾಸಲಾರಾಧ್ಯ, ಮೈಸೂರು

ಪ್ರಧಾನಿ ಕಾರ್ಯಕ್ರಮದಿಂದ ಪ್ರಯಾಣಿಕರ ಪರದಾಟ

ಮಾನ್ಯರೇ,

ವಿವಿಧ ಕಾರ್ಯಕ್ರಮಗಳ ಅಂಗವಾಗಿ ನ. 11 ರಂದು ರಾಜ್ಯಕ್ಕೆ ಪ್ರಧಾನಮಂತ್ರಿಗಳು ಆಗಮಿಸಿದ ಹಿನ್ನೆಲೆಯಲ್ಲಿ ಬೆಳಗ್ಗೆ 8 ಗಂಟೆಯಿಂದ 11ರವರೆಗೆ ಅನೇಕ ರೈಲುಗಳ ಸಂಚಾರ ವ್ಯತ್ಯಯ ಮಾಡಲಾಗಿದ್ದು ಇದರಿಂದ ಪ್ರತಿನಿತ್ಯ ರೈಲಿನಲ್ಲಿ ಪ್ರಯಾಣಿಸುವ ಕಾರ್ಮಿಕರಿಗೆ ದಿನದ ಕೂಲಿ ನಷ್ಟವಾಗುವುದರ ಜೊತೆಗೆ, ತಮ್ಮ ತಮ್ಮ ಮನೆ ಸೇರಲು ಸಂಜೆಯು ಕೂಡ ತಡವಾಗಿದೆ. ಅದೂ ಅಲ್ಲದೆ ರೈಲಿನ ಸಮಯ ಅದಲು ಬದಲು ಮಾಡಿದ್ದರಿಂದ ಪ್ರಯಾಣಿಕರು ಪರದಾಡುವಂತಾಯಿತು.

ರೈಲ್ವೆ ಆಡಳಿತ ಮಂಡಳಿಯು ಇನ್ನೂ ಮುಂದೆಯಾದರು ರೈಲು ನಿಲ್ದಾಣದಲ್ಲಿ ಗಣ್ಯವ್ಯಕ್ತಿಗಳ ಕಾರ್ಯಕ್ರಮ ನಿಗದಿ ಪಡಿಸುವಾಗ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿಗಾ ವಹಿಸುವುದು ಸೂಕ್ತ.

–ನಾಗೇಶ್, ಮಾನಸಗಂಗೋತ್ರಿ



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಜಾಗತಿಕ ರಾಜಕಾರಣದಲ್ಲಿ ಭಾರತೀಯರು

ಪ್ರಸ್ತುತ ಸುನಾಕ್ ಇಂಗ್ಲೆಂಡ್‌ನ ಪ್ರಧಾನಿಯಾಗಿ ಆಯ್ಕೆಯಾಗಿರುವುದರಿಂದ ಭಾರತೀಯರು ವಿಶೇಷವಾಗಿ ಹಿಂದೂಗಳು ಈ ಕಾರಣಕ್ಕಾಗಿ ಹರ್ಷಗೊಂಡಿದ್ದಾರೆ. ರಿಷಿ ಸುನಾಕ್ ಹಿಂದೂ ಧರ್ಮದಲ್ಲಿ ಅಪಾರ ನಂಬಿಕೆ ಹೊಂದಿದ್ದು, ಹಿಂದೂ ಸಂಪ್ರದಾಯ, ಹಬ್ಬಗಳನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದಾರೆ. ಬ್ರಿಟನ್ ಕ್ರೈಸ್ತ ಮತಾಧಾರಿತ ದೇಶವಾಗಿದ್ದು, ರಾಜ ಕ್ರೈಸ್ತ ಮತಾವಲಂಬಿಯಾಗಿದ್ದಾರೆ. 2017 ರಲ್ಲಿ ಸುನಾಕ್ ತಮ್ಮ ಕೈಯಲ್ಲಿ ಭಗವದ್ಗೀತೆಯ ಪುಸ್ತಕವನ್ನು ಹಿಡಿದು ಸಂಸತ್ ಪ್ರವೇಶ ಮಾಡಿದ್ದರು. ಇವರು ಹಿಂದೂ ಉತ್ಸವಗಳನ್ನು ಆಚರಿಸುವ ಬ್ರಿಟನ್‌ನ ಮೊದಲ ಪ್ರಧಾನಿಯಾಗಲಿದ್ದಾರೆ.

ಭಾರತೀಯರಿಗೆ ಈ ಬಾರಿಯ ದೀಪಾವಳಿ ವಿಶೇಷ ಸಂಭ್ರಮ ತಂದಿದೆ. ದೂರದ ಬ್ರಿಟನ್‌ನಲ್ಲಿ ಹಿಂದೆ ನಮ್ಮನ್ನು ಆಳಿದ, ಸೂರ್ಯ ಮುಳುಗದ ಸಾಮ್ರಾಜ್ಯ ತಮ್ಮದೆಂದು ಅಹಂಕಾರ ಪಡುತ್ತಿದ್ದವರು ಭಾರತೀಯ ಮೂಲದ ಬ್ರಿಟಿಷ್–ಏಷ್ಯನ್ ರಾದ ರಿಷಿ ಸುನಾಕ್‌ರನ್ನು ತಮ್ಮ ಪ್ರಧಾನಿಯಾಗಿ ಆಯ್ಕೆ ಮಾಡಿದ್ದಾರೆ. ಆಳುವ ಕನ್ಸರ್ವೇಟಿವ್ ಪಕ್ಷವು ಯಾವ ಅನುಭವಿ ಮತ್ತು ಕ್ರಿಯಾಶೀಲ ವ್ಯಕ್ತಿತ್ವದ ಅತ್ಯಂತ ಕಿರಿಯ ವಯಸ್ಸಿನ ಸುನಾಕ್‌ರಿಗೆ ಬ್ರಿಟನ್ನನ್ನು ಅತ್ಯಂತ ಕಠಿಣ ಪರಿಸ್ಥಿತಿಯಿಂದ ಪಾರು ಮಾಡುವ ಹೊಣೆಗಾರಿಕೆ ವಹಿಸಿದೆ. ಬೋರಿಸ್ ಜಾನ್ಸನ್ ಸಂಪುಟದಲ್ಲಿ ಹಣಕಾಸು ಸಚಿವರಾಗಿ ಸುನಾಕ್‌ರು ಕೋವಿಡ್–19 ಅನ್ನು ಸಮರ್ಥವಾಗಿ ನಿಭಾಯಿಸಿದ್ದರು. ಪ್ರಾರಂಭದಲ್ಲಿ ಓರ್ವ ಬ್ಯಾಂಕರ್ ಆಗಿದ್ದ ಸುನಾಕ್ ಆರ್ಥಿಕತೆ ಮತ್ತು ಮಾರುಕಟ್ಟೆಗೆ ಸಂಬಂಧಿಸಿದಂತೆ ಚಾಣಾಕ್ಷ ನಿರ್ಧಾರ ಕೈಗೊಳ್ಳುವರೆಂಬ ವಿಶ್ವಾಸ ಅವರ ಪಕ್ಷದಲ್ಲಿದೆ.

ಹದಗೆಟ್ಟ ಆರ್ಥಿಕತೆ, ಶೇ. ಹತ್ತರತ್ತ ಧಾವಿಸುತ್ತಿರುವ ಹಣದುಬ್ಬರ, ಹಿಂದಿನ ಪ್ರಧಾನಿ ಲಿಜ್‌ಟ್ರೂಸ್‌ರ ತಪ್ಪು ಆರ್ಥಿಕ ನಿರ್ಧಾರಗಳು, ತೆರಿಗೆ ಕಡಿತಕ್ಕಾಗಿ ಆಗ್ರಹಿಸುತ್ತಿರುವ ಬ್ರಿಟನ್ ನಾಗರಿಕರು, ಜೀವನ ವೆಚ್ಚದಲ್ಲಿ ಹೆಚ್ಚಳ ಹಾಗೂ ರಾಜಕೀಯ ಅಸ್ಥಿರತೆ ಇವುಗಳನ್ನು ಪರಿಹರಿಸಿ ದೇಶದಲ್ಲಿ ಸ್ಥಿರತೆಯನ್ನು ಬ್ರಿಟಿಷರು ಬಯಸುತ್ತಿದ್ದಾರೆ.

ಆಳುವ ಕನ್ಸರ್ವೇಟಿವ್ ಪಕ್ಷ ಆಂತರಿಕ ಸಮಸ್ಯೆಯಿಂದ ಬಳಲುತ್ತಿದೆ. ಪಕ್ಷದೊಳಗಿನ ಆಂತರಿಕ ಭಿನ್ನಮತ, ಬಂಡಾಯದಿಂದ ಬೋರಿಸ್ ಜಾನ್ಸನ್ ಹಾಗೂ ಲಿಜ್‌ಟ್ರೂಸ್ ಕೆಲವೇ ದಿನಗಳ ಅಂತರದಲ್ಲಿ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. 2019ರಲ್ಲಿ ಕನ್ಸರ್ವೇಟಿವ್ ಪಕ್ಷವು ಪ್ರಚಂಡ ಜಯಗಳಿಸಿದರೂ ಭಿನ್ನಮತ ಶಮನವಾಗಲಿಲ್ಲ. ಬೋರಿಸ್ ಜಾನ್ಸನ್ ಎರಡನೇ ಬಾರಿ ಪ್ರಧಾನಿಯಾಗಲು ನಿರಾಕರಿಸಿದರು. ಇನ್ನೋರ್ವ ಪ್ರಧಾನಿ ಪದವಿ ಆಕಾಂಕ್ಷಿ ಪೆನ್ನಿ ಮೊರ್ಡಾಂಟ್ ಒಂದು ನೂರು ನಾಮಿನಿಗಳನ್ನು ಪಡೆಯಲು ವಿಫಲರಾದರು. ಸುನಾಕ್‌ರವರು ಒಂದು ನೂರ ಇಪ್ಪತ್ತಕ್ಕಿಂತ ಹೆಚ್ಚು ಸಂಸದರ ಬೆಂಬಲದಿಂದ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಆಧುನಿಕ ಜಾಗತಿಕ ರಾಜಕೀಯ ಇತಿಹಾಸದಲ್ಲಿ ಭಾರತೀಯರ ಸಾಧನೆ ಬಗ್ಗೆ ಸಿಂಹಾವಲೋಕನ ಮಾಡುವುದು ಸೂಕ್ತವಾಗಿದೆ.

ವಿಶ್ವ ರಾಜಕಾರಣದಲ್ಲಿ ಭಾರತೀಯರು: ಭಾರತೀಯ ಮೂಲದವರು ಜಗತ್ತಿನ ಅನೇಕ ದೇಶಗಳ ರಾಜಕಾರಣದಲ್ಲಿ ಉನ್ನತ ಸ್ಥಾನಗಳಿಗೇರಿ ಯಶಸ್ವಿಯಾಗಿರುವುದು ಇದೇ ಪ್ರಥಮ ಬಾರಿಯಲ್ಲ. 1961ರಲ್ಲಿ ಗಯಾನಾದ ರಾಜಕಾರಣಿ ಚೆಡ್ಡಿ ಜಗನ್ ಪ್ರಥಮ ಬಾರಿಗೆ 1961–1964 ಅವಧಿಗೆ ಬ್ರಿಟಿಷ್ ಗಯಾನಾದ ಪ್ರಧಾನಿಯಾಗಿ ಆಯ್ಕೆಯಾಗಿದ್ದರು. ಇವರ ಪೂರ್ವಜರು ಉತ್ತರ ಪ್ರದೇಶದ ಬಸ್ತಿ ಜಿಲ್ಲೆಗೆ ಸೇರಿದವರಾಗಿದ್ದರು. ಆ ನಂತರ 1992–1997ರವರೆಗೆ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು. ಮಾರಿಷಸ್‌ನಲ್ಲಿ ಸರ್ ಶಿವ ಸಾಗರ ರಾಂಗುಲಾಂ, ನವೀನ ರಾಮಗುಲಾಂ, ಅನಿರುದ್ಧ ಜಗನ್ನಾಥ, ಪ್ರವೀಣ ಜಗ್‌ನಾಥ ಇವರೆಲ್ಲ ಅಲ್ಲಿನ ಅಧ್ಯಕ್ಷರು, ಪ್ರಧಾನಿಗಳಾದರು. ಟ್ರಿನಿಡಾಡ್‌ನಲ್ಲಿ ಬಾಸುದೇವ ಪಾಂಡೆ ಪ್ರಧಾನಿಯಾಗಿದ್ದರೆ, ಪ್ರಸ್ತುತ ಚಂದ್ರಿಕಾ ಪ್ರಸಾದ್ ಸಂತೋಶಿ ಸುರಿನಾಂ ದೇಶದ ಅಧ್ಯಕ್ಷರಾಗಿದ್ದಾರೆ. ಸೇಸಲ್ಸ್ ದ್ವೀಪ ರಾಷ್ಟ್ರದ ಅಧ್ಯಕ್ಷ ವೇಮಲ್ ರಾಮಕಲವನ್ ಭಾರತೀಯ ಮೂಲದವರು. ಫಿಜಿ ದೇಶದ ಮೊದಲ ಭಾರತೀಯ ಮೂಲದ ಪ್ರಧಾನಿ ಮಹೇಂದ್ರ ಪಾಲ್ ಚೌಧುರಿ, ಪ್ರಸ್ತುತ ಅಮೇರಿಕದ ಉಪಾಧ್ಯಕ್ಷೆಯಾಗಿರುವ ಕಮಲಾ ಹ್ಯಾರಿಸ್ ಭಾರತ ಮೂಲದ ತಮಿಳುನಾಡಿನವರು. ಮಾರಿಷಸ್‌ನ ಏಳನೇ ಅಧ್ಯಕ್ಷ ಪೃಥ್ವಿರಾಜ್ ಸಿಂಗ್ ರೂಪನ್ ಭಾರತೀಯ ಮೂಲದವರಾಗಿದ್ದಾರೆ. ಅಮೇರಿಕ ಹೊರತುಪಡಿಸಿ ಉಳಿದೆಲ್ಲ ದೇಶಗಳಲ್ಲಿ ಭಾರತೀಯರು ಬಹುಸಂಖ್ಯಾತರಾಗಿದ್ದ ಕಾರಣ ಇವರೆಲ್ಲ ದೇಶಗಳ ಅತ್ಯುನ್ನತ ಸ್ಥಾನಗಳಿಗೇರಿದರು.

ಬ್ರಿಟನ್‌ನಲ್ಲಿ ಭಾರತೀಯ ರಾಜಕಾರಣಿಗಳು: ಬ್ರಿಟನ್‌ನಲ್ಲಿ ಉಳಿದೆಲ್ಲ ದೇಶಗಳಿಗಿಂತ ಪರಿಸ್ಥಿತಿ ಭಿನ್ನವಾಗಿದೆ. ಬ್ರಿಟನ್‌ನಲ್ಲಿ ಭಾರತೀಯ ಮೂಲದವರು ಅಲ್ಪಸಂಖ್ಯಾತರಾಗಿದ್ದಾರೆ. ಮಾತ್ರವಲ್ಲ ಭಾರತೀಯರು ತಮ್ಮ ಗುಲಾಮರೆಂಬ ಭಾವನೆ ಬ್ರಿಟನ್‌ನಲ್ಲಿ ವ್ಯಾಪಕವಾಗಿತ್ತು. ಕೆಲವು ರಸ್ತೆಗಳಲ್ಲಿ ಕ್ಲಬ್‌ಗಳ ಹೊರಭಾಗದಲ್ಲಿ ಭಾರತೀಯರು ಮತ್ತು ನಾಯಿಗಳಿಗೆ ಪ್ರವೇಶವಿಲ್ಲ ಎಂಬ ಫಲಕಗಳು ಭಾರತೀಯರ ಬಗ್ಗೆ ತಿರಸ್ಕಾರ, ದ್ವೇಷದ ಪ್ರಮಾಣ ಸೂಚಿಸುತ್ತಿತ್ತು. ಈ ರೀತಿಯ ದ್ವೇಷದ ವಾತಾವರಣವನ್ನು ಎದುರಿಸಿ ಕೆಲವು ಭಾರತೀಯ ಮೂಲದವರು ಬ್ರಿಟನ್ ರಾಜಕೀಯ ಪ್ರವೇಶಿಸಿದರು. ಸಂಸತ್ತಿಗೂ ಆಯ್ಕೆಯಾದರು. 130 ವರ್ಷಗಳ ಹಿಂದೆ 1892ರಲ್ಲಿ ದಾದಾಭಾಯ್ ನವರೋಜಿಯವರು ಲಿಬರಲ್ ಪಾರ್ಟಿಯಿಂದ (ಈಗಿನ ಲಿಬರಲ್ ಡೆಮಾಕ್ರಾಟ್ಸ್) ಬ್ರಿಟನ್ ಸಂಸತ್ ಪ್ರವೇಶಿಸಿದ ಪ್ರಥಮ ಭಾರತೀಯ ಸಂಜಾತರೆಂಬ ಗೌರವಕ್ಕೆ ಪಾತ್ರರಾದರು. ಇವರು ಭಾರತದ ಮೇಲೆ ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆಗಳನ್ನು ಬಲವಾಗಿ ವಿರೋಧಿಸಿ ಬ್ರಿಟನ್ ಸಂಸತ್ತಿನಲ್ಲಿ ವಿಶೇಷ ಪ್ರಭಾವ ಬೀರಿದ್ದರು. ಇವರ ನಂತರ ಭಾರತೀಯ ಮೂಲದ ಇನ್ನೋರ್ವ ರಾಜಕಾರಣಿ, ಬ್ರಿಟನ್ ಪಕ್ಷಪಾತಿ ಮಂಚೆರ್ಜಿ ಮಿವಾಂಜಿ ಭೌನಾಗ್ರಿಯವರು ಕನ್ಸರ್ವೇಟಿವ್ ಪಕ್ಷದಿಂದ ಸಂಸದರಾದರು. ಮೂರು ದಶಕಗಳ ನಂತರ 1922 ರಲ್ಲಿ ಮೂರನೇ ಭಾರತೀಯ ಸಂಜಾತ ಶಾಪುರ್ಜಿ ಸಕ್ಲಾಟ್‌ವಾಲಾರವರು ಕಮ್ಯೂನಿಸ್ಟ್ ಪಾರ್ಟಿ ಆಫ್ ಗ್ರೇಟ್ ಬ್ರಿಟನ್ ಪಕ್ಷದಿಂದ ಸಂಸತ್ ಪ್ರವೇಶಿಸಿದರು. ಸುಮಾರು ಎಂಬತ್ತು ವರ್ಷಗಳ ನಂತರ ಭಾರತೀಯ ಮೂಲದವರು ಬ್ರಿಟನ್‌ನ ಹೌಸ್ ಆಫ್ ಕಾಮನ್ಸ್ ಮತ್ತು ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಗಮನಾರ್ಹ ಸಂಖ್ಯೆಯಲ್ಲಿ ಪ್ರತಿನಿಧಿಗಳಾದರು. ಇವರಲ್ಲಿ ಶೀತ್‌ವಾಜ್, ಪ್ರೀತಿ ಪಟೇಲ್ ಮೊದಲಾದವರು ಅತ್ಯಂತ ಪ್ರಭಾವಿ ಸ್ಥಾನಗಳಲ್ಲಿದ್ದಾರೆ.

ಸುನಾಕ್‌ರ ಪ್ರಧಾನಿ ಪಟ್ಟಕ್ಕೆ ಪಯಣ: ಸುನಾಕ್‌ರ ಪೂರ್ವಜರು ಅಖಂಡ ಭಾರತದ ಈಗಿನ ಪಾಕ್ ಪ್ರದೇಶದಲ್ಲಿರುವ ಪಂಜಾಬ್ ಪ್ರಾಂತ್ಯದ ಗುಜ್ರನ್‌ವಾಲಾದವರು. 1930ರಲ್ಲಿ ಇವರು ಮೊದಲ ಬಾರಿ ಪೂರ್ವ ಆಫ್ರಿಕಾಕ್ಕೆ ವಲಸೆ ಹೋದರು. 1965 ರಲ್ಲಿ ಉತ್ತಮ ಜೀವನಕ್ಕಾಗಿ ಕೆನ್ಯಾದಿಂದ ಬ್ರಿಟನ್‌ಗೆ ಎರಡನೇ ಬಾರಿ ವಲಸೆ ಹೋದರು. ಇವರ ಮಾತಾಪಿತೃರು ಆರೋಗ್ಯ ಕ್ಷೇತ್ರದಲ್ಲಿ ತಮ್ಮ ಬದುಕು ಕಟ್ಟಿಕೊಂಡರು. ಸುನಾಕ್‌ರ ತಂದೆ ಸೌಥಾಂಪ್ಟನ್‌ನಲ್ಲಿ ವೈದ್ಯರಾಗಿದ್ದರೆ, ತಾಯಿ ಒಂದು ಮೆಡಿಕಲ್ ಶಾಪ್ ನಡೆಸುತ್ತಿದ್ದಾರೆ. ರಿಷಿ ಸುನಾಕ್ ಸೌಥಾಂಪ್ಟನ್‌ನಲ್ಲಿ ಹುಟ್ಟಿ ಬೆಳೆದರು. ಸುನಾಕ್‌ರು ಆರಂಭಿಕ ವಿದ್ಯಾಭ್ಯಾಸ ವಿಂಚೆಸ್ಟರ್ ಹಾಗೂ ಆಕ್ಸ್‌ಫರ್ಡ್ ವಿವಿಯಲ್ಲಿ ಪಡೆದರು. ಆ ನಂತರ ಅಮೇರಿಕದ ಸ್ಟಾನ್‌ಫೋರ್ಡ್ ವಿದ್ಯಾಲಯದಿಂದ ಎಂಬಿಎ ಪದವಿ ಪಡೆದರು. ಈ ವಿದ್ಯಾಲಯದಲ್ಲಿ ಪರಿಚಯವಾದ ಜಾಗತಿಕ ಐಟಿ ದೈತ್ಯ ಕಂಪನಿ ಇನ್ಫೋಸಿಸ್‌ನ ಸಂಸ್ಥಾಪಕ ಕರ್ನಾಟಕದ ಎನ್.ಆರ್. ನಾರಾಯಣಮೂರ್ತಿ ಹಾಗೂ ಶ್ರೀಮತಿ ಸುಧಾಮೂರ್ತಿಯವರ ಪುತ್ರಿ ಅಕ್ಷತಾ ಮೂರ್ತಿಯವರನ್ನು ವಿವಾಹವಾದರು. ಇವರು 2001–2004ರವರೆಗೆ ಅಮೇರಿಕದ ಹೂಡಿಕೆ ಕಂ. ಗೋಲ್ಡ್‌ಮ್ಯಾನ್ ಸ್ಯಾಚ್‌ನಲ್ಲಿ ಉದ್ಯೋಗಿಯಾದರು. 2009 ರಲ್ಲಿ ಇಂಗ್ಲೆಂಡ್‌ಗೆ ಮರಳಿದ ನಂತರ 2015ರಲ್ಲಿ ಮೊದಲ ಬಾರಿಗೆ ಇಂಗ್ಲೆಂಡ್ ಪಾರ್ಲಿಮೆಂಟ್ ಪ್ರವೇಶಿಸಿದರು.


ರಿಷಿ ಸುನಕ್

ಪ್ರಸ್ತುತ ಸುನಾಕ್ ಇಂಗ್ಲೆಂಡ್‌ನ ಪ್ರಧಾನಿಯಾಗಿ ಆಯ್ಕೆಯಾಗಿರುವುದರಿಂದ ಭಾರತೀಯರು ವಿಶೇಷವಾಗಿ ಹಿಂದುಗಳು ಈ ಕಾರಣಕ್ಕಾಗಿ ಹರ್ಷಗೊಂಡಿದ್ದಾರೆ. ರಿಷಿ ಸುನಾಕ್ ಹಿಂದು ಧರ್ಮದಲ್ಲಿ ಅಪಾರ ನಂಬಿಕೆ ಹೊಂದಿದ್ದು, ಹಿಂದು ಸಂಪ್ರದಾಯ, ಹಬ್ಬಗಳನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದಾರೆ. ಬ್ರಿಟನ್ ಕ್ರೈಸ್ತ ಮತಾಧಾರಿತ ದೇಶವಾಗಿದ್ದು, ರಾಜ ಕ್ರೈಸ್ತ ಮತಾವಲಂಬಿಯಾಗಿದ್ದಾರೆ. 2017ರಲ್ಲಿ ಸುನಾಕ್ ತಮ್ಮ ಕೈಯಲ್ಲಿ ಭಗವದ್ಗೀತೆಯ ಪುಸ್ತಕವನ್ನು ಹಿಡಿದು ಸಂಸತ್ ಪ್ರವೇಶ ಮಾಡಿದ್ದರು. ಇವರು ಹಿಂದು ಉತ್ಸವಗಳನ್ನು ಆಚರಿಸುವ ಬ್ರಿಟನ್‌ನ ಮೊದಲ ಪ್ರಧಾನಿಯಾಗಲಿದ್ದಾರೆ. ಸುನಾಕ್ ತಮ್ಮ ಸಾಂಸ್ಕೃತಿಕ ಮೂಲದ ಬಗ್ಗೆ ಅಭಿಮಾನ ಹೊಂದಿದ್ದಾರೆ. ತಮ್ಮ ಕಾರ್ಯಾಲಯದ ಮೇಜಿನ ಮೇಲೆ ಗಣೇಶನ ವಿಗ್ರಹವಿರಿಸಿದ್ದಾರೆ. ಸುನಾಕ್‌ರು ತಾನೊಬ್ಬ ಹಿಂದು ಎಂದು ಅಭಿಮಾನದಿಂದ ಹೇಳುತ್ತೇನೆ. ನನ್ನ ವ್ಯಕ್ತಿತ್ವದಲ್ಲಿ ಹಿಂದುತ್ವವಿದೆ ಹಾಗೂ ನನ್ನ ಈ ನಂಬಿಕೆ ನನಗೆ ಶಕ್ತಿ ನೀಡುತ್ತಿದೆ. ಹಿಂದುತ್ವ ನಾನು ಯಾರು ನನ್ನ ಉದ್ದೇಶವೇನೆಂದು ತಿಳಿಸುತ್ತಿದೆ ಎಂದು ಒಂದು ಸಂದರ್ಶನದಲ್ಲಿ ಹೇಳಿದ್ದರು. ಚುನಾವಣೆಗಳು ಬಂದಾಗ ಹಣೆ ತುಂಬಾ ಅರಿಸಿನ ಕುಂಕುಮ ಹಚ್ಚಿ ದೇವಸ್ಥಾನಗಳಿಗೆ ಎಡತಾಕುವ, ಮುಸಲ್ಮಾನರ ಟೋಪಿ ಹಾಕಿ ತಿರುಗುವ, ಕ್ರೈಸ್ತರ ಕ್ರಾಸ್ ಅನ್ನು ಕುತ್ತಿಗೆಗೆ ತೂಗು ಹಾಕುವ ಭಾರತದ ಸೆಕ್ಯುಲರ್ ರಾಜಕಾರಣಿಗಳು, ಸುನಾಕ್‌ರಿಂದ ಕಲಿಯಬೇಕಾಗಿದೆ.

ರಿಷಿ ಸುನಾಕ್ ಇಂಗ್ಲೆಂಡ್‌ನ ಪ್ರಧಾನಿಯಾಗುವುದರೊಂದಿಗೆ ಭಾರತೀಯರಲ್ಲಿರುವ ನಾಯಕತ್ವದ ಸಾಮರ್ಥ್ಯ ಜಗತ್ತಿನ ಗಮನ ಸೆಳೆದಿದೆ. ಕೆಲವೇ ದಶಕಗಳ ಹಿಂದೆ ಭಾರತವನ್ನು ಶ್ವೇತವರ್ಣೀಯರ ಹೊರೆ (Whiteman's burden) ಎಂದು ರುದರ್ಯಾರ್ಡ್ ಕಿಪ್ಲಿಂಗ್‌ರ ಕಲ್ಪನೆಯ ಆಧಾರದಲ್ಲಿ ಮೂದಲಿಸುತ್ತಿದ್ದರು. ಬ್ರಿಟನ್ ಪ್ರಧಾನಿಯಾಗಿದ್ದ ವಿನ್‌ಸ್ಟನ್ ಚರ್ಚಿಲ್ ಭಾರತೀಯರು ತಮ್ಮನ್ನು ತಾವು ಆಳಲು ಸಮರ್ಥರಲ್ಲ. ಅವರು ಬೇರೆಯವರಿಂದ ಆಳಿಸಿಕೊಳ್ಳುವುದಕ್ಕೆ ಯೋಗ್ಯ (Indians are not fit to rule, they are fite to be ruled) ಎಂದು ತಿರಸ್ಕಾರದಿಂದ ಹೇಳಿದ್ದರು. ಕಾಲ ಎಲ್ಲವನ್ನೂ ಮೌನವಾಗಿ ಗಮನಿಸುತ್ತದೆ. ಸೂಕ್ತ ಸಮಯಕ್ಕೆ ಪ್ರತ್ಯುತ್ತರ ನೀಡುತ್ತದೆ ಎಂಬುದು ಪ್ರಸ್ತುತ ಇಂಗ್ಲೆಂಡ್‌ನಲ್ಲಾಗಿರುವ ವಿದ್ಯಮಾನಗಳಿಂದ ತಿಳಿಯಬಹುದು. ಆದರೆ ಸುನಾಕ್ ಪ್ರಧಾನಿಯಾಗಿರುವುದು ಬ್ರಿಟನ್‌ನ ಬಹುಸಂಖ್ಯಾತ ಶ್ವೇತವರ್ಣೀಯರಲ್ಲಿ ಸ್ವಲ್ಪ ಮಟ್ಟಿನ ಅಸಮಾಧಾನ ಸೃಷ್ಟಿಸಿದೆ. ಶ್ವೇತವರ್ಣೀಯರ ಶ್ರೇಷ್ಠತೆ ಬಗ್ಗೆ ಅಹಂಭಾವ ಹೊಂದಿರುವವರು ಅಸೂಯೆಯಿಂದ ಪ್ರತಿಕ್ರಿಯೆ ನೀಡಲಾರಂಭಿಸಿದ್ದಾರೆ. ಬ್ರಿಟನ್‌ನ ಪ್ರತಿಪಕ್ಷ ಲೇಬರ್ ಪಾರ್ಟಿಯಂತೂ ಪಾರ್ಲಿಮೆಂಟ್ ಅನ್ನು ತತ್‌ಕ್ಷಣ ವಿಸರ್ಜಿಸಿ ಹೊಸದಾಗಿ ಚುನಾವಣೆಯಾಗಬೇಕೆಂದು ಆಗ್ರಹಿಸಿದೆ. ಇಂತಹ ಪರಿಸ್ಥಿತಿಯಲ್ಲಿ ಸುನಾಕ್‌ರಿಂದ ಭಾರತಕ್ಕೆ ಏನು ಲಾಭವಾಗಬಹುದು ಎಂದು ಭಾರತ ಭಾವಿಸುವುದಕ್ಕಿಂತ, ಓರ್ವ ತಾಯಿ ಉನ್ನತ ಸ್ಥಾನಕ್ಕೇರಿದ ತನ್ನ ಪುತ್ರನಿಂದ ಏನನ್ನೂ ಬಯಸದೇ ಆತ ಯಶಸ್ವಿಯಾಗಲೆಂದು ಹಾರೈಸುತ್ತಾಳೆ. ಇದೇ ರೀತಿ ಸುನಾಕ್ ಪ್ರಸ್ತುತ ಬ್ರಿಟನ್ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿ ಯಶಸ್ವಿ ಪ್ರಧಾನಿಯಾಗಲೆಂದು ಹಾರೈಸುವುದು ಸಮಯೋಚಿತವಾಗಿದೆ.

ಕನಕದಾಸರು ಜಾತ್ಯಾತೀತತೆಯ ಪ್ರತಿರೂಪ

● ಮೈಸೂರಲ್ಲಿ ದಾಸ ಶ್ರೇಷ್ಠನಿಗೆ ಭಕ್ತಿಪೂರ್ವಕ ನಮನ ● ಕನಕದಾಸರು ಎಲ್ಲಾ ಸಮುದಾಯಕ್ಕೂ ಸ್ಫೂರ್ತಿಯ ಸೆಲೆ ● ಸಾಹಿತಿ ಚಿಕ್ಕಮಗಳೂರು ಗಣೇಶ ಅವರಿಂದ ವಿಶೇಷ ವಿಚಾರ ಮಂಡನೆ



ಮೈಸೂರು, ನ.11(ಎಂಟಿವೈ)– ಸಮಾಜದಲ್ಲಿ ಬೇರೂರಿದ್ದ ಜಾತಿ ವ್ಯವಸ್ಥೆ ತೊಡೆದು ಹಾಕುವ ನಿಟ್ಟಿನಲ್ಲಿ ಶ್ರಮಿಸಿದ ದಾಸ ಶ್ರೇಷ್ಠ ಕನಕದಾಸರು ಸಾಮರಸ್ಯ ಮತ್ತು ಜಾತ್ಯಾತೀತತೆಯ ಪ್ರತಿರೂಪ ಎನಿಸಿದ್ದಾರೆ ಎಂದು ಸಾಹಿತಿ ಮತ್ತು ಪ್ರಾಧ್ಯಾಪಕ ಚಿಕ್ಕಮಗಳೂರು ಗಣೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಶುಕ್ರವಾರ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ವಿಚಾರ ಮಂಡಿಸಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಜಾತಿ, ಧರ್ಮಗಳ ನಡುವೆ ಹಿಂಸೆ, ಸಂಘರ್ಷವನ್ನು ಹುಟ್ಟು ಹಾಕಲಾಗುತ್ತಿದೆ. ಈ ಮನಸ್ಥಿತಿ ಹಿಂದಿನಿಂದಲೂ ಬಂದಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕನಕದಾಸರು ಸಾಮರಸ್ಯ, ಜಾತ್ಯಾತೀತ ರೂಪವಾಗಿ ನೆಲೆಯೂರಿದ್ದಾರೆ. ಕನಕದಾಸರು ಪ್ರಭುತ್ವ ಮತ್ತು ಧರ್ಮ ಸಂಘರ್ಷದ ಕಾಲಘಟ್ಟದಲ್ಲಿ ಉದಯಿಸಿದ ಮಹಾನ್ ಚೇತನ. ಈಗಲೂ ಚರಿತ್ರೆ ಎಂದರೆ ಪುರಾಣ, ಕಥೆ ಹೇಳುತ್ತಾರೆ. ಭೂತಕಾಲದ ಗಾಯಕ್ಕೆ ಪ್ರಸ್ತುತ ಕಾಲದಲ್ಲಿ ನೋವು, ಹಿಂಸೆ ಅನುಭವಿಸುವಂತಾಗಿದೆ. ಹಿಂದಿನ ನಕಾರಾತ್ಮಕ ಸಂಗತಿಗಳಲ್ಲೇ ಸಿಲುಕುವ ಅಗತ್ಯವಿಲ್ಲ. ಕನಕದಾಸರು ವರ್ತಮಾನದಲ್ಲೇ ಎಲ್ಲರಿಗೂ ಸ್ಫೂರ್ತಿ ಸೆಲೆಯಾಗಿ ಬೆಳಕು ತುಂಬಿದರು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಸಾಗಿದಾಗ ಮಾತ್ರ ಇನ್ನಷ್ಟು ಪ್ರಜ್ವಲಿಸಬಹುದು ಎಂದರು.

ಜನಸಂಸ್ಕೃತಿಯ ಪ್ರತೀಕ ಎನಿಸಿರುವ ಭಕ್ತ ಕನಕದಾಸರು ಖಾಸಗಿಯಾಗಿದ್ದ ಭಕ್ತಿಯನ್ನು ಸಮಾಜದ ಬದಲಾವಣೆಗೆ ಅಸ್ತ್ರವಾಗಿ ಬಳಸಿದರು. ಜೀವ ಪ್ರೀತಿ, ನಿಸರ್ಗ ಪ್ರೇಮ, ಆತ್ಮಸಾಕ್ಷಿ, ನಂಬಿಕೆ ಮೇಲೆ ಅವರ ಚಿಂತನೆ ಅಡಗಿದೆ. ಅವರ ಅಂಕಿತನಾಮ ಆದಿಕೇಶ್ವರ ಎಂದರೆ ಸಾಕ್ಷಿ ಪ್ರಜ್ಞೆ ಮತ್ತು ಆತ್ಮಸಾಕ್ಷಿ ಎಂಬುದೇ ಆಗಿದೆ. ಸಮಾಜದಲ್ಲಿ ಬೇರೂರಿದ್ದ ಅನೇಕ ರೋಗಗಳಿಗೆ ಮದ್ದಾಗಿ ಭಕ್ತಿ ಮಾರ್ಗವನ್ನು ಪರಿಣಾಮಕಾರಿಯಾಗಿ ಬಳಸಿದ್ದು ವಿಶೇಷ. ಭಕ್ತಿ ಮತ್ತು ಭಗವಂತನ ನಡುವೆ ದಲ್ಲಾಳಿಗಳು ಅಗತ್ಯವಿಲ್ಲ. ಕನಕರು ಸಹ ಭಕ್ತಿ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿದ್ದರು. ಪ್ರಸ್ತುತ ಸಮಾಜಕ್ಕೂ ಇಂತಹ ರಾಯಭಾರಿಗಳ ಅಗತ್ಯವಿದೆಯೇ ಹೊರತು, ದಲ್ಲಾಳಿಗಳು ಅಥವಾ ಮಧ್ಯವರ್ತಿಗಳಲ್ಲ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಸಮಾಜದಲ್ಲಿ ಅನಾದಿಕಾಲದಿಂದಲೂ ನೆಲೆಯೂರಿದ್ದ ಜಾತಿ ವ್ಯವಸ್ಥೆ ಎಂಬ ಅನಿಷ್ಟ ಪದ್ಧತಿಯನ್ನು ತೊಡೆದು ಹಾಕಲು ಅನೇಕ ಸಂತರು, ಚಿಂತಕರು ಪ್ರಯತ್ನಿಸಿದ್ದರು. ಆದರೆ, ಅದು ಸಾಧ್ಯವಾಗಿರಲಿಲ್ಲ. ಜಾತಿ ಗೋಡೆಗಳು ಮತ್ತಷ್ಟು ಗಟ್ಟಿಯಾಗುತ್ತಲೇ ಇದ್ದವು. ಜನರಲ್ಲಿ ವೈಚಾರಿಕತೆ ಚಿಂತನೆ ಮಾಯವಾಗಿದೆ. ತಪ್ಪು ಮತ್ತು ಅನ್ಯಾಯವನ್ನು ಪ್ರಶ್ನಿಸುವ ಕೆಲಸವನ್ನು ಬುದ್ಧ, ಕನಕದಾಸರು ಸೇರಿದಂತೆ ಬಹಳಷ್ಟು ಮಹನೀಯರು ಮಾಡಿದ್ದರು. ಈಗ ಈ ಪ್ರವೃತ್ತಿಯೇ ಇಲ್ಲವಾಗಿದೆ. ಸತ್ಯದ ಬದಲಿಗೆ ಸುಳ್ಳುಗಳನ್ನು ಬಿತ್ತಲಾಗುತ್ತಿದೆ. ವಿದ್ಯಾವಂತರಲ್ಲೇ ಹೆಚ್ಚಿನ ಮೌಢ್ಯ, ಮೂಢನಂಬಿಕೆ ತುಂಬಿದೆ. ಗ್ರಹಣ, ಅಮಾವಾಸ್ಯೆಯನ್ನು ಈಗಲೂ ಆಚರಣೆ ಮಾಡುತ್ತಿದ್ದಾರೆ. ಇದು ಜನರ ಆತ್ಮಶಕ್ತಿಯನ್ನು ಕುಗ್ಗಿಸುತ್ತಿದೆ. ದೇವರ ಹೆಸರಿನಲ್ಲಿ ಶೋಷಣೆ, ಮೋಸ ಮಾಡಲಾಗುತ್ತಿದೆ. ವೈಚಾರಿಕ ಚಿಂತನೆ ಇನ್ನೂ ಬಂದಿಲ್ಲ ಎಂದು ವಿಷಾದಿಸಿದರು.

ಜಿಲ್ಲಾಧಿಕಾರಿ ಡಾ.ರಾಜೇಂದ್ರ ಮಾತನಾಡಿ, ಕಾಗಿನೆಲೆ ಆದಿಕೇಶವ ಎಂಬ ಅಂಕಿತದೊಂದಿಗೆ 500 ವರ್ಷಗಳ ಹಿಂದೆಯೇ ಕೀರ್ತನೆಗಳನ್ನು ರಚಿಸಿ ಸಮಾಜದ ಅಂಕು–ಡೊಂಕುಗಳನ್ನು ತಿದ್ದುವಂತಹ ಕೆಲಸ ಮಾಡಿದರು. ತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿ ಪರಿವರ್ತನೆ ಮಾಡಿದಂತಹ ರಾಷ್ಟ್ರೀಯ ಸಂತಕವಿ ಎಂಬ ಹೆಗ್ಗಳಿಕೆ ಪಡೆದ ಕನಕದಾಸರು ಐದು ಶತಮಾನಗಳ ಹಿಂದೆ ಆಡಿದ ಮಾತುಗಳು ಇಂದಿಗೂ ಅನ್ವಯಿಸುತ್ತವೆ. ಅಸಮಾನತೆ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳ ನಿವಾರಣೆ ಹಾಗೂ ಪ್ರಸ್ತುತ ಯುವಸಮುದಾಯ ರೊಚ್ಚಿಗೇಳುವ ಸನ್ನಿವೇಶಗಳಿಗೆ ಪರಿಹಾರ ಹಾಗೂ ದಾರಿದೀಪವಾಗಿ ಕನಕದಾಸರು ಹೇಳಿರುವ ಕೀರ್ತನೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಎಂಎಲ್ಸಿಗಳಾದ ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮರಿತಿಬ್ಬೇಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪ, ಕುರುಬರ ಸಂಘದ ರಾಜ್ಯಾಧ್ಯಕ್ಷ ಸುಬ್ರಹ್ಮಣ್ಯ, ಜಿ.ಪಂ.ಮಾಜಿ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಎಂ. ಶಿವಣ್ಣ, ಎಂ.ಕೆ.ಶಂಕರ್, ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಬಸವರಾಜು, ಮುಖಂಡರಾದ ಕೆ.ಎಸ್.ಶಿವರಾಂ ಇನ್ನಿತರರಿದ್ದರು.

ಹಿಂದೂ ಪದ ಅವಹೇಳನ ಅರ್ಥ ವಿವರಣೆ ಆರೋಪ

ಶಾಸಕ ಸತೀಶ್ ಜಾರಕಿಹೊಳಿ ಬೆಂಬಲಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು,ನ.11(ಪಿಎಂ)– ಹಿಂದೂ ಪದದ ಬಗ್ಗೆ ಶಾಸಕ ಸತೀಶ್ ಜಾರಕಿಹೊಳಿ ಅವರು ಮಾತನಾಡಿರುವುದರಲ್ಲಿ ಯಾವುದೇ ತಪ್ಪಿಲ್ಲ ಎಂದು ಅವರನ್ನು ಬೆಂಬಲಿಸಿ ಮಾನವ ಬಂಧುತ್ವ ವೇದಿಕೆ–ಕರ್ನಾಟಕ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಪುರಭವನದ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಆವರಣದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಹಿಂದೂ ಪದದ ಬಗ್ಗೆ ಸತೀಶ್ ಜಾರಕಿಹೊಳಿ ಅವರು ನೀಡಿರುವ ಹೇಳಿಕೆ ಐತಿಹಾಸಿಕ ಸತ್ಯವೂ, ಸಾರ್ವಕಾಲಿಕವಾಗಿ ಈ ನೆಲದಲ್ಲಿ ಚರ್ಚೆಯಾಗಬೇಕಿರುವ ಗಂಭೀರ ವಿಚಾರವೂ ಆಗಿದೆ ಎಂದು ಸತೀಶ್ ಜಾರಕಿಹೊಳಿ ಅವರ ಪರ ಘೋಷಣೆ ಕೂಗಿದರು. ಹಿಂದೂ ಎಂಬ ಶಬ್ದ ಪಾರಸಿ ಅಥವಾ ಇರಾನಿ ಭಾಷೆಯ ಮೂಲವಾಗಿದ್ದು, ಅಶ್ಲೀಲ ಅರ್ಥವನ್ನು ಧ್ವನಿಸುತ್ತದೆ ಎಂದಷ್ಟೇ ಹೇಳಿ, ಇದಕ್ಕೆ ಗ್ರಂಥಗಳನ್ನು ಆಧಾರವಾಗಿ ನೀಡಿದ್ದಾರೆ. ಅವರು ಎಲ್ಲಿಯೂ ಧರ್ಮದ ವಿಚಾರ ಮಾತನಾಡಿಲ್ಲ. ಆದರೆ ಬೌದ್ಧಿಕವಾಗಿ ದುರ್ಬಲರಾಗಿರುವ ಬಿಜೆಪಿಯ ಹಿರಿ–ಕಿರಿ ನಾಯಕರು ತಮ್ಮ ಧರ್ಮಕ್ಕೆ ಅಪಮಾನವಾಯಿತು ಎಂದು ವಿತಂಡವಾದ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಿಂದೂ ಪ್ರಭುತ್ವ ಎಂಬುದೇನಾದರೂ ಅಸ್ತಿತ್ವಕ್ಕೆ ಬರುತ್ತದೆ ಎಂದರೆ ಅದು ದೇಶದ ವಿನಾಶ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರೇ ಹೇಳಿದ್ದಾರೆ. ಅಂಬೇಡ್ಕರ್ ಮತ್ತು ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಎತ್ತಿರುವ ಪ್ರಶ್ನೆಗಳನ್ನೇ ಸತೀಶ್ ಜಾರಕಿಹೊಳಿ ಪುನರುಚ್ಚರಿಸಿದ್ದಾರೆ. ಮಾತ್ರವಲ್ಲದೆ, ಶತಮಾನಗಳಿಂದಲೂ ದಾರ್ಶನಿಕರು, ಸಂತರು, ಸಾಹಿತಿಗಳು ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸಲು ಸಾಮರ್ಥ್ಯ ಇಲ್ಲದ ಮನುವಾದಿಗಳು ಕುತಂತ್ರದಿಂದ ವಿಚಾರದ ಹಿಂದಿನ ಸತ್ಯವನ್ನೇ ನಾಶ ಮಾಡಲು ಯತ್ನಿಸುತ್ತಾ ಬಂದಿದ್ದಾರೆ ಎಂದು ಕಿಡಿಕಾರಿದರು.

ಇದೇ ವೇಳೆ ಮಾತನಾಡಿದ ಮಾಜಿ ಮೇಯರ್ ಪುರುಷೋತ್ತಮ್, ಹಿಂದೂ ಧರ್ಮ ಕುರಿತಂತೆ ಸತೀಶ್ ಜಾರಕಿಹೊಳಿ ನೀಡಿದ ಹೇಳಿಕೆಯನ್ನಿಟ್ಟುಕೊಂಡು ಬಿಜೆಪಿಯು ರಾಜ್ಯದಾದ್ಯಂತ ಹೋರಾಟ ನಡೆಸಿದೆ. ಹೋರಾಟ ನಡೆಸಿದವರು ಹಿಂದೂ ಧರ್ಮದಲ್ಲಿ ಸಮಾನತೆ ಎಲ್ಲಿದೆ ಎಂದು ತೋರಿಸಲಿ. ಧರ್ಮದಲ್ಲಿ ಅಸ್ಪೃಶ್ಯತೆ, ಶೋಷಣೆ, ಜಾತೀಯತೆ, ದಬ್ಬಾಳಿಕೆ, ಮೌಢ್ಯ, ಕಂದಾಚಾರ ಜೀವಂತವಾಗಿದ್ದು, ಸಮಾನತೆ ಇಲ್ಲವಾಗಿದೆ. ಇದನ್ನು ಪ್ರಶ್ನೆ ಮಾಡಿದ ತಕ್ಷಣ, ಪ್ರತಿಭಟಿಸಲಾಗುತ್ತಿದೆ. ಇದೇನಾ ಪ್ರಜಾಪ್ರಭುತ್ವ ಎಂದು ಪ್ರಶ್ನಿಸಿದರು.

ಹಿರಿಯ ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯ ಮಂಡಿಸಲು ಅವಕಾಶವಿದೆ. 'ನಾನು ಆಕಸ್ಮಿಕವಾಗಿ ಹಿಂದೂವಾಗಿ ಹುಟ್ಟಿದ್ದೇನೆ, ಹಿಂದೂವಾಗಿ ಸಾಯಲಾರೆ' ಎಂದು ಡಾ.ಅಂಬೇಡ್ಕರ್ ತಿಳಿಸಿದ್ದರು. ಈ ವಿಷಯದ ಬಗ್ಗೆ ಚರ್ಚೆಯಾಗಲಿ ಎಂದು ಆಗ್ರಹಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಹಿಂದೂ ವಿಚಾರದಲ್ಲಿ ಸತೀಶ್ ಜಾರಕಿಹೊಳಿ ಹೇಳಿಕೆ ಪ್ರಮಾದವಲ್ಲ



ಮೈಸೂರು, ನ.11(ಎಂಟಿವೈ)– ಮಾಜಿ ಸಚಿವ ಸತೀಶ್ ಜಾರಕಿಹೊಳಿ ಅವರು ಹಿಂದೂ ಪದದ ಮೂಲದ ಬಗ್ಗೆ ಮಾತನಾಡಿರುವುದರಲ್ಲಿ ಯಾವುದೇ ಪ್ರಮಾದವಾಗಿಲ್ಲ. ಅಲ್ಲದೇ, ಅವರು ಕ್ಷಮೆ ಕೇಳುವ ಪ್ರಮೇಯವಿಲ್ಲ ಎಂದು ವಿಮರ್ಶಕ ಪ್ರೊ.ಕೆ.ಎಸ್.ಭಗವಾನ್ ಅಭಿಪ್ರಾಯಪಟ್ಟಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸಮಾನ ಮನಸ್ಕರ ವೇದಿಕೆ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದೂ ಎನ್ನುವುದು ಇಲ್ಲಿನ ಪದವಲ್ಲ. ಅದು ಪರ್ಷಿಯನ್ನರ ಭಾಷೆಯಲ್ಲಿದೆ. ಅಕ್ಷರ ಬದಲಾಗಿರುವುದರಿಂದ ಹಿಂದೂ ಪದದ ಬಗ್ಗೆ ಜನರಲ್ಲಿ ಸರಿಯಾದ ಮಾಹಿತಿ ಇಲ್ಲವಾಗಿದೆ. 'ಅ' ಅಕ್ಷರದ ಬದಲು 'ಹ' ಅಕ್ಷರ ಬಳಕೆಯಾಗುವ ಕಾರಣ ಸಿಂಧೂ ಪದವನ್ನು ಹಿಂದೂ ಎಂದು ಕರೆಯಲಾಗಿದೆ ಎಂದರು. ವೇದ, ಉಪನಿಷತ್ತು, ಪುರಾಣ, ಉಪ ಪುರಾಣಗಳಲ್ಲೆಲ್ಲಿಯೂ ಹಿಂದೂ ಪದ ಬಳಕೆಯಾಗಿಲ್ಲ. ಅಲ್ಲಿರುವುದೆಲ್ಲ ಚಾತುರ್ವರ್ಣ, ವೈದಿಕ ಧರ್ಮ ಮಾತ್ರ ಇದೆ. ನಾನು ಮೇಲು, ನೀನು ಕೀಳು ಎಂದು ಹೇಳುವುದು ಯಾವ ಧರ್ಮ ಎಂದು ಪ್ರಶ್ನಿಸಿದರಲ್ಲದೆ, ಕ್ರೈಸ್ತ, ಮುಸ್ಲಿಂ ಧರ್ಮಗಳಿಗೆ ಮತಾಂತರವಾದವರು ಬಳಿಕವೇ ಆ ಧರ್ಮದ ಧಾರ್ಮಿಕ ಮುಖಂಡರಾಗಬಹುದಾಗಿದೆ. ಆದರೆ ಹಿಂದೂ ವೈದಿಕ ಧರ್ಮದಲ್ಲಿ ಕೇವಲ ಒಂದೇ ಜಾತಿಯವರೇ ಪುರೋಹಿತರಾಗಿರುತ್ತಾರೆ. ಹೀಗಾಗಿ ಇಲ್ಲಿ ಸಮಾನತೆ ಎಲ್ಲಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸತೀಶ್ ಜಾರಕಿಹೊಳಿ ಅವರ ವಿರುದ್ಧ ರಾಜಕೀಯ ಹಿತಾಸಕ್ತಿಗಾಗಿ ಕೆಲವರು ಹೋರಾಟ ನಡೆಸುತ್ತಿರುವುದು ಸರಿಯಲ್ಲ. ಸಿಎಂ ಬಸವರಾಜ ಬೊಮ್ಮಾಯಿ ಸಹ ಶೂದ್ರರೇ ಆಗಿದ್ದಾರೆ. ದಿನನಿತ್ಯ ಹಿಂದೂ ಸಂಸ್ಕೃತಿ ಎನ್ನುವವರಿಗೆ ಮಾನವೀಯತೆ ಎಲ್ಲಿದೆ. ಇಲ್ಲಿ ಅಸಮಾನತೆ ಬಿಟ್ಟರೆ ಬೇರೇನೂ ಇಲ್ಲ. ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ತನಗನ್ನಿಸಿದ್ದನ್ನು ಹೇಳಬಾರದ ಪರಿಸ್ಥಿತಿ ಸೃಷ್ಟಿಸುವುದು ಸರಿಯಲ್ಲ. ಹೀಗಾಗಿ ಸತೀಶ್ ಜಾರಕಿಹೊಳಿ ಅವರು ಕಾರಣಕ್ಕೂ ಕ್ಷಮೆ ಯಾಚಿಸಬಾರದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಲೇಖಕ ಸಿದ್ದಸ್ವಾಮಿ, ಸೋಮಯ್ಯ ಮಲೆಯೂರು ಹಾಗೂ ಜವರಪ್ಪ, ರೇವಣ್ಣ ಇದ್ದರು.

ಮಕ್ಕಳಿಗೆ ವಿಡಿಯೋ ಭಾಷಣ ಸ್ಪರ್ಧೆ; ಹಿರಿಯರಿಗೆ ಗಾಯನ ಸ್ಪರ್ಧೆ

ಮೈಸೂರು, ನ.11(ಎಂಟಿವೈ)– ಸ್ವರಾಂಜಲಿ ಸಾಂಸ್ಕೃತಿಕ ತಂಡದ ವತಿಯಿಂದ ಮಕ್ಕಳಿಗಾಗಿ ವಿಡಿಯೋ ಭಾಷಣ ಸ್ಪರ್ಧೆ ಹಾಗೂ ಹಿರಿಯರಿಗಾಗಿ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸದಸ್ಯ ಮಧುಸೂದನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳಿಗಾಗಿ 'ಹಿರಿಯ ಚೇತನರಿಗೆ ಪುಟ್ಟಮಕ್ಕಳ ಹಾಗೂ ಪುಟ್ಟಮಕ್ಕಳಿಗೆ ಹಿರಿಯ ಚೇತನರ ಅವಶ್ಯಕತೆ' ಕುರಿತಂತೆ ವಿಡಿಯೋ ಭಾಷಣ ಸ್ಪರ್ಧೆ ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ 14 ವರ್ಷದೊಳಗಿನ ಮಕ್ಕಳು ನ.15ರೊಳಗೆ 3 ನಿಮಿಷದ ವಿಡಿಯೋ ಮಾಡಿ 8095180174 ನಂಬರ್‌ಗೆ ವಾಟ್ಸಾಪ್ ಕಳುಹಿಸಬೇಕು. ಇದರಲ್ಲಿ ಪ್ರಥಮ ಬಹುಮಾನ ಪಡೆದವರಿಗೆ ವೇದಿಕೆಯಲ್ಲಿ ಮಾತನಾಡುವ ಅವಕಾಶ ಕಲ್ಪಿಸಲಾಗುವುದು. ಅಲ್ಲದೆ, ನ.13ರಂದು ಬೆಳಗ್ಗೆ 9ಕ್ಕೆ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಹಿರಿಯರಿಗಾಗಿ ಗಾಯನ ಸ್ಪರ್ಧೆ ಆಯೋಜಿಸಲಾಗಿದೆ ಎಂದರು. ಡಿ.11ರಂದು ಜೆ.ಕೆ. ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತಮಹೋತ್ಸವ ಭವನದಲ್ಲಿ 'ಹಣ್ಣೆಲೆ–ಚಿಗುರು' ವಿನೂತನ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಸ್ಪರ್ಧೆ ಹಾಗೂ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿಚ್ಛಿಸುವವರು ದೂ. 99862 30050 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸದಸ್ಯ ಡಾ. ರಘುವೀರ್ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ವಾಣಿಜ್ಯ ಮಳಿಗೆ & ತೋಟ ಬಾಡಿಗೆಗೆ / ಭೋಗ್ಯಕ್ಕಿದೆ

ಆರ್.ಕೆ.ನಗರದ ಸುಯೋಗ ಆಸ್ಪತ್ರೆ ಪಕ್ಕ ಡಬಲ್ ಮಳಿಗೆ (12x18) ಬಾಡಿಗೆಗಿದೆ. ಜಯಪುರ ಗ್ರಾಮದಲ್ಲಿ 7 ಎಕರೆ ತೆಂಗಿನ ಹಾಗೂ ಮಾವಿನ ತೋಟ ಭೋಗ್ಯಕ್ಕಿದೆ. ಉತ್ತಮ ನೀರಿನ ಸೌಲಭ್ಯವಿದ್ದು, ರಿಂಗ್ ರಸ್ತೆಯಿಂದ 14km ಇದೆ.

7676265267
8867150636

BUILT TO SUIT FOR INDUSTRIAL GODOWN

for Rent 3600 Sqft in Police Layout Mysore (Corner Site) 500 meters from Ring Road. Contact No.

9901628663

ಭೋಗ್ಯ / ಬಾಡಿಗೆಗೆ

2BHK - W/F, 1BHK - S/F ಕುವೆಂಪುನಗರ, ಮೈಸೂರು. ಸಸ್ಯಹಾರಿಗಳಿಗೆ ಮಾತ್ರ, ಮಧ್ಯವರ್ತಿಗಳು ಕ್ಷಮಿಸಿ.

8861988159
9686576399

SITE FOR SALE

30x40 N-W Corner Site @ PAMA Enclave Near Vasanthanagar, Mysore.

9742144553 / 9844226639

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86,000.

9740733021 / 9535028750

ಬೈಕ್ ರೈಡರ್ ಬೇಕಾಗಿದ್ದಾರೆ

rapido BIKE TAXI

ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು ಡಿ.ಎಲ್, ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.

04045209698

Document Lost

Jayamma, No. 1518, 4th Cross, Irwin Road, Lashkar Mohalla, Mysore-570 001, I lost original sale deed (No. 1518, 4th Cross, Irwing Road, Lashkar Mohalla, Mysore, dated 18-6-1994).

Finders please contact:

Mob: 7829651515

WANTED FOR Bhaskar Heart Centre


Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Pharma Assistant	PUC / Degree
Housekeeping	SSLC

0821-2499188 / 9880186386

S.K. CONSTRUCTION

ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Plan ಮತ್ತು Loan ಮಾಡಿಸಿ 3D Elivation ಸಹಿತ ಹೊಸ ಮನೆ Construction ಮಾಡಿಕೊಡುತ್ತೇವೆ.

9620528490



V-GUARD
V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

ಹೊಸ ಮನೆ ಮಾರಾಟಕ್ಕಿದೆ

30x40 ಪೂರ್ವ ದಿಕ್ಕು ಲಾಲ್‌ಬಹದ್ದೂರ್ ಶಾಸ್ತ್ರಿನಗರದಲ್ಲಿ ಮೈಸೂರು. ಸಂಪರ್ಕಿಸಿ.

9986737936
8749092901

GOLD COMPANY

ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)

9964522225

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಮಾರಾಟಕ್ಕಿದೆ

ಅಗ್ರಹಾರ ಬಸವೇಶ್ವರ ರಸ್ತೆ, 5ನೇ ಕ್ರಾಸಿನಲ್ಲಿರುವ ಮನೆ ನಂ.2249 K-11 ಸಂಖ್ಯೆಯ ಮನೆ ಮಾರಾಟಕ್ಕಿದೆ. ಅಳತೆ 30x42 ಅಡಿ, ಸಿಂಗಲ್ ಬೆಡ್ ರೂಂನ 3 ಮನೆ, ಎರಡು ಬೆಡ್ ರೂಂನ 2 ಮನೆ. ಆಸಕ್ತರು ಸಂಪರ್ಕಿಸುವ ದೂರವಾಣಿ ಸಂಖ್ಯೆ:

9972596865 / 8494927949

ಹೊಸ ಮನೆ ಮಾರಾಟಕ್ಕಿದೆ

1,400 ಅಡಿ ಹಾಗೂ ಸೈಟುಗಳು ಮಾರಾಟಕ್ಕಿವೆ. ಶ್ರೀರಾಂಪುರ ರಿಂಗ್ ರೋಡ್, ಮೈಸೂರು.

8050345574

SITE FOR SALE

60x40 Feet, East facing, site at beautiful gated layout Ahad City 6km from Ring Road towards Mahadevapura Road. Rs.1500 Per SFT. Contact:

9901231117

ಹೊಸ ಚೀಟಿಗಳ ಪ್ರಾರಂಭ

ಸೀಜಿ ನರಸಿಂಹಸ್ವಾಮಿ ಚಿಟ್ಸ್ (ಕಂ) ಪ್ರೈಲಿ., ಮೈಸೂರು / ಹಾಸನ.

ಚೀಟಿ ಮೊತ್ತ	ತಿಂಗಳು	ತಿಂಗಳ ಕಂತು	3ನೇ ತಿಂಗಳಿಂದ
1 ಲಕ್ಷ	25	4000/–	3000/–
2 ಲಕ್ಷ	25	8000/–	6000/–
5 ಲಕ್ಷ	25	20,000/–	15,000/–
10 ಲಕ್ಷ	50	20,000/–	15,000/–
10 ಲಕ್ಷ	100	10,000/–	7,500/–
25 ಲಕ್ಷ	100	25,000/–	18,750/–

7892303484 / 8749077453

TV ಕೆಟ್ಟಿದೆಯೇ? LCD, LED TV

ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ

ನುರಿತ ಸರ್ವೀಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ

ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ

9342114069

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Mysuru

MYSURU 9611028523 MANGALORE 9343142258

ಬೇಕಾಗಿದ್ದಾರೆ

ಚೈನೀಸ್ ಮತ್ತು ಇಂಡಿಯನ್ ಮತ್ತು ತಂದೂರಿ ಚೆಫ್ ಬೇಕಾಗಿದ್ದಾರೆ. ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್ ಮೈಸೂರ್....ಎಲ್ಲಾ ಸೌಲಭ್ಯ, ಉತ್ತಮ ಸಂಬಳ ಕೊಡಲಾಗುವುದು. ಸಂಪರ್ಕಿಸಿ:

Mob: 78990 28086

FOR SALE

1) 30x40 House with two shops Near Shivanna Hotel, Kuvempu Circle 1st Stage, Rajivnagar, Mysore is for Sale

FOR SALE

2) Constructed two Shops (runing) with Compound at a site (MUDA alloted) at Shaktinagar, 40x60 Sathgalli - Mysore.
3) House wanted at Rajivnagar (30x40) for Purchase. (Brokers Excuse)

8217710357 / 9945738975

SAI CODING CENTER

Now Online Classes Available for C, CC+, Java, python, HTML, CSS, Full Stack Development Course (Front End + Back End) Java Script, Android Development Course and Much More.....

Plz Contact:

7411815245

SITES FOR SALE

30x40 Sites. Bank loan upto 80%. Near Gurur Bus Stop, Ramabainagar, Mysore. DTCP Approved (Corporation limits) 1.5kms from JP Nagar Ring Road

Mob: 8660105902

ಕೇರಳ ಶ್ರೀ ಭಗವತಿ ಮಹಾಮಾಂತ್ರಿಕ ಜ್ಯೋತಿಷ್ಯರು ಪಂಡಿತ್ ಗುರುನಂದನ್

ಮೊ.: 9353250462

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ನಿಮ್ಮ ಸಮಸ್ಯೆಗಳಾದ ಪ್ರೇಮ ವಿವಾಹ, ಪತಿ–ಪತ್ನಿ ಕಲಹ, ವ್ಯಾಪಾರ, ಡೈವರ್ಸ್, ಸಾಲಭಾದೆ, ಶತ್ರುಕಾಟ, ಲೈಂಗಿಕ ಸಮಸ್ಯೆ, ಸಂತಾನ ಫಲ, ಮದುವೆ ಕಾರ್ಯದಲ್ಲಿ ವಿಘ್ನ, ಅತ್ತೆ ಸೊಸೆ ಕಲಹ, ನಿಮ್ಮ ಮನದಾಳದ ಯಾವುದೇ ಗುಪ್ತ ಸಮಸ್ಯೆ ಇದ್ದರೆ ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರೆ ಕೂಡಲೇ ಸಂಪರ್ಕಿಸಿ 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ನಿಮ್ಮ ಸಮಸ್ಯೆಗಳಿಗೆ ಫೋನಿನ ಮೂಲಕ ಸಂಪರ್ಕಿಸಿ. ವಿಳಾಸ ಮೈಸೂರು

ಜಮೀನು ಮಾರಾಟಕ್ಕಿದೆ

ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನದಿಂದ 9 ಕಿ.ಮೀ ಅಂತರದಲ್ಲಿ ಮೈಸೂರು ಸತ್ಯಮಂಗಲಂ ರಾಷ್ಟ್ರೀಯ ಹೆದ್ದಾರಿಯಲ್ಲಿ ಮುಖ್ಯ ರಸ್ತೆಗೆ 1 ಎಕರೆ 10 ಗುಂಟೆ ಜಮೀನು ಮಾರಾಟಕ್ಕಿದೆ.

+91 98453 95000 | 9740000767

ನಿರ್ಮಲ ಸರ್ವೀಸ್

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು ಪಂ. ಎಸ್. ಕುಮಾರಸ್ವಾಮಿ

MOB: 9880583804

ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.

ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ವಧು ಬೇಕಾಗಿದೆ

ಸ್ವಂತ ಮನೆ ಆಸ್ತಿ ಹೊಂದಿರುವ ವರನಿಗೆ ಬಡತನದ ಅನಾಥ ಮಕ್ಕಳಿಲ್ಲದ ಬಾಳು ಬೇಕು ಅನ್ನುವ ವಿಧವೆ ಅಥವಾ ವಿಚ್ಛೇದಿತೆ 35 ವರ್ಷದೊಳಗಿನ ಲಿಂಗಾಯಿತ ಅಥವಾ ಜೈನರು, ವಿಶ್ವಕರ್ಮ, ಬ್ರಾಹ್ಮಣರು ಮಾತ್ರ ನೇರವಾಗಿ ಸಂಪರ್ಕಿಸಿ:

6366125016

CHANGE OF NAME

This is to declare that I, Rajani, resident of #64/2, 9th West Cross, Ashoka Road, Lashkar Mohalla, Mysuru - 570001, Karnataka, India have changed my name to Rajani .Y.C. vide Affidavit sworn to before Notary Sri. Mallikarjuna Swamy, on 23.09.2022 hereafterwards I wish to be called and known for all acts, deeds and things as Rajani.Y.C. only.

Sd/- Rajani.Y.C

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

7676844160
6361056646

ಕೇರಳ ಕೊಳ್ಳೇಗಾಲ ಜ್ಯೋತಿಷ್ಯರು ಪಂ॥ ಮೋಹನ್ ಪೊದುವಾಳ್ (ಕೇರಳ) ಪಂ॥ ಮೋಡಿ ಕೃಷ್ಣಪ್ಪ ಮಾಂತ್ರಿಕರು (ಕೊಳ್ಳೇಗಾಲ)

ಮೊ.: 9036984793

ಇವರು ಕೇರಳ ಮಾಂತ್ರಿಕ ಶಕ್ತಿ ಮತ್ತು ಕೊಳ್ಳೇಗಾಲದ ಮೋಡಿ ಮಾಂತ್ರಿಕ ವಿದ್ಯೆಯಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ಬಾಧೇ, ಪ್ರೇತ ಬಾಧೇ ಇನ್ನೂ ಅನೇಕ ಗುಪ್ತ ಜಟಿಲವಾದ ಘೋರ ನಿಗೂಢ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ಶತಸಿದ್ಧ. ಖಾಯಂ ವಿಳಾಸ:– #1140, ವಿಹಾರ ಮಾರ್ಗ, ಹಳೆ ಹಾಲಿನ ಡೈರಿ ಎದುರು, ಟೆಂಪಲ್ ಟ್ರೀಸ್ ಅಪಾರ್ಟ್‌ಮೆಂಟ್ ಪಕ್ಕ, ಸಿದ್ಧಾರ್ಥನಗರ, ಮೈಸೂರು – 11.

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್

ಮೊ.: 9731839596

ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಉಚಿತ ಉಚಿತ ಉಚಿತ

JESWA ಸಂಸ್ಥೆಯಿಂದ ಮೈಸೂರಿನಲ್ಲಿ OBC, Minority, ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ (SC, ST) 45 ವರ್ಷ ಹಾಗೂ ಇತರೆಯವರಿಗೆ 40 ವರ್ಷ ವಯೋಮಿತಿ ಒಳಗೆ ಇರುವ ನಿರುದ್ಯೋಗ ಯುವತಿಯರು ಮತ್ತು ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

9844264134, 9844736136

30x40 ಸೈಟು @ Rs. 15 ಲಕ್ಷ

MUDA Approved Layout ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ ಚಾಮುಂಡಿ ಬೆಟ್ಟದ ಹಿಂಭಾಗ ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ

Mob: 9538583377

SHOP FOR RENT

ಅಳತೆ : 15/15 Ramakrishna Nagara, 'H' Block, Puneeth Convention Hall Building Contact No.:

9845011816
9945250618

ATTENTION

ಬ್ಯೂಟಿಕ್ ಒಂದು take over ಗೆ ಇದೆ ಕುವೆಂಪುನಗರದಲ್ಲಿ ಆಸಕ್ತಿ ಇರುವವರು ಸಂಪರ್ಕಿಸಿ.

9901239437

Star Solar



Star Solar Renewable Energy
ಕೇವಲ Easy EMI 19,499/- 200 Ltr
*5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು
Old system Exchange offer available
Manufacturing : Belawadi Industrial Sub,Mysore
9945616293 / 9449966293

WANTED

RECEPTIONIST & HOUSE KEEPING

ROYAL LOOK SALON

PROFESSIONAL UNISEX

#468/A, Vinaya Marga, Opp. Jain Temple, Siddartha Layout, Nazarbad Mohalla, Mysore - 570011

M : 9036206233

ಬೇಕಾಗಿದ್ದಾರೆ

ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

10,000/- Basic Salary + 10,000/- Incentive

8884171888

ಕೇರಳ ಪ್ರಸಿದ್ಧ ಜ್ಯೋತಿಷ್ಯರು Famous Astrologer

ಪಂಡಿತ್ ಸಂತೋಷ್. 9741250896

ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ. ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾಟ–ಮಂತ್ರ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, HDFC ಬ್ಯಾಂಕ್‌ನ ಪಕ್ಕ, ಸಿದ್ಧಾರ್ಥ ಲೇಔಟ್, ಮೈಸೂರು

ಬೇಕಾಗಿದ್ದಾರೆ

ಚಾಮರಾಜನಗರದಲ್ಲಿ ಲೇಡಿಸ್ ಜಿಮ್ & ಯೋಗ ತರಬೇತಿ ನೀಡಲು ಲೇಡಿ ಟ್ರೈನರ್‌ಗಳು ಬೇಕಾಗಿದ್ದಾರೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು ಹಾಗೂ ಭರತ ನಾಟ್ಯ ಟೀಚರ್ ಬೇಕಾಗಿದ್ದಾರೆ. ಆಸಕ್ತಿ ಇರುವವರು ಸಂಪರ್ಕಿಸಿ:

7019751010, 9448804828, 6362100520, 08226355940

ಛತ್ರ ಖಾಲಿ ಇದೆ

08.12.2022 (ಗುರುವಾರ)
09.12.2022 (ಶುಕ್ರವಾರ)
10.12.2022 (ಶನಿವಾರ)
ರಂದು ಛತ್ರ ಖಾಲಿ ಇದೆ.
ಮಾಧವ ಶೆಣೈ ಕಲ್ಯಾಣ ಮಂಟಪ. #1914, ಇಂಡಸ್ಟ್ರಿಯಲ್ ಸಬರ್ಬ್, ವಿಶ್ವೇಶ್ವರನಗರ, ಮೈಸೂರು

0821-2486426 / 8123389500

ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 40 ವರ್ಷ, ವಿದ್ಯಾರ್ಹತೆ: 7 ರಿಂದ PUC ಮತ್ತು ITI, ಉಚಿತ ಊಟ ಮತ್ತು ರಿಯಾಯಿತಿ ದರದಲ್ಲಿ ರೂಂಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ.

9035381989

WANTED IMMEDIATELY

Quality Executives. (Qualification M.Sc in Food Science) Male. Stores Executives (Qualification any Degree) Male. Age Below : 30 Yrs, Experience: Min 1 to 2 Yrs. Address: The Akshayapatra Foundation Mysore. No.31 18th Cross, Jayanagar, Mysore

9964451366

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ

ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ

ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ)

8050699742 / 7892480649

WANTED GRADUATES

For Pre - School at Bogadi

9113257683

ಬೇಕಾಗಿದ್ದಾರೆ

ಬೆಂಗಳೂರಿನಲ್ಲಿರುವ ಸೌಂಡ್ ಸಿಸ್ಟಮ್ ಮತ್ತು ಲೈಟಿಂಗ್ ಕಂಪನಿಯಲ್ಲಿ ಕೆಲಸ ಮಾಡಲು ಈ ಕೆಳಕಂಡ ಅನುಭವವಿರುವ ಕೆಲಸಗಾರರು ಬೇಕಾಗಿದ್ದಾರೆ. ಎಲೆಕ್ಟ್ರೀಷಿಯನ್‌ಗಳು ಮತ್ತು ಕಾರ್ಪೆಂಟರ್‌ಗಳು – 13,000/–, ಡ್ರೈವರ್‌ಗಳು (HMV ಬ್ಯಾಡ್ಜ್) 15,000/–, ಹೆಲ್ಪರ್‌ಗಳು 10,000/– (ಉಚಿತ ವಸತಿ ವ್ಯವಸ್ಥೆ ಇರುತ್ತದೆ.)

9845026220

ನಾಟಿ ಔಷಧಿ

ಮಂಡಿ ನೋವು ಎಷ್ಟು ಹಳೆಯದಾದರೂ ನಾವು ಕೊಡುವ ನಾಟಿ ಔಷಧದಿಂದ ಕೇವಲ 15 ದಿವಸಗಳಲ್ಲಿ ಶಾಶ್ವತ ಪರಿಹಾರವಾಗುತ್ತದೆ.

(ಡಿಸ್ಟ್ರಿ ಬ್ಯೂಟರ್ ಬೇಕಾಗಿದ್ದಾರೆ.)

8951451333

ದೇವಾಂಗ

12.11.2022 ರಂದು ಶನಿವಾರ ಕುಲಬಾಂಧವರ ಸಭೆಗೆ ದಯ ಮಾಡಿ ಬನ್ನಿರಿ. ಆಹ್ವಾನ ಪತ್ರಿಕೆ ತಲುಪದಿದ್ದವರು ಇದೇ ಆಹ್ವಾನ ಪತ್ರಿಕೆಯೆಂದು ತಿಳಿಯಿರಿ. ಸಭೆಗೆ ಮುನ್ನ ಸರಿಗಮಪ ತಂಡ, ಕಲಾಧಾರೆ ತಂಡ, ಇತರೆಯವರಿಂದ ಮನರಂಜನೆ ಕಾರ್ಯಕ್ರಮ ಏರ್ಪಡಿಸಲಾಗಿರುತ್ತದೆ.

9844058155

FOR SALE

Site 30x50 W/F, House 13 Sq. (G+1 Floor) Vaastu Compliant Chamunde Township - Gated Community (MUDA Approved) Nanjanagudu, Off Ooty Highway

9480182216

FOR SALE

1) 30x40 12 Lakhs 30x50 15 L sites available attch Brahmins E blk layout
2) 12x36 G+2 House Kuvempu Nagar
28 Guntas Land in Varakodu
3) 40x60 Commercial Bannur Road
4) 30 x40 10 lakhs Hunsur Road
5) 30x40 20 lakhs Dadadahalli (JP Nagar)

Prakruthi Properties

90359 90359 / 95386 90359

ಸೈಟು ಮಾರಾಟಕ್ಕಿದೆ

60x40 ಸೈಟು ಸೇಲ್‌ಗೆ, ಜೆ.ಪಿ.ನಗರ ಪಕ್ಕ ರೈಲ್ವೆ ಲೇಔಟ್, ಗೊರೂರು, ಮೈಸೂರು. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

9886192647

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳಿನಲ್ಲಿರುವ ಕಾಲೇಜಿಗೆ (CIPET) ಹೌಸ್ ಕೀಪಿಂಗ್, ಗಾರ್ಡನಿಂಗ್ ಮತ್ತು ಆಫೀಸ್ ಅಸಿಸ್ಟೆಂಟ್ (ಕಂಪ್ಯೂಟರ್ ಜ್ಞಾನ ಉಳ್ಳವರು ಕನ್ನಡ ಮತ್ತು ಇಂಗ್ಲೀಷ್) ಬೇಕಾಗಿದ್ದಾರೆ. ESI+PF ಇರುತ್ತದೆ. ಸಂಬಳ: 12,250/– ಸಂಪರ್ಕಿಸಿ:

9986501873

HOUSE FOR RENT / LEASE

G/F, East Facing, 2 BHK, 2w Parking, Gasgeyser, Near Shantala Signal light. Only Veg.

9738760299

ಉದ್ಯೋಗಾವಕಾಶ

ಕೇಂದ್ರ / ರಾಜ್ಯ ನಿವೃತ್ತ ನೌಕರರಿಗೆ, ಸಾರ್ವಜನಿಕರಿಗೆ, ಉದ್ಯಮದಾರರಿಗೆ ಬ್ಯಾಂಕ್ ಸಮೂಹದಿಂದ office ಹುದ್ದೆಗೆ ಬೇಕಾಗಿದ್ದಾರೆ. Fixed Salary + PF, age 30 years & above.

8971374750

ಹೊಸ ಮನೆ ಮಾರಾಟಕ್ಕಿದೆ

ವಿಜಯನಗರ 4ನೇ ಹಂತ, 30x50, E/F, 3BHK, 26 ಚದರ, ಡ್ಯೂಪ್ಲೆಕ್ಸ್ ಮನೆ, ಅತ್ಯಾಧುನಿಕ ಸೌಲಭ್ಯವಿರುವ ಹೊಸಮನೆ ಖರೀದಿದಾರರು ಸಂಪರ್ಕಿಸಿ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.

9342119411
7022591243

ಸೈಟು ಮಾರಾಟಕ್ಕಿದೆ

30x40 ಜೆ.ಪಿ.ನಗರ, 2ನೇ ಹಂತ, ಪೆನೆಸಿಯ ಆಸ್ಪತ್ರೆಯ ಹಿಂಭಾಗ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ

9900515158 / 9945566356

ವಧು ಬೇಕಾಗಿದೆ

ಬ್ರಾಹ್ಮಣ ವರನಿಗೆ ಯಾವುದೇ ಬ್ರಾಹ್ಮಣ ಅಥವಾ ಸಸ್ಯಹಾರಿ ವಧು ಬೇಕಾಗಿದೆ. ವಿಧವೆ, ವಿಚ್ಛೇದಿತರಿಗೂ ಅವಕಾಶ ಇದೆ. ಕೂಡಲೇ ಸಂಪರ್ಕಿಸಿ.

9341208567

WANTED

Electrician Required (ITI) Contact No.:

9845011816
9945250618

ಮೈಸೂರು ಮ್ಯಾರೇಜ್ ಬ್ಯೂರೋ

ವಧು ವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ.

ಡಾ॥ಗುರುರಾಜ ಮೈಸೂರು

6361740552
www.bhandhana.com

ಗ್ಯಾಸ್ ಪೈಪ್ ಲೈನ್ ಮತ್ತು ಗ್ಯಾಸ್ ಸುರಕ್ಷತೆ ಸೇವೆ

9686594241
9019094163
gaspipelinemysore.com

ಬೇಕಾಗಿದ್ದಾರೆ

ಕರ್ನಾಟಕದಾದ್ಯಂತ ಕಂಪನಿ ಹಾಗೂ ಆಫೀಸ್ ವರ್ಕ್‌ಗಳಿಗೆ ಯುವಕ, ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ ವೇತನ + ಓಟಿ 18000 ರಿಂದ 30000

9844709111 / 9844909111

ಕೂಡಲೇ ಬೇಕಾಗಿದ್ದಾರೆ

ಆಕರ್ಷಕ ಸಂಬಳದೊಂದಿಗೆ 12 ರಿಂದ 20 ಸಾವಿರದವರೆಗೂ ಸಂಪಾದಿಸಬಹುದು. ವೃದ್ಧರು ಮತ್ತು ರೋಗಿಗಳನ್ನು ನೋಡಿಕೊಳ್ಳಲು ಹೋಮ್ ನರ್ಸಿಂಗ್ ಕೆಲಸಕ್ಕೆ ಅನುಭವವುಳ್ಳ ಮಹಿಳೆಯರು ಹಾಗೂ ಪುರುಷರು ಹಾಗೂ ಹುಡುಗ – ಹುಡುಗಿಯರು ಕೂಡಲೇ ಬೇಕಾಗಿದ್ದಾರೆ. ಹಾಗೂ ಲಿಂಗಾಯಿತರು ಹಾಗೂ ಬ್ರಾಹ್ಮಣ ಜಾತಿಯ ಹೆಂಗಸರು ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ಬೆಸ್ಟ್ ಹೋಮ್ ಕೇರ್

9886045458 / 9886023235

ವಧು–ವರರ ಮಾಹಿತಿ ಕೇಂದ್ರ

ಒಕ್ಕಲಿಗ / ಲಿಂಗಾಯತ / ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE / B.Tech / MBA / MS / MBBS / MS-MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ಸ್ ಡಿಗ್ರಿ ದೇಶೀಯ / ವಿದೇಶಿಯ ವಧು–ವರರ ಮಾಹಿತಿಗಾಗಿ ಸಂಪರ್ಕಿಸಿ.

ಅಂಚೆಪೇದೆ ವ್ಯಾಘ್ರಮೋನಿ

ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು.

7259395800 / 7349224222

SPARE PARTS FOR SALE

Two Wheeler, Three Wheeler and four Wheeler Auto Spare Parts for Sale of a closed shop. Those who are interested can contact:

9449065947

ತಕ್ಷಣ ಬೇಕಾಗಿದ್ದಾರೆ

ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
1) ಬಲ್ಲಾಳ್ ಸರ್ಕಲ್, 2) ವಿದ್ಯಾರಣ್ಯಪುರಂ 3) ಸಯ್ಯಾಜಿರಾವ್ ರಸ್ತೆ, 4) ನಜರ್‌ಬಾದ್
ಉಚಿತ ವಸತಿ ಹಾಗೂ ಊಟದ ವ್ಯವಸ್ಥೆಯಿದೆ ESI / PF ಜೊತೆಗೆ ಉತ್ತಮ ಸಂಬಳವಿದೆ. ಸಂಪರ್ಕಿಸಿ

9686422400 / 9686566261
9242406261

ಕೇರಳ ಶ್ರೀ ಆದಿ ಶಕ್ತಿ ಜ್ಯೋತಿಷ್ಯಾಲಯ ಪಂಡಿತ್ : ಶಿವಪ್ರಸಾದ್ ತಂತ್ರಿ

ಮೊ.: 9686525894

ನಿಮ್ಮ ಜೀವನದ ಯಾವುದೇ ರೀತಿಯ, ದಾಂಪತ್ಯ ಸಮಸ್ಯೆ, ಲೈಂಗಿಕ, ಶತ್ರುಗಳ ಕಾಟ, ಮನೆಯಲ್ಲಿ ಅಶಾಂತಿ, ಜಾಗದ ತೊಂದರೆ ಇನ್ನೂ ಯಾವುದೇ ರೀತಿಯ ಕಠಿಣ ಸಮಸ್ಯೆಗಳೇನೆ ಇದ್ದರೂ ಕೇರಳದ ಶಾಸ್ತ್ರೋಕ್ತ ಪದ್ಧತಿಯಿಂದ ಬಲಿಷ್ಠ ದೇವ ದೈವಗಳ ಮಂತ್ರ ಶಕ್ತಿಗಳಿಂದ ಕೇವಲ 2 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ. ಮನೆ ವಿಳಾಸ: ಕುಮಾರ್ ಮೆಡಿಕಲ್ ಪಂಚಮಂತ್ರರೋಡ್, ಕುವೆಂಪುನಗರ, ಮೈಸೂರು.

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮಹಾ ಪುರುಷರ ಸದಾ ನೆನೆಯಬೇಕು

ಮಂಡ್ಯದಲ್ಲಿ ಕನಕದಾಸರ ಜಯಂತಿ ಆಚರಣೆ



ಮಂಡ್ಯ,ನ.11– ಸಮಾಜದ ಮಹಾನ್ ಪುರುಷರನ್ನು ನಾವು ಸದಾ ನೆನೆಯಬೇಕು. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲ ಕೃಷ್ಣ ತಿಳಿಸಿದರು.

ಶುಕ್ರವಾರ ನಗರದ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಮಾಜದಲ್ಲಿ ತಾಂಡವವಾಡುತ್ತಿದ್ದ ಮೌಢ್ಯವನ್ನು ಹೋಗಲಾಡಿಸಿ ಸಮ-ಸಮಾಜ ನಿರ್ಮಾಣ ಮಾಡುವಲ್ಲಿ ಕನಕದಾಸರ ಪಾತ್ರ ಅಪಾರ. ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಾರ್ವಜನಿಕರಿಗೆ ಸದಾ ಮೌಲ್ಯಗಳ ಬಗ್ಗೆ ತಿಳಿಸುತ್ತಿದ್ದರು ಎಂದರು.

ಸರ್ಕಾರ ಪುಣ್ಯ ಪುರುಷರ ಜಯಂತಿಗಳನ್ನು ಆಚರಣೆ ಮಾಡಲು ಅವಕಾಶ ಮಾಡಿಕೊಟ್ಟಿದೆ. ಜೊತೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲರೂ ಒಂದೇ ಎಂಬ ಜಯಂತಿಗಳನ್ನು ಆಚರಣೆ ಮಾಡುತ್ತ ಬಂದಿದೆ. ಕನಕದಾಸರು ದಾಸ ಸಾಹಿತ್ಯಕ್ಕೆ ಹಲವಾರು ಸಾಹಿತ್ಯದ ಕೊಡುಗೆಯನ್ನ ನೀಡಿದ್ದಾರೆ ಎಂದು ಹೇಳಿದರು.

ಕನಕದಾಸರು ನಾಡಿಗೆ, ಸಂಸ್ಕೃತಿಗೆ ಹಾಗೂ ಸಮಾಜಕ್ಕೆ ಮೌಲ್ಯಯುತ ಕೊಡುಗೆಯನ್ನು ಬಿಟ್ಟು ಹೋಗಿದ್ದಾರೆ. ಅಂತಹ ಮಹಾನ್ ವ್ಯಕ್ತಿಯನ್ನು ನೆನೆಯಬೇಕಾದ್ದು, ನಮ್ಮೆಲ್ಲರ ಕರ್ತವ್ಯ ಎಂದು ತಿಳಿಸಿದರು.

ಕನಕದಾಸರು ಹಲವಾರು ಗ್ರಂಥಗಳನ್ನು ರಚಿಸುವ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಹಾಗೂ ದಾಸ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅಂತಹವನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕನ್ನಡ ಸಹಾಯಕ ಪ್ರಾಧ್ಯಾಪಕರು ಮತ್ತು ಜನಪದ ಚಿಂತಕ ಡಾ.ಎಮ್.ಮಹೇಶ್ ಚಿಕ್ಕಲ್ಲೂರು ಅವರು ಮಾತನಾಡಿ, ಮಹಾನ್ ನಾಯಕರನ್ನು ಕೇವಲ ಒಂದು ಜಾತಿಗೆ ಸೀಮಿತಗೊಳಿಸ ಬಾರದು. ಇದು ದುರಂತ ಎಂದು ವಿಷಾದ ವ್ಯಕ್ತಪಡಿಸಿದರು. ಒಬ್ಬ ಮಹಾನ್ ವ್ಯಕ್ತಿ ಎಂದರೆ ಅವರ ವ್ಯಕ್ತಿತ್ವವನ್ನು, ಅಸ್ತಿತ್ವವನ್ನು, ಕನ್ನಡತ್ವವನ್ನು ನಾವುಗಳು ಅನುಸರಿಸಿಕೊಳ್ಳುವುದೇ ಜಯಂತಿ.15–16ನೇ ಶತಮಾನದಲ್ಲಿ 250 ದಾಸರಿರುತ್ತಾರೆ. ಅದರಲ್ಲಿ, ಈ ಪೈಕಿ ಸೂದ್ರ ದಾಸರು ಇಮಡಿದ್ದಾರೆ. ಇವರು 314 ಕೀರ್ತನೆಗಳನ್ನು ರಚಿಸಿ ಸಮಾಜದ ಸುಧಾರಣೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಾರೆ. ಇಂತಹ ಮಹಾನ್ ಪುರುಷರನ್ನು ನೆನೆಯ ಬೇಕಾದ್ದು ನಮ್ಮಕರ್ತವ್ಯ. ಕನಕದಾಸರು ತಮ್ಮ ಸಾಹಿತ್ಯದ ಮೂಲಕ ಜೀವನದ ಮೌಲ್ಯಗಳ ಬಗ್ಗೆ ತಿಳಿಸಿದ್ದಾರೆ. ದಾಸ ಕೀರ್ತನೆಗಳ ಮೂಲಕ ಸಮಾಜದ ಅಂಕು–ಡೊಂಕು ಗಳನ್ನು ತಿದ್ದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಂ.ಎಸ್. ಆತ್ಮಾನಂದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಕನ್ನಡ ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎಸ್.ಉದಯ್‌ಕುಮಾರ್, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಉಪಾಧ್ಯಕ್ಷ ಬಿ.ಪುಟ್ಟಬಸವಯ್ಯ, ಕುರುಬರ ಸಂಘದ ಅಧ್ಯಕ್ಷ ಎಂ.ಎಲ್ ಸುರೇಶ್, ಜಿಲ್ಲಾ ಹಿಂದುಳಿದ ವರ್ಗಗಳ ಇಲಾಖೆ ಅಧಿಕಾರಿ ಶ್ರೀನಿವಾಸ್, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜವರೇಗೌಡ ಸೇರಿದಂತೆ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಕುರುಬ ಸಮಾಜದ ಬಾಂಧವರು ನನ್ನನ್ನು ಮನೆ ಮಗನಂತೆ ಆಶೀರ್ವದಿಸಿದ್ದಾರೆ

ಕನಕದಾಸರ ಜಯಂತಿ, ಒನಕೆ ಓಬವ್ವ ಜಯಂತಿಯಲ್ಲಿ ಶಾಸಕ ಪುಟ್ಟರಾಜು



ಪಾಂಡವಪುರ, ನ.11– ತಾಲೂಕಿನ ಕುರುಬ ಸಮುದಾಯದ ಮುಖಂಡರು ನನ್ನನ್ನು ಮನೆಯ ಮಗನ ರೀತಿ ಪ್ರೀತಿಸಿ ಆಶೀರ್ವದಿಸಿದ್ದಾರೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದ್ದಾರೆ.

ಪಟ್ಟಣದ ತಾಲೂಕು ಕಚೇರಿಯ ಆವರಣದಲ್ಲಿ ನಡೆದ ಭಕ್ತ ಕನಕದಾಸರ ಜಯಂತಿ ಹಾಗೂ ಒನಕೆ ಓಬವ್ವ ಜಯಂತಿ ಆಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ನನಗೆ ಜಾತಿ ವ್ಯವಸ್ಥೆಯ ಬಗ್ಗೆ ನಂಬಿಕೆ ಇಲ್ಲ ನಾನೊಬ್ಬ ಒಕ್ಕಲಿಗ ಜಾತಿಯಲ್ಲಿ ಹುಟ್ಟಿದ್ದರೂ ನನ್ನ ಸಮುದಾಯದವರೇ ನನ್ನನು ಜಾಸ್ತಿ ವಿರೋಧ ಮಾಡುತ್ತಾರೆ. ಕ್ಷೇತ್ರದಲ್ಲಿ ನನಗೆ ಕುರುಬ ಸಮುದಾಯ ಸೇರಿದಂತೆ ಇತರೆ ಸಮುದಾಯಗಳು ನನ್ನನ್ನು ಮನೆಯ ಮಗನ ರೀತಿಯ ಆಶೀರ್ವಾದ ಮಾಡಿದ್ದಾರೆ. ಇದರಿಂದಾಗಿಯೇ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದೇನೆ. ಒಮ್ಮೆ ಸಚಿವ, ಸಂಸದನಾಗಿ ಕೆಲಸ ಮಾಡಿದ್ದೇನೆ ಅದರಂತೆ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದ್ದೇನೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿ ಪಡಿಸುವ ಕೆಲಸ ಮಾಡುತ್ತೇನೆ ಎಂದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಶಿವಕುಮಾರ್ ಮಾತನಾಡಿ, ಶಾಸಕ ಸಿ.ಎಸ್.ಪುಟ್ಟರಾಜು ಅವರು ಜನನಾಯಕ ನಾಯಕರು, ಕನಕದಾಸರು, ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿದ್ದಾರೆ. ಕುರುಬ ಸಮುದಾಯದ ನನ್ನನ್ನು ಸಾಮಾನ್ಯ ಕ್ಷೇತ್ರದಿಂದ ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ, ತಾಪಂ ಅಧ್ಯಕ್ಷರಾಗಿ ಮಾಡಿದರು ಎಂದರು. ನಿವೃತ್ತ ಶಿಕ್ಷಕ ಶಿವರಾಜು, ಕನಕದಾಸರ ಕುರಿತು ಉಪನ್ಯಾಸ ನೀಡಿದರು. ಸಮಾರಂಭದಲ್ಲಿ ಪುರಸಭೆ ಅಧ್ಯಕ್ಷೆ ಅರ್ಚನ ಚಂದ್ರು, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ಉಪಾಧ್ಯಕ್ಷ ಪಾಷಾ, ತಹಸೀಲ್ದಾರ್ ಕುಮಾರ್, ಇಒ ಲೋಕೇಶ್ ಮೂರ್ತಿ, ಉಪ ತಹಸೀಲ್ದಾರ್ ಮಹೇಶ್, ಜಿ.ಪಂ.ಲೋಕೇಶ್, ಸೌಹಾರ್ದ ಸಂಘದ ಅಧ್ಯಕ್ಷ ಡಾ.ಸಿ.ಎ.ಅರವಿಂದ್, ಸಿಡಿಪಿಓ ನಟರಾಜು, ಕುರುಬರ ಸಂಘದ ಅಧ್ಯಕ್ಷ ಡಿ.ಹುಚ್ಚೇಗೌಡ ಹಲವರಿದ್ದರು.

ಜಮಾಬಂದಿ ಕಾರ್ಯಕ್ರಮದಲ್ಲಿ ದಾಖಲೆಗಳ ಪರಿಶೀಲನೆ



ಶ್ರೀರಂಗಪಟ್ಟಣ, ನ11– ನಮ್ಮ ಪೂರ್ವಜರ ಆಶೀರ್ವಾದದ ಫಲದಿಂದಾಗಿ ನಾವುಗಳು ಕಂದಾಯ ಇಲಾಖೆಯ ನೌಕರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇವೆ, ಬಹಳ ಗೌರವಯುತವಾಗಿ ರೈತರು ಹಾಗೂ ಜನಸಾಮಾನ್ಯರಿಗೆ ತೊಂದರೆಯಾಗದ ರೀತಿ ಕರ್ತವ್ಯ ನಿರ್ವಹಿಸುವಂತೆ ತಹಸೀಲ್ದಾರ್ ಶ್ವೇತಾ ಎನ್. ರವೀಂದ್ರ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ತಾಲೂಕು ಆಡಳಿತದ ವತಿಯಿಂದ ನಡೆದ "ಜಮಾಬಂದಿ" ಕಾರ್ಯಕ್ರಮದಲ್ಲಿ ದಾಖಲೆಗಳನ್ನು ಪರಿಶೀಲಿಸಿ ನಂತರ ಮಾತನಾಡಿದ ಅವರು, ಜಮಾಬಂದಿ ಪದ್ಧತಿಯು ವಾರ್ಷಿಕ ಕಂದಾಯ ಲೆಕ್ಕಪರಿಶೋಧನೆಯ ಒಂದು ವಿಧಾನವಾಗಿದ್ದು, ಬ್ರಿಟಿಷ್ ಕಾಲದಿಂದಲೂ ಭೂ ಕಂದಾಯದ ಆದಾಯದ ಪ್ರಮುಖ ಮೂಲ ಆಗಿರುವುದರಿಂದ ಸಂಪನ್ಮೂಲ ಕ್ರೋಢೀಕರಣ ಕಾರ್ಯಕ್ರಮವಾಗಿ ಪರಿಗಣಿಸಲಾಗಿದೆ ಎಂದರು.

ಜಮಾಬಂದಿಯು ಇಲಾಖೆಯಿಂದ ನಿರ್ವಹಿಸಲ್ಪಡುತ್ತಿದ್ದು, ಒಂದು ವೇಳೆ ದಾಖಲೆಗಳು ಒಂದಕ್ಕೊಂದು ತಾಳೆ ಆಗದಿದ್ದಲ್ಲಿ, ಖಾಸಗಿಯವರು ಸರ್ಕಾರಿ ಭೂಮಿಯನ್ನು ಕೈವಶ ಪಡಿಸಿಕೊಳ್ಳುವ ಸಾಧ್ಯತೆಗಳಿವೆ. ಜೊತೆಗೆ ಆರ್‌ಟಿಸಿಯಲ್ಲಿನ ತಪ್ಪುಗಳಿಂದಾಗಿ ರೈತರು ಪಹಣಿಗಳನ್ನು ಬ್ಯಾಂಕಿಗೆ ನೀಡಿ ಬೆಳೆ ಸಾಲ ಪಡೆಯುವುದಕ್ಕಾಗಲೀ ಅಥವಾ ತಮ್ಮ ಜಮೀನಿನ ವರ್ಗಾವಣೆ ಮಾಡಿಕೊಳ್ಳಲು ತುಂಬಾ ತೊಂದರೆಯಾಗಲಿದೆ. ಹಾಗಾಗಿ ತಮ್ಮ ಜವಾಬ್ದಾರಿಗಳನ್ನ ಬಹಳ ಅಚ್ಚುಕಟ್ಟಾಗಿ ನಿರ್ವಹಿಸುವಂತೆ ತಿಳಿಸಿದರು.

ಭೂಮಿಯ ಬೆಲೆ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ, ಕಂದಾಯ ಇಲಾಖೆ ಅಧಿಕಾರಿಗಳು ಬೀಳು ಎಂದು ಆರ್‌ಟಿಸಿಯಲ್ಲಿ ನಮೂದು ಮಾಡಿ ತೊಂದರೆ ಕೊಡುತ್ತಾರೆ ಎಂದು ಕಂದಾಯ ಇಲಾಖೆ ಬಗ್ಗೆ ಭಯ ಪಡುತ್ತಾರೆ. ಹಾಗಾಗಿ ಗ್ರಾಮ ಸಹಾಯಕರಿಂದ ಜಿಲ್ಲಾಧಿಕಾರಿಗಳವರೆಗೂ ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುವ ನಾವುಗಳು ಬಹಳ ಭಾಗ್ಯವಂತರು, ತಮ್ಮ ಪೂರ್ವಜರ ಆಶೀರ್ವಾದದಿಂದ ಈ ಹುದ್ದೆ ಲಭಿಸಿದೆ. ಯಾವುದೇ ಒಂದು ಕಪ್ಪು ಚುಕ್ಕಿ ಬಾರದ ರೀತಿ ಕರ್ತವ್ಯ ನಿರ್ವಹಿಸುವಂತೆ ಇಲಾಖಾ ನೌಕರರಿಗೆ ಅವರು ಕಿವಿಮಾತು ಹೇಳಿದರು.

ಈ ವೇಳೆ ಉಪ ತಹಶೀಲ್ದಾರರಾದ ಸಾಕಮ್ಮ ಸುಧಾಮಣಿ ನಾಗರಾಜು, ಕೆ.ದಿನೇಶ್, ಕುಮಾರ್, ಕಂದಾಯ ನಿರೀಕ್ಷಕರಾದ ಜೈಕುಮಾರ್, ಉಮೇಶ್, ಗೋವರ್ಧನ್, ಶಿರಸ್ತೇದಾರ್ ಪ್ರಸನ್ನ, ಉಮೇಶ್, ಗ್ರಾಮಲೆಕ್ಕಿಗರಾದ ಟಿ. ಶ್ರೀಧರ, ರಮೇಶ, ಜೀವನ್, ಸೇರಿದಂತೆ ಕಂದಾಯ ಇಲಾಖಾ ನೌಕರರು ಹಾಜರಿದ್ದರು.

ಡಿಸೆಂಬರ್‌ನಲ್ಲಿ ಕಾಂಗ್ರೆಸ್ ಹಿಂದುಳಿದ ವರ್ಗಗಳ ಸಮಾವೇಶ

ಮಂಡ್ಯ,ನ.11–ಕಾಂಗ್ರೆಸ್ ಪಕ್ಷದ ಸಂಘಟನೆ ಉದ್ದೇಶದಿಂದ ಡಿಸೆಂಬರ್ ತಿಂಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಸಮಾವೇಶ ನಡೆಸಲಾಗುವುದು ಎಂದು ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಹಾಗೂ ಮಾಜಿ ಶಾಸಕ ಮಧು ಬಂಗಾರಪ್ಪ ತಿಳಿಸಿದರು.

ಹಿಂದುಳಿದ ವರ್ಗದ ಸಮುದಾಯವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಮುಂಚೂಣಿಗೆ ತರುವ ನಿಟ್ಟಿನಲ್ಲಿ ರಾಜ್ಯದಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟಿಸುವ ಕೆಲಸಕ್ಕೆ ಮುಂದಾಗಿದ್ದೇವೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕಾಂಗ್ರೆಸ್ ಪ್ರಣಾಳಿಕೆ ಉಪಾಧ್ಯಕ್ಷನಾಗಿಯೂ ನನ್ನನ್ನು ಕಾಂಗ್ರೆಸ್ ಪಕ್ಷ ನೇಮಿಸಿದ್ದು, ಪ್ರಣಾಳಿಕೆಯ ಸಿದ್ಧತೆಗಳು ನಡೆಯುತ್ತಿವೆ. ಅದರಲ್ಲಿ ಹಿಂದುಳಿದ ವರ್ಗಗಳಿಗೆ ಅನುಕೂಲ ಕಲ್ಪಿಸುವ ಯೋಜನೆಗಳನ್ನು ಸೇರಿಸಲಾಗಿದೆ ಎಂದರು.

ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಜನ–ಸಾಮಾನ್ಯರಿಗೆ ಅನುಕೂಲವಾಗುವಂತಹ ಯೋಜನೆಗಳನ್ನು ಜಾರಿಗೆ ತಂದಿತ್ತು. ಡಬಲ್ ಎಂಜಿನ್ ಸರ್ಕಾರ ಅಧಿಕಾರಕ್ಕೆ ಬಂದು ಏನು ಮಾಡಿದೆ ಎಂದು ಪ್ರಶ್ನಿಸಿದರು.

ಪ್ರತಿಮೆ ನಿರ್ಮಾಣ ಮಾಡುವುದೇ ದೊಡ್ಡ ಸಾಧನೆ ಎಂದು ಬಿಜೆಪಿ ಭಾವಿಸಿದೆ. ಬಿಜೆಪಿಗೆ ಬಡವರ ಬಗ್ಗೆ ಚಿಂತನೆ ಇಲ್ಲ. ಸುಳ್ಳು ಹೇಳಿ ಅಧಿಕಾರಕ್ಕೆ ಬಂದು ಜನತೆಗೆ ಏನು ಮಾಡಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ನೊದೆಕೊಪ್ಪಲಿನಲ್ಲಿ ರಸ್ತೆ ಸಂಪೂರ್ಣ ಒತ್ತುವರಿ

ಪಾದರಕ್ಷೆ ಕೈಯಲ್ಲಿಡಿದು ನಡೆದಾಡುವ ದುಸ್ಥಿತಿ ನಿರ್ಮಾಣ



ಮಂಡ್ಯ,ನ.11– ರಸ್ತೆಯನ್ನು ಸಂಪೂರ್ಣವಾಗಿ ಒತ್ತುವರಿ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ತಾಲೂಕಿನ ನೊದೆಕೊಪ್ಪಲು ಗ್ರಾಮದ ಸರ್ಕಾರಿ ಶಾಲೆಗೆ ಹೋಗಲು ವಿದ್ಯಾರ್ಥಿಗಳು ಗದ್ದೆ ಬಯಲು, ಹಳ್ಳಕೊಳ್ಳಗಳೇ ದಾರಿಯಾಗಿದೆ. ವಿದ್ಯಾರ್ಥಿಗಳು ಶೂ ಮತ್ತು ಚಪ್ಪಲಿಗಳನ್ನು ಕೈಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದು ಒತ್ತುವರಿಯಾದ ರಸ್ತೆಯನ್ನು ತೆರವು ಮಾಡಲು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಗ್ರಾಮದ ಸುಮಾರು 110 ಮೀಟರ್ ಉದ್ದ ಹಾಗೂ 82 ಅಡಿ ಅಗಲದ ರಸ್ತೆಯನ್ನು ಗ್ರಾಮದ ಕೆಲವರು ಒತ್ತುವರಿ ಮಾಡಿಕೊಂಡಿದ್ದು, ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳಿಗೆ ಅನಾನುಕೂಲ ಉಂಟು ಮಾಡುತ್ತಿದ್ದಾರೆ. ಒತ್ತುವರಿ ರಸ್ತೆಯನ್ನು ಸಂಪೂರ್ಣವಾಗಿ ಬಿಡಿಸಿಕೊಟ್ಟು ಶಾಲೆಗೆ ಹೋಗಲು ಅನುಕೂಲ ಮಾಡಿಕೊಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ತಹಶೀಲ್ದಾರ್ ಕುಂಞಅಹಮದ್, ನೊದೆಕೊಪ್ಪಲು ಗ್ರಾಮದ ಅಂಗನವಾಡಿ ಮತ್ತು ಶಾಲಾ ವಿದ್ಯಾರ್ಥಿಗಳಿಗೆ ಒತ್ತುವರಿರಸ್ತೆ ಬಿಡಿಸಿಕೊಡುವ ಉದ್ದೇಶದಿಂದ ಗ್ರಾಮಸ್ಥರು ಮನವಿ ಮಾಡಿದ್ದಾರೆ, ರೈತರು ಹಿಡುವಳಿ ಮಾಡುತ್ತಿರುವ ಜಮೀನಿನಲ್ಲಿ ಏಕಾಏಕಿ ಹೋಗಿ ತೆರವು ಕಾರ್ಯಾಚರಣೆ ಮಾಡಿಸಲು ದಾಖಲಾತಿಗಳು ಬೇಕಿದೆ. ಅದರಂತೆ ಸರ್ವೇಯರ್‌ಗಳಿಗೂ ತಿಳಿಸಿದ್ದೇನೆ, ದಾಖಲಾತಿ ಸಮೇತ ರಸ್ತೆ ನಕ್ಷೆ ತೆಗೆದುಕೊಂಡು ಹೋಗಿ ತೆರವು ಮಾಡಿಸುತ್ತೇನೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಮಸ್ಯೆ ಬಗೆಹರಿಸಿ ಕೊಡುತ್ತೇನೆ ಎಂದು ತಿಳಿಸಿದ್ದಾರೆ.

ಮತಾಂತರಕ್ಕೆ ಯತ್ನ ಐವರು ಪೊಲೀಸ್ ವಶ

ಭಾರತೀನಗರ, ನ.11– ಕರಪತ್ರ ಹಂಚುವ ಮೂಲಕ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲು ಪ್ರಯತ್ನಿಸುತ್ತಿದ್ದ ಆರೋಪದ ಮೇಲೆ ಐದು ಮಂದಿಯನ್ನು ಸಾರ್ವಜನಿಕರೇ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಅಣ್ಣೂರು ಚರ್ಚ್ ಬಳಿ ನಡೆದಿದೆ.

ಗ್ರಾಮದ ಚರ್ಚ್ ಬಳಿ ಟಿ.ಎಸ್. ಕುಮಾರ್ ನಾಯಕ್, ಎಸ್.ಸುಮಂತ್, ಈ.ಎನ್.ವಿನಯ್ ಗೌಡ, ಎಸ್.ಸಂದೀಪ್, ಹೇಮಂತ್‌ಕುಮಾರ್ ಎಂಬುವರು ಕ್ರೈಸ್ತ ಧರ್ಮ ಪರವಾಗಿರುವ ಕರಪತ್ರಗಳನ್ನು ಸಾರ್ವಜನಿಕರಿಗೆ ಹಂಚಿ, ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವಂತೆ ಪ್ರಚೋದಿಸುತ್ತಿದ್ದರು ಎಂದು ಸಾರ್ವಜನಿಕರು ದೂರಿದ್ದಾರೆ. ಅಣ್ಣೂರು ರಸ್ತೆಯ ಚರ್ಚ್ ಮುಂಭಾಗದಲ್ಲಿ ಹೋಗುತ್ತಿದ್ದಾಗ ವಾಯ್ಸ್ ಆಫ್ ಜೀಸಸ್ ಪಬ್ಲಿಕೇಷನ್ ಹಾಗೂ ವಾಯ್ಸ್ ಆಫ್ ಜೀಸಸ್ ಮೀಡಿಯಾ ಹೆಸರಿನ ಕರಪತ್ರ ನೀಡಿದ್ದಾರೆ ಎಂದು ಕೆ.ಎಂ.ದೊಡ್ಡಿ ಠಾಣೆಗೆ ನೀಡಿರುವ ದೂರಿನಲ್ಲಿ ಆಪಾದಿಸಲಾಗಿದೆ.

ಐವರನ್ನು ಶಿವರಾಮ್, ರಂಜಿತ್, ನಂದೀಶ್, ಸಂತೋಷ್ ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಕೆ.ಎಂ.ದೊಡ್ಡಿ ಠಾಣೆಯಲ್ಲಿ ದೂರು ದಾಖಲಾಗಿದೆ. ಆರೋಪಿಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ಒಂದನೇ ಪುಟದಿಂದ

ಬೆಂಗಳೂರು ಬೆಳಗುತ್ತಿದೆ: ಚುಂಚ ಶ್ರೀಗಳು

ಮಾನವ ಸಂಪನ್ಮೂಲದ ಸದ್ವಿನಿಯೋಗ ಹಾಗೂ ಕೌಶಲ್ಯಗಳನ್ನು ಆಧರಿಸಿ ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ 64 ಮಾರುಕಟ್ಟೆಗಳು ಬೆಂಗಳೂರನ್ನು ಆರ್ಥಿಕ, ವಾಣಿಜ್ಯ ಶಕ್ತಿ ಕೇಂದ್ರವಾಗಿಸಿವೆ. ಪ್ರಧಾನಿ ಮೋದಿಯವರೂ ಕೂಡ ಅಂತಹ ದೂರದೃಷ್ಟಿಯ ನೇತಾರರಾಗಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ನಾಡಪ್ರಭು ಕೆಂಪೇಗೌಡರ ಜೊತೆಗೆ ಸಂತ ಕನಕದಾಸ ಹಾಗೂ ವೀರ ವನಿತೆ ಒನಕೆ ಓಬವ್ವ ಜಯಂತಿ ಅಂಗವಾಗಿ ವೇದಿಕೆಯಲ್ಲಿ ಅವರ ಭಾವಚಿತ್ರಗಳಿಗೆ ಪ್ರಧಾನಿಯವರು ಗೌರವ ಸಲ್ಲಿಸಿದರು. ಪ್ರಧಾನ ಮಂತ್ರಿಯವರಿಗೆ ಪ್ರಗತಿಯ ಪ್ರತಿಮೆ ಬೆಳ್ಳಿಯ ಪ್ರತಿಕೃತಿ ನೀಡಿ ಮುಖ್ಯಮಂತ್ರಿಯವರು ಗೌರವಿಸಿದರು. ಕೆಂಪೇಗೌಡರ ಕುರಿತ ಕಿರು ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು.

ಕೆಲವು ಸಚಿವರ ಜಹಗೀರಲ್ಲ: ಜೆಡಿಎಸ್ ಕಿಡಿ

ಅಪಮಾನ ಎಂದು ಜೆಡಿಎಸ್ ಬೇಸರ ವ್ಯಕ್ತಪಡಿಸಿದೆ. ನಾಡಪ್ರಭುಗಳ ಪ್ರತಿಮೆ ಸ್ಥಾಪನೆಯ ಕಾಮಗಾರಿಗೆ ಅಡಿಗಲ್ಲು ಹಾಕುವ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿಗಳನ್ನು ಆಹ್ವಾನಿಸಿದ್ದ ಬಿಜೆಪಿ ಸರಕಾರ, ಅದೇ ಪ್ರಧಾನಿಗಳಿಂದ ಪ್ರತಿಮೆ ಲೋಕಾರ್ಪಣೆ ಮಾಡಿಸುವ ಸಮಾರಂಭಕ್ಕೆ ಅವರನ್ನು ಆಹ್ವಾನ ಮಾಡಲಿಲ್ಲ, ಏಕೆ ಎಂದು ಪ್ರಶ್ನೆ ಮಾಡಿದೆ.

ಯಾವುದೋ ಸ್ಥಳೀಯ ಮಟ್ಟದ ಕಾರ್ಯಕ್ರಮ ಆಗಿದ್ದಿದ್ದರೆ ಯಾರೂ ಪ್ರಶ್ನೆ ಮಾಡುತ್ತಿರಲಿಲ್ಲ. ಆದರೆ, ನಾಡಪ್ರಭುಗಳ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಪ್ರಧಾನಿಗಳೇ ಬರುತ್ತಾರೆ ಎಂದರೆ, ನಮ್ಮ ಹೆಮ್ಮೆಯ ಮಾಜಿ ಪ್ರಧಾನಿಗಳನ್ನು ಅಧಿಕೃತವಾಗಿ ಕರೆಯಲೇಬೇಕಿತ್ತು. ಅವರ ಬಗ್ಗೆ ಅನಾದರ ತೋರಿದ್ದು ಕನ್ನಡಿಗರಿಗೆ ಅಪಾರ ನೋವುಂಟು ಮಾಡಿದೆ.

ರಾಜ್ಯ ಬಿಜೆಪಿ ಸರಕಾರ, ಬಿಜೆಪಿ ನಾಯಕರು ರಾಜಕೀಯ ಕಾರಣಕ್ಕಾಗಿ ಮಾಜಿ ಪ್ರಧಾನಿಗಳನ್ನು ಕಡೆಗಣಿಸಿದ್ದಾರೆ ಎನ್ನುವುದು ಎಲ್ಲರ ಭಾವನೆ. ಇದನ್ನು ಬಿಜೆಪಿ ಪಕ್ಷದ ಕಾರ್ಯಕ್ರಮದಂತೆ ನಡೆಸಿದ್ದು ಮಾಜಿ ಪ್ರಧಾನಿಗಳಿಗೆ ಮಾತ್ರವಲ್ಲ, ಸಮಸ್ತ ಕನ್ನಡಿಗರು ಹಾಗೂ ಸ್ವತಃ ನಾಡಪ್ರಭುಗಳಿಗೇ ಮಾಡಿದ ಅಪಮಾನ. ಇದು ಅಕ್ಷಮ್ಯದ ಪರಮಾವಧಿ ಎಂದು ಟೀಕಿಸಿದೆ. ಸರ್ವ ಜನರನ್ನು ಸಮಾನವಾಗಿ ಕಂಡು ಆದರ್ಶ ಪ್ರಭುವಾಗಿದ್ದ ನಾಡಪ್ರಭು ಕೆಂಪೇಗೌಡರನ್ನು ರಾಜಕೀಯಕ್ಕೆ ಎಳೆಯುವ ಕೆಲಸವನ್ನು ಸ್ವತಃ ಪ್ರಧಾನಿ ನರೇಂದ್ರ ಮೋದಿ ಅವರೇ ಮಾಡಿರುವುದು ಸ್ಪಷ್ಟ. ಇದು ಅತ್ಯಂತ ದುರದೃಷ್ಟಕರ. ರಾಜ್ಯ ವಿಧಾನಸಭೆ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡೇ ಪ್ರತಿಮೆ ಅನಾವರಣ ಮಾಡಲಾಗಿದೆ ಎನ್ನುವುದು ಸತ್ಯ ಎಂದು ಕಿಡಿಕಾರಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ರಾಜ್ಯ ಸರಕಾರ ಹಾಗೂ ಬಿಜೆಪಿ ನಾಯಕರು ದಾರಿ ತಪ್ಪಿಸಿದ್ದಾರೆ ಎನ್ನುವುದರಲ್ಲಿ ಸಂಶಯ ಇಲ್ಲ. ದೇವೇಗೌಡರ ಬಗ್ಗೆ ಅತೀವ ಗೌರವ ಇಟ್ಟುಕೊಂಡಿರುವ ಪ್ರಧಾನಿಗಳ ಬಗ್ಗೆಯೇ ಕನ್ನಡಿಗರಲ್ಲಿ ತಪ್ಪು ಅಭಿಪ್ರಾಯ ಮೂಡುವಂತೆ ರಾಜ್ಯ ಬಿಜೆಪಿ ಸರಕಾರ ಮತ್ತು ಬಿಜೆಪಿ ನಾಯಕರು ವರ್ತಿಸಿದ್ದಾರೆ ಎಂದು ಜೆಡಿಎಸ್ ಟೀಕಿಸಿದೆ. ಕೆಂಪೇಗೌಡರು ಕೇಂದ್ರದ ಬಿಜೆಪಿ ಆಸ್ತಿಯಲ್ಲ, ಕೆಲ ಸಚಿವರ ಜಹಗೀರಲ್ಲ, ರಾಜಕೀಯಕ್ಕೆ ಬಳಕೆ ಮಾಡಿಕೊಳ್ಳುವ ವಿಷಯವೂ ಅಲ್ಲ. ನಾಡಪ್ರಭುಗಳು ಸಮಸ್ತ ಕನ್ನಡಿಗರ ಹೆಮ್ಮೆ. ನಮ್ಮೆಲ್ಲರ ಅರಾಧ್ಯ ದೈವ. ಇನ್ನು, ಬೆಂಗಳೂರು ನಗರ ನಮ್ಮೆಲ್ಲರದ್ದು. ಸಮಸ್ತ ಕನ್ನಡಿಗರ ಜೀವನಾಡಿ. ಈ ಸೂಕ್ಷ್ಮವನ್ನು ರಾಜ್ಯ ಬಿಜೆಪಿ ಸರಕಾರ ಮರೆತು ಕನ್ನಡಿಗರನ್ನು ಅಪಮಾನಿಸಿದೆ ಎಂದು ಟ್ವೀಟ್ ಮೂಲಕ ಜೆಡಿಎಸ್ ಆಕ್ರೋಶ ವ್ಯಕ್ತಪಡಿಸಿದೆ.

ಸಿದ್ಧರಾಮಯ್ಯ ವಾಗ್ದಾಳಿ

ಮಾಡಿದ ಕಾರ್ಯಗಳನ್ನು ತಿಳಿಸಿದ್ದಾರೆ. ರಾಜ್ಯದಲ್ಲಿ ಪ್ರತಿ ವರ್ಷ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವ ವೈಭವೋಪೇತ ಸಂಪ್ರದಾಯಕ್ಕೆ ಚಾಲನೆ ನೀಡಿದ್ದು ಕಾಂಗ್ರೆಸ್ ಸರ್ಕಾರ. ಬೆಂಗಳೂರಿನ ಸಂಸ್ಥಾಪಕರಿಗೆ ಸಂಬಂಧಿಸಿದ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸಲು ನಾಡಪ್ರಭು ಕೆಂಪೇಗೌಡ ಪ್ರಾಧಿಕಾರವನ್ನು ಸ್ಥಾಪಿಸಿದ್ದೇವೆ. ಈಗ ಕೇವಲ ಪ್ರತಿಮೆ ನಿರ್ಮಾಣ ಮಾಡಿ ಉದ್ಘಾಟನೆಗೆ ಮುಂದಾಗಿರುವ ಬಿಜೆಪಿ ಸರ್ಕಾರ ಕೆಂಪೇಗೌಡರ ದಕ್ಷ ಆಡಳಿತ ಮತ್ತು ಸಮಾಜ ಸೇವೆಯ ಮೌಲ್ಯಗಳನ್ನು ಏಕೆ ಅನುಸರಿಸುತ್ತಿಲ್ಲ? ನಾಡಪ್ರಭು ನಿರ್ಮಿಸಿದ ಈ ಕನಸಿನ ನಗರವು ಒಂದು ಕಾಲದಲ್ಲಿ ವಿಶ್ವದಾದ್ಯಂತ ಪ್ರಗತಿ ಮತ್ತು ಸೌಂದರ್ಯಕ್ಕೆ ಹೆಸರುವಾಸಿಯಾಗಿತ್ತು. ಈಗ ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದ ಬೆಂಗಳೂರು ಶೇ.40 ಕಮಿಷನ್, ರಸ್ತೆ ಗುಂಡಿಗಳು ಮತ್ತು ಪ್ರವಾಹಗಳಿಂದ ಮುಳುಗುತ್ತಿದೆ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಕಳೆದೆರಡು ದಿನದಿಂದ ವಾಗ್ದಾಳಿ: ಪ್ರಧಾನಿ ನರೇಂದ್ರ ಮೋದಿ ಅವರು ಕನಕದಾಸ ಹಾಗೂ ವಾಲ್ಮೀಕಿ ಪ್ರತಿಮೆಗೆ ಶುಕ್ರವಾರ ಮಾಲಾರ್ಪಣೆ ಮಾಡುವುದು, ಕೆಂಪೇಗೌಡರ ಪ್ರತಿಮೆ ಉದ್ಘಾಟಿಸುವುದು ಇವೆಲ್ಲವೂ ಕೇವಲ ರಾಜಕೀಯ ಗಿಮಿಕ್ ಅಷ್ಟೆ ಎಂದು ಗುರುವಾರ ಟೀಕಿಸಿದ್ದರು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ವಾಲ್ಮೀಕಿ ಪ್ರತಿಮೆ, ಕನಕದಾಸರ ಪ್ರತಿಮೆ, ಕನಕಗುರು ಪೀಠ ಸ್ಥಾಪನೆ, ಕೆಂಪೇಗೌಡರ ಜಯಂತಿ, ಕೆಂಪೇಗೌಡರ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರಿಟ್ಟಿದ್ದು ಕೂಡ ನಮ್ಮ ಸರ್ಕಾರ. ಆದರೂ ಕೆಂಪೇಗೌಡರ ಪ್ರತಿಮೆ ನಿರ್ಮಾಣ ಮತ್ತು ಉದ್ಘಾಟನೆ ಬಗ್ಗೆ ಸಚಿವರಾದ ಅಶ್ವತ್ಥನಾರಾಯಣ, ಡಾ.ಕೆ. ಸುಧಾಕರ್ ನಮಗೆ ಒಂದು ಮಾತನ್ನೂ ಹೇಳಿಲ್ಲ ಎಂದು ತಿಳಿಸಿದ್ದರು.

ಪಂಪ್‌ಸೆಟ್‌ಗೆ ಮೀಟರ್ ಅಳವಡಿಸಿದರೆ ಕಿತ್ತೆಸೆಯುತ್ತೇನೆ

● ಕಾಂಗ್ರೆಸ್ ಓಬಿಸಿ ಘಟಕದ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಎಚ್ಚರಿಕೆ ● ಇದು ನಮ್ಮ ತಂದೆ ಎಸ್.ಬಂಗಾರಪ್ಪ ನೀಡಿದ ಯೋಜನೆ ● ಶಿವಮೊಗ್ಗದಲ್ಲಿ ರಾಜ್ಯ ಮಟ್ಟದ ಓಬಿಸಿ ಸಮ್ಮೇಳನ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಸಭೆ ನಡೆಸಿದ ಕೆಪಿಸಿಸಿ ಹಿಂದುಳಿದ ವರ್ಗಗಳ(ಓಬಿಸಿ) ಸಮಿತಿ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ನ.11(ಎಸ್‌ಬಿಡಿ)– ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಮೀಟರ್ ಅಳವಡಿಸಿದರೆ ಅದನ್ನು ಮೊದಲು ನಾನೇ ಕಿತ್ತೊಗೆಯುತ್ತೇನೆ ಎಂದು ಕಾಂಗ್ರೆಸ್ ಹಿಂದುಳಿದ ವರ್ಗಗಳ(ಓಬಿಸಿ) ಸಮಿತಿ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಹೇಳಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ಪಕ್ಷದ ಮೈಸೂರು ನಗರ ಮತ್ತು ಗ್ರಾಮಾಂತರ ಓಬಿಸಿ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ತಂದೆಯವರಾದ ಎಸ್.ಬಂಗಾರಪ್ಪನವರು ರೈತರ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಕಲ್ಪಿಸಿದರು. ಅದರಿಂದ ಪ್ರತಿಯೊಂದು ಸಮುದಾಯದ ರೈತರಿಗೂ ಅನುಕೂಲವಾಯಿತು. ಹಾಗಾಗಿಯೇ ಪಕ್ಷಾತೀತವಾಗಿ, ಜಾತ್ಯಾತೀತವಾಗಿ ನಮ್ಮ ತಂದೆಯವರಿಗೆ ವಿಶೇಷ ಸ್ಥಾನ ನೀಡಿದ್ದಾರೆ. ಆದರೆ ಎಲ್ಲವನ್ನೂ ಖಾಸಗೀಕರಣ ಮಾಡುತ್ತಿರುವ ಬಿಜೆಪಿ ಸರ್ಕಾರ, ರೈತರ ಪಂಪ್‌ಸೆಟ್‌ಗೂ ವಿದ್ಯುತ್ ಮೀಟರ್ ಅಳವಡಿಸಲು ಮುಂದಾಗಿದ್ದಾರೆ. ಹಾಗೇನಾದರು ಮಾಡಿದರೆ ಆ ಮೀಟರ್‌ಗಳನ್ನು ನಾನೇ ಮೊದಲು ಕಿತ್ತು ಬಿಸಾಡುತ್ತೇನೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂಗಾರಪ್ಪನವರು ದೇಶದಲ್ಲಿರುವ ಬಹುತೇಕ ಎಲ್ಲಾ ಪಕ್ಷಗಳನ್ನೂ ಸೇರಿದ್ದರೂ ಅಧಿಕಾರ ಪಡೆದಿದ್ದು ಕಾಂಗ್ರೆಸ್‌ನಿಂದ ಮಾತ್ರ. ಪಕ್ಷ ಬದಲಾಯಿಸಿದರೂ ವೈಯಕ್ತಿಕ ಶಕ್ತಿ ಹಾಗೂ ವರ್ಚಸ್ಸಿನಿಂದ ಯಾವ ರೀತಿಯಲ್ಲೂ ಅವರ ಗೌರವಕ್ಕೆ ಚ್ಯುತಿ ಬರಲಿಲ್ಲ. ಅಕ್ಷಯ, ಗ್ರಾಮೀಣ ಕೃಪಾಂಕ, ರೈತರ ಪಂಪ್‌ಸೆಟ್‌ಗೆ ಉಚಿತ ವಿದ್ಯುತ್ ಸೇರಿದಂತೆ ಹತ್ತಾರು ಜನಪರ ಯೋಜನೆಗಳನ್ನು ಜಾರಿಗೆ ತರುವಲ್ಲಿ ಅವರಿಗೆ ಕಾಂಗ್ರೆಸ್ ಕಾರಣವಾಯಿತು. ಕಾವೇರಿ ನದಿ ನೀರು ವಿಚಾರ ಸೇರಿದಂತೆ ಹಲವು ಕಾರ್ಯಕ್ರಮಗಳ ಮೂಲಕ ಹಳೇ ಮೈಸೂರು ಭಾಗದ ಜನರೊಂದಿಗೆ ವಿಶೇಷ ಬಾಂಧವ್ಯ ಬೆಸೆದುಕೊಂಡಿದ್ದರು. ಬಂಗಾರಪ್ಪ ಅವರ ಪುತ್ರ ಎನ್ನುವ ಕಾರಣದಿಂದಲೇ ಕಾಂಗ್ರೆಸ್ ನನಗೂ ಮಹತ್ವದ ಜವಾಬ್ದಾರಿ ನೀಡಿದೆ. ತಂದೆಯ ಗೌರವವನ್ನು ಉಳಿಸಿ, ಬೆಳೆಸಿಕೊಂಡು ಹೋಗಲು ನಿಮ್ಮೆಲ್ಲರ ಸಹಕಾರ ಬಹಳ ಮುಖ್ಯ ಎಂದರು.

ಓಬಿಸಿ ಸಂಘಟಿಸಬೇಕು: ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಅದರಲ್ಲಿ ಓಬಿಸಿ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಪ್ರತಿ ವಿಧಾನಸಭಾ ಕ್ಷೇತ್ರದ ಶೇ.52ರಿಂದ 58ರಷ್ಟು ಓಬಿಸಿ ಮತ ಬಲವಿದೆ. ಆದರೆ ಇತ್ತೀಚೆಗೆ ಸಹಜವಾಗಿ ವ್ಯತ್ಯಾಸಗಳಾಗಿವೆ. ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮಾರ್ಗದರ್ಶನದಲ್ಲಿ ಯೋಜನೆ ರೂಪಿಸಿಕೊಂಡು ರಾಜ್ಯ ಪ್ರವಾಸ ನಡೆಸುತ್ತಿದ್ದೇನೆ. ಓಬಿಸಿ ಸಂಘಟನೆ ನನ್ನಿಂದ ಮಾತ್ರ ಸಾಧ್ಯವಾಗುವುದಿಲ್ಲ.

ಬೆಂಗಳೂರಿ ನಲ್ಲಿ ಕುಳಿತು ಉತ್ತಮ ತಂಡ ಕಟ್ಟಲಾಗುವುದಿಲ್ಲ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು. ಪಕ್ಷದ ಮುಂಚೂಣಿ ಘಟಕಗಳು ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಬೇಕು. ಓಬಿಸಿ ಘಟಕದಲ್ಲಿ ಪದಾಧಿಕಾರಿಗಳನ್ನು ಮುಂದುವರೆಸುವುದೇ? ಅಥವಾ ಬದಲಾವಣೆ ಮಾಡಿ ಹೊಸಬರಿಗೆ ಅವಕಾಶ ಕೊಡುವುದೇ? ಎನ್ನುವುದನ್ನು ನಿರ್ಧರಿಸಬೇಕು. ಇನ್ನು 15 ದಿನಗಳಲ್ಲಿ ಉತ್ತಮವಾದ ತಂಡ ರಚಿಸಿಕೊಡಬೇಕು. ಅತೀ ಕಡಿಮೆ ಸಂಖ್ಯೆಯಲ್ಲಿರುವ ಸಮುದಾಯದವರಿಗೂ ಪ್ರಾತಿನಿಧ್ಯ ನೀಡಿ, ಪಕ್ಷದ ಜವಾಬ್ದಾರಿ ನೀಡಬೇಕು. ಅಂತಹವರನ್ನು ಮುಂಚೂಣಿಗೆ ತರದಿದ್ದರೆ ನಾನು ಇಲ್ಲಿ ನಿಂತು ಮಾತನಾಡಲು ಅರ್ಹತೆ ಇರುವುದಿಲ್ಲ ಎಂದು ನಗರ ಹಾಗೂ ಗ್ರಾಮಾಂತರ ಸಮಿತಿಗೆ ಮನವಿ ಮಾಡಿದರು.

ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪನವರು ಮೈಸೂರಿನ ಮಹಾರಾಜ ಕಾಲೇಜು ಹಾಗೂ ಹಾಸ್ಟೆಲ್ ವಿದ್ಯಾರ್ಥಿಯಾಗಿದ್ದು ಸೇರಿದಂತೆ ಮುಖ್ಯಮಂತ್ರಿಯಾಗಿ ಅವರು ಜಾರಿಗೆ ತಂದ ಕಾರ್ಯಕ್ರಮಗಳನ್ನು ಸ್ಮರಿಸಿಕೊಂಡರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಓಬಿಸಿ ನಗರ ಘಟಕದ ಅಧ್ಯಕ್ಷ ಶಿವಮಲ್ಲು, ಗ್ರಾಮಾಂತರ ಘಟಕದ ಅಧ್ಯಕ್ಷ ಮಾರುತಿ ಸೇರಿದಂತೆ ಅನೇಕ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಅನಾರೋಗ್ಯ ನಿಮಿತ್ತ ಜಿಟಿಡಿ ಗೈರು: ಕನಕದಾಸರ ಜಯಂತಿಯ ಸಂದೇಶ



ಮೈಸೂರು, ನ.11– ಅನಾರೋಗ್ಯದಿಂದ ಶ್ರೀ ಕನಕದಾಸರ ಜಯಂತಿಯಲ್ಲಿ ಭಾಗವಹಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಜನತೆಗೆ ಸಂದೇಶ ತಿಳಿಸಿದ್ದಾರೆ.

ಕುಲ ಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ? ಎನ್ನುವ ಮೂಲಕ ಜಾತಿ ಸಂಘರ್ಷಗಳನ್ನು ಹೋಗಲಾಡಿಸಲು ತಮ್ಮ ಕೀರ್ತನೆಗಳಿಂದ ಜಾಗೃತಿ ಮೂಡಿಸಿದ ಭಕ್ತ ಶ್ರೇಷ್ಠ ಶ್ರೀ ಕನಕದಾಸರ ಜಯಂತಿಯನ್ನು ಇಂದು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಇದರಲ್ಲಿ ನಾನು ಭಾಗವಹಿಸಬೇಕಾಗಿತ್ತು. ಆದರೆ ಮೂರು ದಿನಗಳಿಂದ ನಾನು ಜ್ವರದಿಂದ ಬಳಲುತ್ತಿದ್ದು, ವೈದ್ಯರ ಸಲಹೆ ಮೇರೆಗೆ ಬೆಂಗಳೂರಿನಲ್ಲಿ ವಿಶ್ರಾಂತಿಯಲ್ಲಿರಬೇಕಾದ ಕಾರಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿದ್ದಾರೆ. ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಾಕಾರರಲ್ಲಿ ಕನಕದಾಸರು ಒಬ್ಬರು. ಇವರು 15–16ನೇ ಶತಮಾನದಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಸಮರ ಸಾರಿದರು. ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಾಗಿದ್ದರು. ಕನಕದಾಸರು ಉಡುಪಿ ಶ್ರೀಕೃಷ್ಣನ ಅನನ್ಯ ಭಕ್ತರಾಗಿ, ಕಾಗಿನೆಲೆಯ ಆದಿಕೇಶವನ ಭಕ್ತರಾಗಿ ಜಾತಿಪದ್ಧತಿಯ ತಾರತಮ್ಯಗಳನ್ನು ಅಲ್ಲಗಳೆದರು. ಕನಕ ದಾಸರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕೀರ್ತನೆಗಳು, ಸುಳಾದಿಗಳು, ಉಗಾಭೋಗ ಗಳು ಕನ್ನಡ ಸಾಹಿತ್ಯ ಲೋಕಕ್ಕೆ ಮಾತ್ರವಲ್ಲದೆ ಸಂಗೀತ ಪ್ರಪಂಚಕ್ಕೂ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿರುವ ಜಿಟಿಡಿ, ಎಲ್ಲರಿಗೂ ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತಿಯ ಶುಭಾಶಯ ಕೋರಿದ್ದಾರೆ.


ಮದುವೆ ಮನೆಯಲ್ಲಿ ರಂಪಾಟದ ನಂತರ ಮಹಿಳೆಯೊಂದಿಗೆ ಯೋಧ ಆತ್ಮಹತ್ಯೆ

ಹಾಸನ, ನ. 11– ಗಲಾಟೆಯಾಗಿ ಮದುವೆ ನಿಂತಿದ್ದಕ್ಕೆ ಬೇಸತ್ತು ಯೋಧನೋರ್ವ ಮಹಿಳೆಯೊಂದಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ಹಾಸನದ ಹೊಂಗೆರೆ ಗ್ರಾಮದಲ್ಲಿ ನಡೆದಿದೆ. ಯೋಧ ಕಿರಣ್‌ಕುಮಾರ್ ಎಂಬಾತನೇ ಆಶಾ ಎಂಬ ವಿಧವೆಯೊಂದಿಗೆ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ.

ವಿವರ: ಯೋಧ ಕಿರಣ್‌ಕುಮಾರ್‌ನ ವಿವಾಹ ಹಾಸನದ ಹೊರವಲಯದಲ್ಲಿರುವ ಕಲ್ಯಾಣ ಮಂಟಪವೊಂದರಲ್ಲಿ ಇಂದು ನಡೆಯಬೇಕಿತ್ತು. ಅದರ ಅಂಗವಾಗಿ ನಿನ್ನೆ ಆರತಕ್ಷತೆ ನಡೆಯುತ್ತಿದ್ದ ವೇಳೆ ಆಶಾ ಎಂಬ ವಿಧವಾ ಮಹಿಳೆ ಕಲ್ಯಾಣ ಮಂಟಪಕ್ಕೆ ಆಗಮಿಸಿ, ರಂಪಾಟ ನಡೆಸಿದ್ದಾರೆ. ವಿಧವೆಯಾಗಿರುವ ತನ್ನ ಜೊತೆ ಸಂಬಂಧವಿಟ್ಟುಕೊಂಡಿದ್ದ ಕಿರಣ್, ಎರಡು ವರ್ಷ ಕಾಲ ಮದುವೆಯಾಗುವುದಾಗಿ ನಂಬಿಸಿ ಸತಾಯಿಸಿದ್ದ. ಕಳೆದ 6 ತಿಂಗಳ ಹಿಂದೆ ಮನೆಯ ದೇವರ ಫೋಟೋ ಮುಂದೆ ತಾಳಿ ಕಟ್ಟಿ ತನ್ನನ್ನು ಮದುವೆಯಾಗಿದ್ದು, ಈಗ ಬೇರೆ ಹುಡುಗಿ ಯನ್ನು ಮದುವೆಯಾಗಿ ತನಗೆ ಮೋಸ ಮಾಡಲು ಮುಂದಾಗಿದ್ದಾನೆ ಎಂದು ಆಶಾ ಆರೋಪಿಸಿದ್ದಳು. ಈ ವೇಳೆ ಕಲ್ಯಾಣ ಮಂಟಪದಲ್ಲಿ ಅಲ್ಲೋಲ ಕಲ್ಲೋಲವೇ ಸೃಷ್ಟಿಯಾಯಿತು. ಹಣ ಕಾಸು ವಿಚಾರದಲ್ಲಿ ಉಂಟಾದ ತಕರಾರಿನಿಂದಾಗಿ ಆಶಾ ತನ್ನನ್ನು ಮದುವೆಯಾಗಿರುವುದಾಗಿ ಸುಳ್ಳು ಹೇಳುತ್ತಿದ್ದಾಳೆ ಎಂದು ಕಿರಣ್ ಸಮರ್ಥನೆ ನೀಡಲು ಮುಂದಾದನಾದರೂ ಯುವತಿಯ ಕಡೆಯವರು ಕಿರಣ್‌ನೊಂದಿಗಿನ ತಮ್ಮ ಮಗಳ ಮದುವೆಯನ್ನು ತಕ್ಷಣವೇ ರದ್ದುಗೊಳಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಬಡಾವಣೆ ಠಾಣೆ ಪೊಲೀಸರು ಕಲ್ಯಾಣ ಮಂಟಪಕ್ಕೆ ಆಗಮಿಸಿ ಕಿರಣ್ ಮತ್ತು ಆಶಾಳನ್ನು ಠಾಣೆಗೆ ಕರೆದೊಯ್ದು ಸಂಧಾನದ ಮಾತುಕತೆ ನಡೆಸಿದ ನಂತರ ಆಶಾ ಜೊತೆಯೇ ಕಿರಣ್ ಠಾಣೆಯಿಂದ ಹೊರ ಹೋಗಿದ್ದ. ಆದರೆ, ಆತ ತನ್ನ ಸಂಬಂಧಿಕ ರೊಬ್ಬರಿಗೆ ವಾಟ್ಸಾಪ್ ಮೆಸೇಜ್ ಕಳುಹಿಸಿ, ಆರತಕ್ಷತೆಯ ಉಡುಪಿನಲ್ಲೇ ಆಶಾ ಜೊತೆ ಒಂದೇ ಹಂತದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಸಂಬಂಧಿಕರು ಹೊಂಗೆರೆ ಗ್ರಾಮದ ಬಳಿ ತೆರಳಿ ನೋಡಿದಾಗ, ಕಿರಣ್ ಮತ್ತು ಆಶಾ ಶವಗಳು ಮರವೊಂದರಲ್ಲಿ ಒಂದೇ ಹಗ್ಗದಲ್ಲಿ ನೇತಾಡುತ್ತಿದ್ದುದು ಕಂಡುಬಂದಿದೆ. ಈ ಸಂಬಂಧ ಶಾಂತಿನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜೀವ್ ಗಾಂಧಿ ಹತ್ಯೆ ಪ್ರಕರಣ: ಆರು ಹಂತಕರ ಬಿಡುಗಡೆಗೆ ಸುಪ್ರೀಂಕೋರ್ಟ್ ಆದೇಶ

ನವದೆಹಲಿ, ನ.11– ದಿವಂಗತ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆ ಪ್ರಕರಣದ ಆರು ಹಂತಕರನ್ನು ಜೈಲಿನಿಂದ ಬಿಡುಗಡೆ ಮಾಡಲು ಸುಪ್ರೀಂಕೋರ್ಟ್ ಶುಕ್ರವಾರ ಆದೇಶ ನೀಡಿದೆ. ಈ ಪ್ರಕರಣದಲ್ಲಿ ನಳಿನಿ ಶ್ರೀ ಹರನ್ ಸೇರಿದಂತೆ ಐವರು ತಮಿಳುನಾಡಿನ ಜೈಲಿನಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಈ ಹಿಂದೆ ತಮಿಳುನಾಡು ಸರ್ಕಾರ ಕೂಡಾ ರಾಜೀವ್ ಗಾಂಧಿ ಹಂತಕರ ಬಿಡುಗಡೆಗೆ ರಾಜ್ಯಪಾಲರಿಗೆ ಶಿಫಾರಸು ಮಾಡಿತ್ತು. ಇದನ್ನು ಸುಪ್ರೀಂ ಕೋರ್ಟ್ ಪರಿಗಣಿಸಿದ್ದು, ಅವರ ಬಿಡುಗಡೆಗೆ ಆದೇಶಿಸಿದೆ. ಮೇ ತಿಂಗಳಲ್ಲಿ ಮತ್ತೋರ್ವ ಆರೋಪಿ ಪೇರಾರಿವಾಳನ್ ಅವರನ್ನು ಸುಪ್ರೀಂ ಕೋರ್ಟ್ ಬಿಡುಗಡೆ ಮಾಡಿತ್ತು.



ನಳಿನಿ ಶ್ರೀ ಹರನ್ ಅಲ್ಲದೇ, ಶ್ರೀಹರನ್, ಸಂತನ್, ಮುರುಗನ್, ರಾಬರ್ಟ್ ಪಾಯಸ್ ಮತ್ತು ರವಿಚಂದ್ರನ್ ಜೈಲಿನಲ್ಲಿದ್ದಾರೆ. ಮೇ 21, 1991ಕಲ್ಲಿ ತಮಿಳುನಾಡಿನ ಪೆರಂಬೂರಿನಲ್ಲಿ ಎಲ್‌ಟಿಟಿಇ ಗುಂಪಿನ ಮಹಿಳಾ ಆತ್ಮಾಹುತಿ ಬಾಂಬರ್ ಗಳಿಂದ ರಾಜೀವ್ ಗಾಂಧಿ ಅವರ ಹತ್ಯೆಯಾಗಿತ್ತು. ನಳಿನಿ ಶ್ರೀಹರನ್ ಜೈಲಿನಿಂದ ಬಿಡುಗಡೆ ಸುದ್ದಿ ತಿಳಿಯುತ್ತಿದ್ದಂತೆಯೇ ಅವರ ಸ್ವಗ್ರಾಮ ವೆಲ್ಲೂರಿನ ನಿವಾಸದ ಮುಂದೆ ಕುಟುಂಬಸ್ಥರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂತೋಷ ವ್ಯಕ್ತಪಡಿಸಿದ್ದಾರೆ.


ಬ್ರಿಟನ್‌ನಲ್ಲಿ ಕೆಲಸ ಕೊಡಿಸುವುದಾಗಿ ಇಂಜಿನಿಯರ್‌ಗೆ 5.04 ಲಕ್ಷ ವಂಚನೆ



ಮಂಡ್ಯ, ನ. 11– ಬ್ರಿಟನ್‌ನಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಇಂಜಿನಿಯರ್ ಒಬ್ಬರಿಗೆ ಆನ್‌ಲೈನ್ ಮೂಲಕ 5.04 ಲಕ್ಷ ರೂ. ವಂಚನೆ ಮಾಡಲಾಗಿದೆ. ಮಂಡ್ಯದ ಇಂಜಿನಿಯರ್ ಎ.ಎಸ್. ಅಶ್ವಥ್‌ರಾವ್(46) ವಂಚನೆಗೊಳಗಾದವರಾಗಿದ್ದು, ಇವರು ವಿವಿಧ ವೆಬ್‌ಸೈಟ್‌ಗಳಿಗೆ ರೆಸ್ಯೂಮ್ ಅಪ್‌ಲೋಡ್ ಮಾಡಿದ್ದರು. ಅಕ್ಟೋಬರ್ 29ರಂದು ಇವರ ಮೇಲ್ ಐಡಿಗೆ ಬ್ರಿಟನ್‌ನಲ್ಲಿ ಕೆಲಸ ಕೊಟ್ಟಿರುವುದಾಗಿ ಆಫರ್ ಲೆಟರ್ ಮತ್ತು ಎಂಪ್ಲಾಯ್‌ಮೆಂಟ್ ಕಾಂಟ್ರಾಕ್ಟ್ ಲೆಟರ್ ರವಾನೆಯಾಗಿದೆ. ನಂತರ ಜೇಮ್ಸ್ ಮೋರೆ ಎಂಬಾತ ಕರೆ ಮಾಡಿ, ನವದೆಹಲಿಯಲ್ಲಿರುವ ಬ್ರಿಟಿಷ್ ರಾಯಭಾರಿಯ ಎಕ್ಸಿಕ್ಯೂಟಿವ್ ಅಸಿಸ್ಟೆಂಟ್ ಎಂದು ಪರಿಚಯಿಸಿಕೊಂಡು ಬ್ರಿಟಿಷ್‌ನ ವೀಸಾ ನೀಡಲು ಕೆಲವೊಂದು ದಾಖಲೆಗಳನ್ನು ಸಲ್ಲಿಸುವಂತೆ ಮೇಲ್ ಐಡಿವೊಂದನ್ನು ನೀಡಿದ್ದಾನೆ. ಅವರು ದಾಖಲೆಗಳನ್ನು ಸಲ್ಲಿಸಿದ ನಂತರ ವಿವಿಧ ಶುಲ್ಕಗಳೆಂದು ನವೆಂಬರ್ 1ರಿಂದ 5ರವರೆಗೆ ಅವರಿಂದ 5,04,700 ರೂ.ಗಳನ್ನು ಬಸುಮೆಟಾರಿ ಎಂಬ ಹೆಸರಿನಲ್ಲಿ ದೆಹಲಿಯ ಕೆನರಾ ಬ್ಯಾಂಕ್ ಶಾಖೆಯ ಖಾತೆಗೆ ವರ್ಗಾವಣೆ ಮಾಡಿಸಿಕೊಳ್ಳಲಾಗಿದೆ. ನವೆಂಬರ್ 7ರಂದು ಅಶ್ವಥ್‌ರಾವ್ ಅವರಿಗೆ ಅನುಮಾನ ಬಂದು ವೀಸಾ ಪ್ರೊಸೆಸಿಂಗ್ ಅನ್ನು ಸ್ಥಗಿತಗೊಳಿಸಿ, ತಮ್ಮ ಹಣ ಹಿಂತಿರುಗಿಸುವಂತೆ ಕೇಳಿದಾಗ ಅದಕ್ಕೆ ಮತ್ತೆ 68,600 ರೂ. ಪಾವತಿಸಬೇಕೆಂದು ವಂಚಕ ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಅವರು ಮಂಡ್ಯ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.



ಬಸ್‌ನಲ್ಲಿ ಗೃಹಿಣಿ ಮಾಂಗಲ್ಯ ಸರ ಕಳವು




ಮೈಸೂರು, ನ.11–ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಕಳುವಾಗಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಹೂಟಗಳ್ಳಿ ಎಸ್‌ಆರ್‌ಎಸ್ ಕಾಲೋನಿ ನಿವಾಸಿ ಸಾವಿತ್ರಮ್ಮ(60) ಮಾಂಗಲ್ಯ ಸರ ಕಳೆದುಕೊಂಡವರಾಗಿದ್ದು, ಇವರು ನ.9ರಂದು ಬೆಳಗ್ಗೆ 10 ಗಂಟೆ ಸುಮಾರಿನಲ್ಲಿ ಬಸ್ ಸ್ಟ್ಯಾಂಡ್‌ಗೆ ಹೋಗುವ ಸಲುವಾಗಿ ಸಿಟಿ ಬಸ್ ಹತ್ತಿದ್ದಾರೆ. ಅವರು ಜಯಲಕ್ಷ್ಮೀಪುರಂನ ಸೆಂಟ್ ಜೋಸೆಫ್ ಶಾಲೆ ಬಳಿ ಬಂದಾಗ ಅವರ ಕತ್ತಿನಲ್ಲಿ ಸರ ಇಲ್ಲದೇ ಇರುವುದು ಗಮನಕ್ಕೆ ಬಂದಿದೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ರೂಂ ಬೀಗ ಮುರಿದು ಲ್ಯಾಪ್‌ಟಾಪ್, ನಗದು ಕಳವು



ಮೈಸೂರು, ನ. 11–ವಿದ್ಯಾರ್ಥಿಗಳು ವಾಸ್ತವ್ಯವಿದ್ದ ರೂಂನ ಬೀಗ ಮುರಿದು ಲ್ಯಾಪ್‌ಟಾಪ್ ಹಾಗೂ ನಗದು ಕಳವು ಮಾಡಿರುವ ಘಟನೆ ಮೈಸೂರಿನ ಶಿವರಾತ್ರೀಶ್ವರನಗರದಿಂದ ವರದಿಯಾಗಿದೆ. ತಮಿಳುನಾಡು ಮೂಲದ ಟಿ. ನರೇಶ್ ನಾರಾಯಣನ್(23) ಎಂಬ ವಿದ್ಯಾರ್ಥಿ ಜೆಎಸ್‌ಎಸ್ ಕಾಲೇಜಿನಲ್ಲಿ ಬಿ.ಫಾರ್ಮಾ ವ್ಯಾಸಂಗ ಮಾಡುತ್ತಿದ್ದು, ಈತ ತನ್ನ ಸ್ನೇಹಿತ ಪೃಥ್ವಿರಾಜ್ ಜೊತೆ ಶಿವರಾತ್ರೀಶ್ವರನಗರದ ಬಾಡಿಗೆ ರೂಂನಲ್ಲಿ ವಾಸ್ತವ್ಯವಿದ್ದ. ನವೆಂಬರ್ 4 ರಂದು ಸಂಜೆ 5 ಗಂಟೆ ಸುಮಾರಿಗೆ ಇಬ್ಬರು ಶಾಪಿಂಗ್‌ಗಾಗಿ ದೇವರಾಜ ಮಾರುಕಟ್ಟೆಗೆ ತೆರಳಿ, ರಾತ್ರಿ 9 ಗಂಟೆಗೆ ಹಿಂತಿರುಗಿದಾಗ ರೂಂನ ಬೀಗ ಮುರಿದು ನರೇಶ್ ನಾರಾಯಣನ್ ಅವರ ಲ್ಯಾಪ್‌ಟಾಪ್ ಮತ್ತು ಪೃಥ್ವಿರಾಜ್ ಬ್ಯಾಗ್‌ನಲ್ಲಿದ್ದ 3 ಸಾವಿರ ರೂ. ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಎನ್‌ಆರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್‌ನಲ್ಲಿ ಮೇಕೆ ಕದ್ದೊಯ್ಯುತ್ತಿದ್ದ ಖದೀಮರ ಬಂಧನ



ಹೆಚ್.ಡಿ.ಕೋಟೆ, ನ 11– ಮೇಯುತ್ತಿದ್ದ ಮೇಕೆಯನ್ನು ಕಳವು ಮಾಡಿ ದ್ವಿಚಕ್ರ ವಾಹನದಲ್ಲಿ ಕೊಂಡೊಯ್ಯುತ್ತಿದ್ದ ಇಬ್ಬರು ಖದೀಮರನ್ನು ಗ್ರಾಮಸ್ಥರೇ ಬೆನ್ನಟ್ಟಿ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಹೆಚ್.ಡಿ.ಕೋಟೆ ತಾಲೂಕು ಮಾರಗೌಡನಹಳ್ಳಿ ಗೇಟ್‌ನಿಂದ ವರದಿಯಾಗಿದೆ. ಮೈಸೂರಿನ ಹೆಬ್ಬಾಳ 3ನೇ ಕ್ರಾಸ್ ನಿವಾಸಿ ಸುಮಂತ್ ಮತ್ತು ಲೋಕನಾಯಕನಗರದ ಕೇಶವ ಬಂಧಿತ ಮೇಕೆ ಕಳ್ಳರಾಗಿದ್ದು, ಕಳವಿಗೆ ಇವರು ಬಳಸಿದ್ದ ಸ್ಕೂಟಿ (ಕೆಎ 09–ವೈ 3212) ಕೂಡ ಪೊಲೀಸರ ವಶದಲ್ಲಿದೆ.

ವಿವರ: ಹೆಚ್.ಡಿ. ಕೋಟೆ ತಾಲೂಕು ಬಿಜಿಎಸ್ ಮುದ್ದೇನಹುಂಡಿ ಗ್ರಾಮದ ಪುಟ್ಟದೇವ ಎಂಬುವರು ತಮ್ಮ ಮನೆ ಮುಂದೆ ಮೇಕೆಯನ್ನು ಮೇಯಲು ಬಿಟ್ಟಿದ್ದರು. ಈ ವೇಳೆ ಸ್ಕೂಟಿಯಲ್ಲಿ ಬಂದ ಖದೀಮರು ಮೇಕೆಯನ್ನು ಹಿಡಿದು, ಸ್ಕೂಟಿಯಲ್ಲಿ ಹಾಕಿಕೊಂಡು ಮೈಸೂರು ಕಡೆಗೆ ಪರಾರಿಯಾಗಲೆತ್ನಿಸಿದ್ದಾರೆ. ಇದನ್ನು ಗಮನಿಸಿದ ಪುಟ್ಟದೇವ, ಅದೇ ಗ್ರಾಮದ ಭೈರೇಗೌಡರೊಂದಿಗೆ ಒಂದು ಬೈಕ್‌ನಲ್ಲಿ ಮತ್ತು ಬಾಲರಾಜು ಹಾಗೂ ಚಿಕ್ಕಣ್ಣ ಎಂಬುವರು ಮತ್ತೊಂದು ಬೈಕ್‌ನಲ್ಲಿ ಖದೀಮರನ್ನು ಬೆನ್ನತ್ತಿ ಮಾರಗೌಡನಹಳ್ಳಿ ಗೇಟ್ ಬಳಿ ಮೇಕೆ ಸಮೇತ ಖದೀಮರನ್ನು ಹಿಡಿದು ಹಂಪಾಪುರ ಉಪಠಾಣೆಯ ಪೊಲೀಸರ ವಶಕ್ಕೆ ಒಪ್ಪಿಸಿದ್ದಾರೆ. ಇಬ್ಬರೂ ಖದೀಮರನ್ನು ಹೆಚ್.ಡಿ. ಕೋಟೆ ಠಾಣೆ ಪೊಲೀಸರು ಬಂಧಿಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ, ನಗದು ಕಳ್ಳತನ

ತಿ.ನರಸೀಪುರ, ನ. 11– ರೈತ ದಂಪತಿ ಕುರಿ ಹಾಗೂ ದನ ಮೇಯಿಸಲು ಹೋಗಿದ್ದ ವೇಳೆ ಹಾಡಹಗಲೇ ಅವರ ಮನೆ ಬೀಗ ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಘಟನೆ ತಿ.ನರಸೀಪುರ ತಾಲೂಕು ಬಿಳಿಗೆರೆಹುಂಡಿ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ರೈತ ದಂಪತಿ ರತ್ನಮ್ಮ ಮತ್ತು ಸಿದ್ದೇಗೌಡ ಕುರಿ ಹಾಗೂ ದನ ಮೇಯಿಸಲು ನವೆಂಬರ್ 8ರಂದು ಬೆಳಗ್ಗೆ ಜಮೀನಿಗೆ ಹೋಗಿ ಸಂಜೆ 5 ಗಂಟೆ ಸುಮಾರಿಗೆ ಹಿಂತಿರುಗಿದಾಗ ಅವರ ಮನೆಯ ಬೀಗ ಮುರಿದು ಬೀರುವಿನ ಬಾಗಿಲನ್ನು ಮೀಟಿ 38 ಗ್ರಾಂ ತೂಕದ ಚಿನ್ನಾಭರಣ ಹಾಗೂ 3 ಸಾವಿರ ರೂ. ನಗದು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ತಿ.ನರಸೀಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಕ್ರೀಟ್ ಬ್ಲಾಕ್‌ನಿಂದ ತಲೆ ಜಜ್ಜಿ ವ್ಯಕ್ತಿ ಕೊಲೆ

ಮೈಸೂರು, ನ. 11(ಆರ್‌ಕೆ)– ಸಿಮೆಂಟ್ ಕಾಂಕ್ರಿಟ್ ಬ್ಲಾಕ್‌ನಿಂದ ತಲೆ ಜಜ್ಜಿ ವ್ಯಕ್ತಿಯೊಬ್ಬನನ್ನು ಹತ್ಯೆ ಮಾಡಿರುವ ಘಟನೆ ಮೈಸೂರಿನ ಗಾಂಧಿ ಸ್ಕ್ವೇರ್ ಸಮೀಪ ಉಮಾ ಟಾಕೀಸ್ ರಸ್ತೆಯಲ್ಲಿ ಇಂದು ಮುಂಜಾನೆ ಸಂಭವಿಸಿದೆ. ಲಷ್ಕರ್ ಮೊಹಲ್ಲಾದ ಗಾಂಧಿ ಸ್ಕ್ವೇರ್ ಸುತ್ತಲಿನ ಲಾಡ್ಜ್‌ಗಳಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದನೆನ್ನಲಾದ ಲಾಡ್ಜ್ ಎಂದೇ ಅಡ್ಡ ಹೆಸರಿನಲ್ಲಿ ಕರೆಯಲ್ಪಡುತ್ತಿದ್ದ 37 ವರ್ಷದ ವ್ಯಕ್ತಿ ಕೊಲೆಯಾದವನಾಗಿದ್ದು, ಆತನ ಹೆಸರು, ವಿಳಾಸ ಪತ್ತೆಯಾಗಿಲ್ಲ. ಉಮಾ ಟಾಕೀಸ್ ರಸ್ತೆಯ ಅಂಗಡಿಯೊಂದರ ಮುಂದೆ ಫುಟ್‌ಪಾತ್‌ನಲ್ಲಿ ಆತನ ದೇಹ ಇಂದು ಬೆಳಗ್ಗೆ ಪತ್ತೆಯಾಗಿದ್ದು, ಮುಂಜಾನೆ ಕೊಲೆ ಮಾಡಿರಬಹುದೆಂದು ಹೇಳಲಾಗಿದೆ. ಸಿಮೆಂಟ್ ಕಾಂಕ್ರಿಟ್ ಬ್ಲಾಕ್ ಅನ್ನು ಆತನ ತಲೆ ಮೇಲೆ ಎತ್ತಿಹಾಕಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಲಷ್ಕರ್ ಠಾಣೆ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಗೌತಮ್‌ಗೌಡ, ಧನಲಕ್ಷ್ಮಿ ಹಾಗೂ ಸಿಬ್ಬಂದಿ, ಮಹಜರು ನಡೆಸಿ ದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ.

ನೇಣು ಬಿಗಿದುಕೊಂಡು ವ್ಯಕ್ತಿ ಆತ್ಮಹತ್ಯೆ

ಮೈಸೂರು, ನ. 11(ಆರ್‌ಕೆ)– ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಬಳಲುತ್ತಿದ್ದ ವ್ಯಕ್ತಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ಸಂಭವಿಸಿದೆ. ಉದಯಗಿರಿಯ ಕ್ಯಾತಮಾರನಹಳ್ಳಿ ನಿವಾಸಿ ಸುನಿಲ್(24) ಆತ್ಮಹತ್ಯೆಗೆ ಶರಣಾದ ವ್ಯಕ್ತಿ. ಎರಡೂವರೆ ವರ್ಷದ ಹಿಂದಷ್ಟೇ ಮದುವೆಯಾಗಿದ್ದ ಆತ, ಗ್ಯಾಸ್ಟ್ರಿಕ್ ಸಮಸ್ಯೆಯಿಂದ ಬಳಲುತ್ತಿದ್ದು, ಚಿಕಿತ್ಸೆ ಪಡೆದರೂ ಪ್ರಯೋಜನವಾಗದ ಕಾರಣ, ಜಿಗುಪ್ಸೆಗೊಂಡು ಪತ್ನಿ ತವರಿಗೆ ತೆರಳಿದ್ದ ವೇಳೆ ನಿನ್ನೆ ರಾತ್ರಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ರಾಜು ಹಾಗೂ ಸಿಬ್ಬಂದಿ ಮಹಜರು ನಡೆಸಿ, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಿದರು.

ಹವಾಮಾನ ಬದಲಾವಣೆಯಿಂದಾಗುವ ಹಾನಿ ತಪ್ಪಿಸಲು ಪ್ರಕೃತಿ ಸಂರಕ್ಷಣೆಯೊಂದೇ ದಾರಿ

ಮೈಸೂರಲ್ಲಿ 5ನೇ ಕಿಸಾನ್ ಸಮ್ಮೇಳನ ಉದ್ಘಾಟಿಸಿದ ಕೇರಳ ಕೃಷಿ ಸಚಿವ ಪಿ.ಪ್ರಸಾದ್ ಅಭಿಮತ



ಮೈಸೂರಿನಲ್ಲಿ 5ನೇ ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ಸಾವಯವ ಕೃಷಿಕ ರೈತ ಮಹಿಳೆಯರಿಗೆ ವಿವಿಧ ಸಾವಯವ ಬೀಜಗಳನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೇರಳ ಕೃಷಿ ಸಚಿವ ಪಿ.ಪ್ರಸಾದ್ ವಿತರಿಸಿದರು.

ಮೈಸೂರು, ನ.11 (ಆರ್‌ಕೆಬಿ)– ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಹಾನಿ ತಪ್ಪಿಸಲು ಪ್ರಕೃತಿ ಸಂರಕ್ಷಣೆಯೊಂದೇ ಮುಖ್ಯ ದಾರಿ. ಎಲ್ಲರೂ ಪರಿಸರದ ಬಗ್ಗೆ ಹೆಚ್ಚು ಕಾಳಜಿ ಹೊಂದಿ ಸಾವಯವ ಕೃಷಿಗೆ ಆದ್ಯತೆ ನೀಡುವ ಮೂಲಕ ಮಣ್ಣು ಮತ್ತು ನೀರು ಸಂರಕ್ಷಿಸಿಕೊಳ್ಳುವುದು ಅಗತ್ಯ ಎಂದು ಕೇರಳದ ಕೃಷಿ ಸಚಿವ ಪಿ.ಪ್ರಸಾದ್ ಇಂದಿಲ್ಲಿ ಅಭಿಪ್ರಾಯಪಟ್ಟರು.

ಮೈಸೂರಿನ ಹುಣಸೂರು ರಸ್ತೆ ಮುಕ್ತ ಗಂಗೋತ್ರಿ ಘಟಿಕೋತ್ಸವ ಭವನದಲ್ಲಿ ಮೂರು ದಿನಗಳ ಆಶಾ ಕಿಸಾನ್ ಸ್ವರಾಜ್ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದರು. ಕೃಷಿ–ಪರಿಸರಶಾಸ್ತ್ರದಲ್ಲಿ ತೊಡಗಿಸಿಕೊಂಡಿರುವ ರಾಷ್ಟ್ರೀಯ ಮಟ್ಟದ ರೈತರ ಜಾಲವಾದ ಆಶಾ ಅಲಯನ್ಸ್ ಫಾರ್ ಸಸ್ಟೈನಬಲ್ ಮತ್ತು ಹೋಲಿಸ್ಟಿಕ್ ಅಗ್ರಿಕಲ್ಚರ್ (ಸುಸ್ಥಿರ ಮತ್ತು ಸಮಗ್ರ ಕೃಷಿಗಾಗಿ ಮೈತ್ರಿ) ಆಯೋಜಿಸಿರುವ ಮೂರು ದಿನಗಳ 'ಕಿಸಾನ್ ಸ್ವರಾಜ್ ಸಮ್ಮೇಳನ' ನಡೆಯುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ ಅವರು, ಈ ಸಮ್ಮೇಳನದಲ್ಲಿ ಹವಾಮಾನ ಬದಲಾವಣೆಯಿಂದ ಆಗುವ ಹಾನಿ ತಪ್ಪಿಸಲು ಎಲ್ಲರೂ ಒಟ್ಟಾಗಿ ಚರ್ಚಿಸಿ, ಹಾನಿ ತಪ್ಪಿಸಲು ಮುಂದಾಗಬೇಕು ಎಂದು ಹೇಳಿದರು.

ಹವಾಮಾನ ಬದಲಾವಣೆಯು ಕೃಷಿ ಪದ್ಧತಿಗಳ ಮೇಲೆ ಬಹಳಷ್ಟು ಋಣಾತ್ಮಕ ಪರಿಣಾಮವನ್ನು ಉಂಟು ಮಾಡಿದೆ. ಕೃಷಿ ಜೈವಿಕ ವೈವಿಧ್ಯತೆ ಮತ್ತು ಸಂಬಂಧಿತ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳ ಈ ಅಮೂಲ್ಯ ಸಂಪತ್ತನ್ನು ಸಂರಕ್ಷಿಸಲು, ಪುನರುತ್ಪಾದಿಸಲು ಮತ್ತು ಹಂಚಿಕೊಳ್ಳಲು ಸಾರ್ವಜನಿಕ ಜಾಗೃತಿ ಅಗತ್ಯ ಎಂದು ಒತ್ತಿ ಹೇಳಿದರು. ಪ್ರಕೃತಿ ಸಂರಕ್ಷಣೆಯಲ್ಲಿ ಸಾವಯವ ಕೃಷಿಯ ಪಾತ್ರದ ಬಗ್ಗೆ ತಿಳಿಸಿದ ಅವರು, ಕೇರಳವು ಕೃಷಿ–ಪರಿಸರಶಾಸ್ತ್ರ ಮತ್ತು ಸಾವಯವ ಮತ್ತು ನೈಸರ್ಗಿಕ ಕೃಷಿಗೆ ಸಂಬಂಧಿಸಿದ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಿದೆ ಎಂದು ಹೇಳಿದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರೂ ಆದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಸಾವಯವ ಕೃಷಿಕ ರೈತ ಮಹಿಳೆಯರಿಗೆ ನಾನಾ ರೀತಿಯ ಕೃಷಿ ಬೀಜಗಳನ್ನು ವಿತರಿಸಿ ಮಾತನಾಡಿ, ಸಾವಯವ ಕೃಷಿ ಮತ್ತು ಕೃಷಿ ಪ್ರಚಾರದ ಬಗ್ಗೆ ಜ್ಞಾನ ಮತ್ತು ಕೌಶಲ್ಯಗಳನ್ನು ಪಡೆಯಲು ಆಸಕ್ತಿ ಹೊಂದಿರುವವರಿಗೆ ಈ ಸಮ್ಮೇಳನ ಹೆಚ್ಚು ಉಪಯುಕ್ತವಾಗಲಿದೆ. ಪರಿಸರ ವಿಜ್ಞಾನವು ಹವಾಮಾನ ಬದಲಾವಣೆಯ ಹಿನ್ನೆಲೆಯಲ್ಲಿ ಇಂದು ಬಹಳ ಮುಖ್ಯವಾಗಿದೆ, ಇದು ಪ್ರಪಂಚದಾದ್ಯಂತ ವ್ಯಾಪಕವಾಗಿ ಚರ್ಚೆಯಾಗುತ್ತಿದೆ ಎಂದರು.

ರೈತರಿಗೆ ಸಂಬಂಧಿಸಿದ ನೀತಿಗಳನ್ನು ರೂಪಿಸುವವರು ನಗರ ಪ್ರದೇಶದಿಂದ ಬಂದವರಾಗಿದ್ದು, ನೀತಿಗಳನ್ನು ರೂಪಿಸುವ ಮುನ್ನ ರೈತ ಸಮುದಾಯಕ್ಕೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಹಾಗೂ ಅನುಕೂಲವಾಗುವ ನಿಟ್ಟಿನಲ್ಲಿ ನೀತಿಗಳನ್ನು ರೂಪಿಸಬೇಕು. ಪ್ರತಿಯೊಂದು ಕೃಷಿ ನೀತಿಯೂ ರೈತ ಸ್ನೇಹಿಯಾಗಿರಬೇಕು. ಪ್ರತಿಯೊಬ್ಬ ನಾಗರಿಕರು ಕೂಡ ಪರಿಸರ ಸ್ನೇಹಿ ಪದ್ಧತಿಗಳನ್ನು ಅನುಸರಿಸುವ ಮೂಲಕ ರೈತರಿಗೆ ಪೂರಕವಾಗಿರಬೇಕು ಎಂದು ತಿಳಿಸಿದರು.

ಸಮ್ಮೇಳನ ಸಂಘಟನಾ ಸಮಿತಿ ಸದಸ್ಯರಾದ ಕೃಷ್ಣಪ್ರಸಾದ್, ಕವಿತಾ ಶ್ರೀನಿವಾಸನ್, ರಾಷ್ಟ್ರೀಯ ಸಮಿತಿ ಸದಸ್ಯ ಕಪಿಲ್ ಶಾ, ಸಂತೋಷ ಕೌಲಗಿ, ಸ್ವಾಗತ ಸಮಿತಿ ಸದಸ್ಯ ಯು.ಎನ್.ರವಿಕುಮಾರ್, ಕೆಎಸ್‌ಒಯು ಪ್ರಭಾರ ಕುಲಪತಿ ಖಾದರ್, ಡಾ.ಎ.ಆರ್.ವಾಸವಿ, ಕೋಲಾರದ ಪಾಪಮ್ಮ, ನಚಿಕೇತ್ ಉಡುಪ ಇನ್ನಿತರರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಪರಿಸರವಾದಿಗಳು, ಸಾವಯವ ಕೃಷಿಕರ ಭಾವಚಿತ್ರಗಳಿಗೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು.

ವಿವಿಧ ರಾಜ್ಯಗಳ ಎರಡೂವರೆ ಸಾವಿರ ರೈತ ಪ್ರತಿನಿಧಿಗಳು ಭಾಗಿ

ಗಮನ ಸೆಳೆಯುತ್ತಿರುವ ದೇಶ–ವಿದೇಶಗಳ ನಾನಾ ತಳಿಯ ಬಾಳೆ ಪ್ರದರ್ಶನ

ಮೈಸೂರು, ನ.11(ಆರ್‌ಕೆಬಿ)– ಮೈಸೂರಿನ ಮುಕ್ತ ವಿವಿ ಆವರಣದಲ್ಲಿ ಆಯೋಜಿಸಲಾಗಿರುವ ಕಿಸಾನ್ ಸ್ವರಾಜ್ ಸಮ್ಮೇಳನದಲ್ಲಿ ವಿವಿಧ ರಾಜ್ಯಗಳ 2 ಸಾವಿರಕ್ಕೂ ಹೆಚ್ಚು ಮಂದಿ ಪ್ರತಿನಿಧಿಗಳು ಭಾಗವಹಿಸಿ, ಸಾವಯವ ಕೃಷಿ ಕುರಿತ ಚರ್ಚೆ, ಗೋಷ್ಠಿಗಳಲ್ಲಿ ಪಾಲ್ಗೊಂಡು ಮಾಹಿತಿ ವಿನಿಮಯ ಮಾಡಿಕೊಂಡರು. ಮೂರು ದಿನಗಳ ಈ ಸಮ್ಮೇಳನದಲ್ಲಿ ನಾನಾ ಗೋಷ್ಠಿಗಳು ನಡೆಯುತ್ತಿದ್ದರೆ, ಮುಕ್ತ ಗಂಗೋತ್ರಿ ಆವರಣದಲ್ಲಿ ಬಾಳೆ ಮೇಳ, ಬೀಜ ಜಾತ್ರೆ, ವಿವಿಧ ಸಾವಯವ ಕೃಷಿ ಪರಿಕರ ಪ್ರದರ್ಶನ ಮತ್ತು ಮಾರಾಟ ಭರದಿಂದ ನಡೆಯಿತು.



ಗಮನ ಸೆಳೆದ ನಾನಾ ದೇಶ, ರಾಜ್ಯಗಳ ನೂರಾರು ವಿವಿಧ ತಳಿಗಳ ಬಾಳೆ ಪ್ರದರ್ಶನ

ತುಂತುರು ಮಳೆಯ ನಡುವೆಯೂ ಸಮ್ಮೇಳನದ ಬಹು ಮುಖ್ಯ ಭಾಗವಾಗಿ ಗಮನ ಸೆಳೆದದ್ದು ಬಾಳೆ ಮೇಳ. ನಾನಾ ದೇಶ, ರಾಜ್ಯಗಳ, ನಾನಾ ಜಾತಿಯ ನೂರಕ್ಕೂ ಅಧಿಕ ಬಾಳೆ ಪ್ರದರ್ಶನಕ್ಕಿಡಲಾಗಿತ್ತು. ಇದರಲ್ಲಿ ಕರ್ನಾಟಕ, ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಪಾಂಡಿಚೇರಿ, ಸೌತ್ ಈಸ್ಟ್ ಏಷಿಯಾ, ಆಂಧ್ರಪ್ರದೇಶ, ತೆಲಂಗಾಣ, ಕೇರಳ ಸೇರಿದಂತೆ ಉತ್ತರ ಮತ್ತು ದಕ್ಷಿಣ ಭಾರತವಷ್ಟೇ ಅಲ್ಲದೆ, ಮಲೇಷಿಯಾ, ಥೈಲ್ಯಾಂಡ್, ಆಗ್ನೇಯ ಏಷ್ಯಾದ ರಾಷ್ಟ್ರಗಳ ನಾನಾ ಜಾತಿಯ, ನಾನಾ ಅಳತೆಯ ಬಾಳೆ ತಳಿಗಳ ಪ್ರದರ್ಶನವಿತ್ತು. ಒಂದಕ್ಕಿಂತ ಒಂದು ಆಕರ್ಷಕ ರೀತಿಯ ಬಾಳೆ ಬಗ್ಗೆ ನೂರಾರು ಮಂದಿ ಮಾಹಿತಿ ಪಡೆದುಕೊಂಡರು.


ಘಟಿಕೋತ್ಸವ ಭವನದಲ್ಲಿ ಕೆಳ ಅಂತಸ್ತಿನಲ್ಲಿ ಏರ್ಪಡಿಸಿರುವ ಬೀಜ ಜಾತ್ರೆಯಲ್ಲಿ ಸಾವಯವ ಕೃಷಿಯ ನಾನಾ ಆಹಾರ ಪದಾರ್ಥಗಳ ಬೀಜಗಳ ರಾಶಿಯೇ ಇತ್ತು. ಸುಮಾರು 40ಕ್ಕೂ ಹೆಚ್ಚು ಮಳಿಗೆಗಳಲ್ಲಿ ಅಕ್ಕಿ, ರಾಗಿ, ನವಣೆ, ಸಜ್ಜೆ ಸೇರಿದಂತೆ ನಾನಾ ರೀತಿಯ ಹಣ್ಣು, ತರಕಾರಿ ಬೀಜಗಳ ಪ್ರದರ್ಶನ ಮತ್ತು ಮಾರಾಟದಲ್ಲಿ ಜನಜಾತ್ರೆಯೇ ಸೇರಿತ್ತು. ಅನೇಕ ಸಾವಯವ ಕೃಷಿಕರು ತಮಗೆ ಬೇಕಾದ ಬೀಜಗಳನ್ನು ಖರೀದಿಸಿದರು.


ಇಲ್ಲಿ ವಿಶೇಷವೆಂದರೆ ತಮಿಳುನಾಡು, ಆಂಧ್ರಪ್ರದೇಶ, ರಾಜಸ್ತಾನ, ಮಣಿಪುರಿ, ಪಶ್ಚಿಮ ಬಂಗಾಳ, ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳ ಸಾವಯವ ಬೀಜಗಳ ವಿನಿಮಯ ಮಾಡಿಕೊಂಡರು.


ಇಲ್ಲಿ ಭಾಗವಹಿಸಿರುವ ರೈತ ಪ್ರತಿನಿಧಿಗಳಿಗಾಗಿ ಮಾಡಲಾಗಿದ್ದ ಊಟದ ವ್ಯವಸ್ಥೆಯಲ್ಲೂ ಸಾವಯವ ಕೃಷಿಯಲ್ಲಿ ಬೆಳೆದ ಆಹಾರವೇ ಊಟ ಬಡಿಸಲಾಗುತ್ತಿದೆ. ವಿವಿಧ ರಾಜ್ಯಗಳ ವಿವಿಧ ಶೈಲಿಯ ಆಹಾರಗಳನ್ನು ಒಂದೇ ವೇದಿಕೆಯಡಿ ಸವಿಯುವ ಅವಕಾಶವನ್ನು ಆಯೋಜಕರು ಕಲ್ಪಿಸಿಕೊಟ್ಟಿದ್ದರು. ಹೀಗಾಗಿ ಪ್ರತಿನಿಧಿಗಳು ತಮಗಿಷ್ಟವಾದ ಆಹಾರವನ್ನು ಸವಿದು, ಖುಷಿಪಟ್ಟರು.

3 ದಿನಗಳ ಈ ಸಮ್ಮೇಳನದಲ್ಲಿ ಬೀಜ ವೈವಿಧ್ಯತೆ ಜೊತೆಗೆ ಗೆಡ್ಡೆ ಗೆಣಸು ಮೇಳ, ತೋಟಗಾರಿಕೆ ಕಾರ್ಯಾಗಾರಗಳು, ಕುಂಬಾರಿಕೆ ಕಾರ್ಯಾಗಾರ, ಕೈಯಿಂದ ತಯಾರಿಸಿದ ಸಾಬೂನು ತಯಾರಿಕೆ ಕಾರ್ಯಾಗಾರ ನಡೆಯುತ್ತಿದೆ. ಭಾರತದಲ್ಲಿ ಕೃಷಿ– ಪರಿಕರ ಶಾಸ್ತ್ರ ಕುರಿತ ವಿಚಾರ ಸಂಕಿರಣಗಳು ನಡೆಯುತ್ತಿವೆ. ಕಿಸಾನ್ ಸ್ವರಾಜ್ ಸಮ್ಮೇಳನ ನ.13ರವರೆಗೆ ನಡೆಯಲಿದೆ.


ನಾಳೆ ಡಾ. ವಿ.ರಂಗನಾಥ್ ಅವರ 5 ಕೃತಿಗಳು ಬಿಡುಗಡೆ













ಡಾ. ವಿ.ರಂಗನಾಥ್

ಮೈಸೂರು,ನ.11–ನಿವೃತ್ತ ತಹಸೀಲ್ದಾರರೂ ಆದ 'ಮೈಸೂರು ಮಿತ್ರ' ಅಂಕಣಕಾರ ಡಾ.ವಿ.ರಂಗನಾಥ್ ಅವರ 5 ಕೃತಿಗಳು ನ.13ರಂದು ಬಿಡುಗಡೆಯಾಗಲಿವೆ. ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಗೋಪಾಲಸ್ವಾಮಿ ಕಾಲೇಜು ಸಭಾಂಗಣದಲ್ಲಿ ಅಂದು ಬೆಳಗ್ಗೆ 11 ಗಂಟೆಗೆ ಸಂಸ್ಕೃತಿ ಪ್ರಕಾಶನ ಹೊರ ತಂದಿರುವ ಡಾ. ವಿ.ರಂಗನಾಥ್ ಅವರ ಕಾದಂಬರಿ 'ದಿ. ರಸಿಕಪುತ್ತಿಗೆ ಅವರ 'ಪಿತ್ರಾರ್ಜಿತ ಆಸ್ತಿ', ಕಿರು ಕೈಪಿಡಿ 'ದಸರಾ', 'ವೈಶಾಲ್ಯವೇ ಜೀವನ ಸಂಕುಚಿತತೆಯೇ ಮರಣ!', 'ಜೀವನ ಪ್ರೀತಿ', 'ದಿ. ರಸಿಕಪುತ್ತಿಗೆ ಅವರ ಬೇಡಾದ ಬಾಳು' ಪುಸ್ತಕಗಳನ್ನು ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಾಗೇಶ ವಿ.ಬೆಟ್ಟಕೋಟೆ ಬಿಡುಗಡೆ ಮಾಡಲಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪ್ರಾಂತ ಕಾರ್ಯಕಾರಿ ಸದಸ್ಯರಾದ ಮ.ವೆಂಕಟರಾಮು ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಲೇಖಕ ಸಂಸ್ಕೃತಿ ಸುಬ್ರಮಣ್ಯ ಪ್ರಾಸ್ತಾವಿಕ ನುಡಿ ನುಡಿಯಲಿದ್ದಾರೆ. ಕಾರ್ಯಕ್ರಮ ದಲ್ಲಿ ಐದೂ ಪುಸ್ತಕಗಳ ಲೇಖಕರಾದ ಡಾ. ವಿ. ರಂಗನಾಥ್ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ನ.15ರವರೆಗೆ ಮೋಡದ ವಾತಾವರಣ; ಕೆಲವೆಡೆ ತುಂತುರು, ಇನ್ನೂ ಕೆಲವೆಡೆ ಸಾಧಾರಣ ಮಳೆ ಸಾಧ್ಯತೆ



ಮೈಸೂರು, ನ.11(ಆರ್‌ಕೆಬಿ)– ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ನ.15ರವರೆಗೆ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳಲ್ಲಿ ಕೆಲವೆಡೆ ತುಂತುರು, ಇನ್ನೂ ಕೆಲವೆಡೆ ಸಾಧಾರಣ ಮಳೆ ಬರುವ ಸಾಧ್ಯತೆ ಇದೆ.

ಮೈಸೂರಿನಲ್ಲಿ ನ.12ರಂದು 4 ಮಿ.ಮೀ., 13ರಂದು 18 ಮಿ.ಮೀ., 14ರಂದು 11 ಮಿ.ಮೀ., 15ರಂದು 5 ಮಿ.ಮೀ. ಮಳೆಯಾಗುವ ಸಾಧ್ಯತೆ ಇದೆ. ಇದೇ ಅವಧಿಯಲ್ಲಿ ಮಂಡ್ಯದಲ್ಲಿ ಕ್ರಮವಾಗಿ 1 ಮಿ.ಮೀ., 16 ಮಿ.ಮೀ., 12 ಮಿ.ಮೀ, 4 ಮಿ.ಮೀ., ಚಾಮರಾಜನಗರ ಜಿಲ್ಲೆಯಲ್ಲಿ ಕ್ರಮವಾಗಿ 1 ಮಿ.ಮೀ., 16 ಮಿ.ಮೀ, 12 ಮಿ.ಮೀ, 3 ಮಿ.ಮೀ ಹಾಗೂ ಕೊಡಗು ಜಿಲ್ಲೆಯಲ್ಲಿ ಕ್ರಮವಾಗಿ 1 ಮಿ.ಮೀ, 15 ಮಿ.ಮೀ., 11 ಮಿ.ಮೀ., 4 ಮಿ.ಮೀ ಮಳೆಯಾಗುವ ಸಾಧ್ಯತೆ ಇದೆ ಎಂದು ನಾಗನಹಳ್ಳಿ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ನ.17ರವರೆಗೆ ಸರಾಸರಿ ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಅಪರಾಧ ಕೃತ್ಯ ನಿಗ್ರಹಕ್ಕೆ ಲಷ್ಕರ್ ಪೊಲೀಸರಿಂದ ವಿಶೇಷ ಗಸ್ತು

ಸಂಶಯಾಸ್ಪದ ವ್ಯಕ್ತಿಗಳ ಸಮಗ್ರ ಮಾಹಿತಿ ಸಂಗ್ರಹ

ಎಸ್.ಟಿ. ರವಿಕುಮಾರ್

ಮೈಸೂರು, ನ.11–ಕೋವಿಡ್ ನಂತರ ಮೈಸೂರು ನಗರದಲ್ಲಿ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿದ್ದು, ರಾತ್ರಿ ವೇಳೆ ಅನುಮಾನಾಸ್ಪದವಾಗಿ ಓಡಾಡುವ ವ್ಯಕ್ತಿಗಳೇ ಬಹುತೇಕ ಅಪರಾಧಗಳನ್ನೆಸಗುತ್ತಿದ್ದಾರೆಂಬ ಸಂಶಯ ಮೂಡತೊಡಗಿದೆ.

ರಾಜ್ಯ ರಾಜಧಾನಿ ಬೆಂಗಳೂರು ಹೊರತುಪಡಿಸಿದರೆ ಅತೀ ವೇಗವಾಗಿ ಬೆಳೆಯುತ್ತಿರುವ ಎರಡನೇ ಅತೀ ದೊಡ್ಡ ನಗರ ಮೈಸೂರಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿರುವಂತೆಯೇ ಕಳ್ಳತನ, ಕೊಲೆ, ಸುಲಿಗೆ, ದರೋಡೆ, ವಂಚನೆ, ಸೈಬರ್ ಕ್ರೈಂಗಳಂತಹ ಪ್ರಕರಣಗಳೂ ಜಾಸ್ತಿಯಾಗುತ್ತಿವೆ. ಅದರಲ್ಲೂ ಪ್ರಮುಖವಾಗಿ ರಾತ್ರಿ ವೇಳೆ ಅವ್ಯಾಹತವಾಗಿ ಅಪರಾಧ ಕೃತ್ಯಗಳು ವರದಿಯಾಗುತ್ತಿವೆ. ನಗರದ ಹೃದಯ ಭಾಗದಲ್ಲಿರುವ ಲಷ್ಕರ್ ಮೊಹಲ್ಲಾದ ಕೆಎಸ್‌ಆರ್‌ಟಿಸಿ ಸಬರ್ಬನ್ ಬಸ್ ನಿಲ್ದಾಣ, ಇರ್ವಿನ್ ರಸ್ತೆ, ಗಾಂಧಿ ಸ್ಕ್ವೇರ್, ಹಳ್ಳದಕೇರಿ, ಮಂಡಿ ಮೊಹಲ್ಲಾ, ದೇವರಾಜ, ನಜರ್‌ಬಾದ್, ಕೆಆರ್, ಲಕ್ಷ್ಮೀಪುರಂ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಬಾಂಬೆ, ಕೊಲ್ಕತ್ತಾವೂ ಸೇರಿದಂತೆ ಹೊರ ದೇಶಗಳವರೂ ಅಪರಾಧ ಕೃತ್ಯಗಳನ್ನೆಸಗುತ್ತಿದ್ದಾರೆಂಬ ಮಾಹಿತಿ ದೊರೆತಿದೆ.

ಅಪರಾಧ ಕೃತ್ಯಗಳನ್ನು ನಿಗ್ರಹಿಸಲು ಇದೇ ಪ್ರಥಮ ಬಾರಿ ಮೈಸೂರಿನ ಲಷ್ಕರ್ ಠಾಣೆ ಪೊಲೀಸರು, ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಮಾರ್ಗದರ್ಶನದಂತೆ ವಿಶೇಷ ಗಸ್ತು ಮೂಲಕ ಅನುಮಾನಾಸ್ಪದ ವ್ಯಕ್ತಿಗಳ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಇನ್ಸ್‌ಪೆಕ್ಟರ್ ಪಿ.ಪಿ.ಸಂತೋಷ್ ನೇತೃತ್ವದ ಸಿಬ್ಬಂದಿ, ರಾತ್ರಿ ವೇಳೆ ಸಂಶಯಾಸ್ಪದವಾಗಿ ಓಡಾಡುವವರನ್ನು ಪ್ರಶ್ನಿಸಿ ಅವರ ಹೆಸರು, ವಿಳಾಸ, ಆಧಾರ್ ನಂಬರ್ ಹಾಗೂ ಬೆರಳಚ್ಚು ಮುದ್ರೆ ಪಡೆಯುತ್ತಿದ್ದಾರೆ. ಅವರ ಫೋಟೋ ಹಾಗೂ ಮಾಹಿತಿಗಳನ್ನು ಕ್ರೈಂ ಅಂಡ್ ಕ್ರಿಮಿನಲ್ ಇನ್ಫರ್ಮೇಷನ್ (ಸಿಸಿಐ) ಸಾಫ್ಟ್‌ವೇರ್‌ನಲ್ಲಿ ಸಂರಕ್ಷಿಸುವುದಲ್ಲದೇ, ಹೊಸ ಆ್ಯಪ್‌ನಲ್ಲಿ ಸ್ಟೋರ್ ಮಾಡುತ್ತಿದ್ದಾರೆ. ನೈಟ್ ಸಸ್ಪೆಕ್ಟ್ ಮ್ಯಾಪಿಂಗ್‌ನಿಂದ ಈಗಾಗಲೇ ಸಂಗ್ರಹಿಸಿರುವ 6,000 ಮಂದಿಯ ಫೋಟೋ ಹಾಗೂ 80 ಮಂದಿ ಕೊಲ್ಕತ್ತಾ ಮೂಲದ ವ್ಯಕ್ತಿಗಳ ಸಂಪೂರ್ಣ ಮಾಹಿತಿಯನ್ನು ಲಷ್ಕರ್ ಠಾಣೆ ಕಂಪ್ಯೂಟರ್ ಸಿಸ್ಟಂಗಳಲ್ಲಿ ಸ್ಟೋರ್ ಮಾಡಲಾಗಿದೆ. ಪ್ರಮುಖವಾಗಿ ರಾತ್ರಿ 11 ಗಂಟೆ ಮೇಲೆ ಸಂಭವಿಸುವ ಅಪರಾಧ ಕೃತ್ಯಗಳನ್ನು ಹೊರ ರಾಜ್ಯಗಳಿಂದ ಬಂದಿರುವವರು ಮಾಡುತ್ತಿದ್ದಾರೆಂಬುದು ಪೊಲೀಸರ ವಿಶೇಷ ಗಸ್ತಿಗೆ ಕಾರಣವಾಗಿದೆ.

ಒಂದು ವೇಳೆ ಮೈಸೂರು ನಗರ ಸೇರಿದಂತೆ ಬೇರೆ ಕಡೆಗಳಲ್ಲಿ ದರೋಡೆ, ಸುಲಿಗೆ, ಕಳ್ಳತನಗಳಂತಹ ಪ್ರಕರಣಗಳು ಸಂಭವಿಸಿದಲ್ಲಿ ಆರೋಪಿಗಳ ಪತ್ತೆಗೆ ಸಹಾಯವಾಗಲಿ ಎಂಬ ಕಾರಣಕ್ಕಾಗಿ ರಾತ್ರಿ ವೇಳೆ ಓಡಾಡುವ ಸಂಶಯಾಸ್ಪದ ವ್ಯಕ್ತಿಗಳ ಪೂರ್ವಾಪರ ಮಾಹಿತಿ ಲಭ್ಯವಾಗಲಿ ಎಂಬ ಕಾರಣಕ್ಕಾಗಿಯೇ ಕ್ರಮಕ್ಕೆ ಮುಂದಾಗಿರುವುದಾಗಿ ಇನ್ಸ್‌ಪೆಕ್ಟರ್ ಪಿ.ಪಿ. ಸಂತೋಷ್ ತಿಳಿಸಿದ್ದಾರೆ. ಸಂಶಯಾಸ್ಪದರು ನೀಡಿದ ವಿಳಾಸ, ಮಾಹಿತಿಯನ್ನು ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಯನ್ನು ಸಂಪರ್ಕಿಸಿ ದೃಢಪಡಿಸಿಕೊಳ್ಳಲಾಗುವುದು. ಒಂದು ವೇಳೆ ವಿದೇಶದವರಾಗಿದ್ದರೆ, ವೀಸಾ, ಪಾಸ್‌ಪೋರ್ಟ್ ಅವಧಿ ಮುಗಿದಿದ್ದರೂ ಅನಧಿಕೃತ ವಾಸ್ತವ್ಯ ಹೂಡಿರುವುದೂ ಗೊತ್ತಾಗುತ್ತದೆ. ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿಯನ್ನು ಪಡೆದು ಅವರ ಭಾವಚಿತ್ರದೊಂದಿಗೆ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ವಿಶೇಷ ಗಸ್ತು ವೇಳೆ ಮಾಹಿತಿ ಪಡೆಯುವುದರಿಂದ ಅಪರಾಧ ಮಾಡಲು ಹೊಂಚು ಹಾಕುವವರೂ ಸಿಕ್ಕಿ ಬೀಳುತ್ತೇವೆಂಬ ಭಯದಿಂದ ದುಷ್ಕೃತ್ಯ ಕೈಬಿಡುತ್ತಾರೆ. ಪರಿಣಾಮ ಅಪರಾಧ ಕೃತ್ಯಗಳೂ ಕಡಿಮೆಯಾಗುತ್ತವೆ.

ಲಷ್ಕರ್ ಠಾಣೆ ಸಬ್ ಇನ್ಸ್‌ಪೆಕ್ಟರ್‌ಗಳಾದ ಗೌತಮ್‌ಗೌಡ, ಧನಲಕ್ಷ್ಮಿ ಹಾಗೂ ಕ್ರೈಂ ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿದ್ದಾರೆ. ಮೈಸೂರಿನ ಇನ್ನಿತರ ಪೊಲೀಸ್ ಠಾಣೆ ಅಧಿಕಾರಿಗಳೂ ವಿಶೇಷ ಗಸ್ತು ಮಾಡಿದಲ್ಲಿ ಪರಿಣಾಮಕಾರಿಯಾಗಿ ಅಪರಾಧಗಳನ್ನು ತಡೆಯಬಹುದು. ಅಲ್ಲದೆ ಅಪರಾಧ ಪತ್ತೆಗೂ ಸಹಕಾರಿಯಾಗಲಿದೆ.

ಮಹಿಳೆಯರ ಶವಗಳ ಬೆತ್ತಲೆ ಫೋಟೋ, ವಿಡಿಯೋ ಮಾಡಿಕೊಂಡು ಬಿಡುವಿನ ವೇಳೆ ನೋಡುವ ವಿಕೃತ ಸಂತೋಷಿ!

- ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಹೊರ ಗುತ್ತಿಗೆ ನೌಕರನ ಅಸಹ್ಯ ಹವ್ಯಾಸ
- ಆಸ್ಪತ್ರೆಯ ಮಹಿಳಾ ಸಿಬ್ಬಂದಿಯನ್ನು ನಿರಂತರವಾಗಿ ಪೀಡಿಸಿದ ಆರೋಪ

ಮಡಿಕೇರಿ, ನ.11– ಬದುಕಿದ್ದವರ ವಿಚಾರದಲ್ಲಿ ಮಾತ್ರವಲ್ಲ, ಶವದ ವಿಚಾರದಲ್ಲೂ ವಿಕೃತಿ ಮೆರೆಯುವವರು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದಾರೆ. ಇದನ್ನು ಮನೋವಿಕೃತಿ ಎನ್ನಬೇಕೋ, ಪೈಶಾಚಿಕ ಗುಣ ಅನ್ನಬೇಕೋ ತಿಳಿಯದಾಗಿದೆ.

ಇಲ್ಲೊಬ್ಬ ಶವಾಗಾರದಲ್ಲಿ ಮಹಿಳೆಯರ ಶವಗಳ ಬೆತ್ತಲೆ ಫೋಟೋಗಳನ್ನು ತೆಗೆಯುವುದರೊಂದಿಗೆ ಹೇಯ ಕೃತ್ಯವೆಸಗಿದ್ದಾನೆ. ಮಾತ್ರವಲ್ಲ, ಆಸ್ಪತ್ರೆಯ ಮಹಿಳಾ ಸಿಬ್ಬಂದಿಯನ್ನು ಪೀಡಿಸುತ್ತಿದ್ದ ಆರೋಪವೂ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಕೇಳಿ ಬಂದಿದೆ.

ಮಡಿಕೇರಿ ಜಿಲ್ಲಾಸ್ಪತ್ರೆಯ ಶವಾಗಾರದ ಡಿ. ಗ್ರೂಪ್ ನೌಕರ (ಹೊರಗುತ್ತಿಗೆ) ಸೈಯದ್, ಇಂತಹ ಕೃತ್ಯವೆಸಗಿದ್ದು, ಹಗ್ಗ ಜಗ್ಗಾಟದ ನಂತರ ಈಗ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೋವಿಡ್ ಆರಂಭದಲ್ಲಿ ಈತನನ್ನು ಕೋವಿಡ್ ವಾರಿಯರ್ ಆಗಿ ನೇಮಕ ಮಾಡಲಾಗಿತ್ತು. ಇವನಿಗೆ ಶವಾಗಾರ ನಿರ್ವಹಣೆ ಜವಾಬ್ದಾರಿ ನೀಡಲಾಗಿತ್ತು.

ಇದನ್ನು ಬಂಡವಾಳ ಮಾಡಿಕೊಂಡ ಈತ, ಶವಾಗಾರಕ್ಕೆ ಬರುವ ಮಹಿಳೆಯರ ಶವಗಳ ನಗ್ನ ವಿಡಿಯೋ ಮತ್ತು ಫೋಟೋಗಳನ್ನು ತೆಗೆದು, ಸಮಯ ಸಿಕ್ಕಾಗ ಅವುಗಳ ನೋಡಿಕೊಂಡು ವಿಕೃತಿ ಮೆರೆಯುತ್ತಿದ್ದನಂತೆ. ತಾನೊಬ್ಬ ಅನಾಥ ಎಂದು ಹೇಳಿಕೊಂಡು ಆಸ್ಪತ್ರೆಯ ಮಹಿಳಾ ಸಿಬ್ಬಂದಿಯ ಅನುಕಂಪ ಗಿಟ್ಟಿಸಿಕೊಂಡು, ಕೆಲವರನ್ನು ಪೀಡಿಸುತ್ತಿದ್ದನಂತೆ.

ಸೈಯದ್‌ನ ಪೀಡನೆಗೆ ಗುರಿಯಾದವರಲ್ಲಿ ಅತೀ ಹೆಚ್ಚು ಮಂದಿ ವಿವಾಹಿತೆಯರೇ ಆಗಿದ್ದಾರಂತೆ. ಈ ವಿಚಾರ ಆಸ್ಪತ್ರೆಯ ಮುಖ್ಯಸ್ಥರವರೆಗೂ ಹೋದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಈ ವಿಚಾರ ತಿಳಿದ ಹಿಂದು ಸಂಘಟನೆಯ ಪ್ರಮುಖ ಬೆಳ್ಯಪ್ಪ ಎಂಬುವರು ಜಿಲ್ಲಾಸ್ಪತ್ರೆಯ ಉನ್ನತ ಅಧಿಕಾರಿಗಳ ಗಮನಕ್ಕೆ ತಂದಿದ್ದರೂ ಕ್ರಮ ತೆಗೆದುಕೊಂಡಿರಲಿಲ್ಲ. ಆದರೆ ಸಂಘಟನೆಯ ಒತ್ತಡ ಹೆಚ್ಚಿದ ಹಿನ್ನೆಲೆಯಲ್ಲಿ ಆಸ್ಪತ್ರೆಯ ಡೀನ್ ನ.5ರಂದು ನಗರ ಠಾಣೆಗೆ ಲಿಖಿತ ದೂರು ನೀಡಿದ್ದಾರೆ. ಆದರೆ ಆರೋಪಿ ಕೆಲಸಕ್ಕೇ ರಾಜೀನಾಮೆ ನೀಡಿರುವುದಾಗಿ ತಿಳಿದು ಬಂದಿದೆ.

ಸೈಯದ್ ರಕ್ಷಣೆಗೆ ಒಂದು ತಂಡವೇ ಇದೆ ಎಂಬ ಅನುಮಾನ ಇದೀಗ ಮೂಡಿದೆ. ಸಾಕಷ್ಟು ಜನ ಹೆಣ್ಣು ಮಕ್ಕಳನ್ನು ಪೀಡಿಸುವುದು, ಅವರನ್ನು ಬ್ಲಾಕ್‌ಮೇಲ್ ಮಾಡುತ್ತಿದ್ದ ಎಂಬ ವಿಚಾರ ಆತನ ಮೊಬೈಲ್‌ನಲ್ಲಿದ್ದ ಆಡಿಯೋ ಸಂಭಾಷಣೆಯಿಂದ ದೃಢಪಟ್ಟಿದೆ.

ಆದರೂ ಯಾವ ಮಹಿಳೆಯರು ಯಾವುದೇ ಪೊಲೀಸ್ ಠಾಣೆಯ ಮೆಟ್ಟಿಲೇರದಿರುವುದು ಅಚ್ಚರಿ ಮೂಡಿಸಿದೆ.

ಕನಕದಾಸರ ವಿಚಾರಧಾರೆ ತಿಳಿದು ಜ್ಞಾನವಂತರಾಗಿ

ಜಿಲ್ಲಾಡಳಿತದಿಂದ ಕನಕದಾಸರ ಜಯಂತಿ ಆಚರಣೆ



ಮಡಿಕೇರಿ, ನ.11– ಕನಕದಾಸರ ವಿಚಾರ ಧಾರೆಗಳನ್ನು ತಿಳಿದುಕೊಂಡು ಪ್ರತಿಯೊಬ್ಬರೂ ಜ್ಞಾನವಂತರಾಗಬೇಕು. ಶಿಕ್ಷಣ ಪಡೆದು ಸಾಮಾಜಿಕವಾಗಿ ಮುಖ್ಯವಾಹಿನಿಗೆ ಬರಲು ಪ್ರಯತ್ನಿಸಬೇಕು ಎಂದು ಜಿಪಂ ಸಿಇಓ ಡಾ.ಎಸ್.ಆಕಾಶ್ ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಕುಶಾಲನಗರದ ವಾಲ್ಮೀಕಿ ಭವನದಲ್ಲಿ ಶುಕ್ರವಾರ ನಡೆದ ಕನಕದಾಸರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ದಾಸ ಶ್ರೇಷ್ಠರಾದ ಭಕ್ತ ಕನಕದಾಸರು ಹೇಳಿದಂತೆ ಪ್ರತಿಯೊಬ್ಬರೂ ಜ್ಞಾನವಂತರಾಗಬೇಕು. ಸಮಾಜದ ಬಗ್ಗೆ ತಿಳುವಳಿಕೆ ಇರಬೇಕು. ಎಲ್ಲರೂ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಸಮಾನವಾಗಿ ಬದುಕುವುದನ್ನು ಕಲಿಯಬೇಕು ಎಂದು ಅವರು ಸಲಹೆ ನೀಡಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ ಅವರು ಮಾತನಾಡಿ, ದಾಸ ಶ್ರೇಷ್ಠರಲ್ಲಿ ಕನಕದಾಸರೂ ಒಬ್ಬರು. ಕನಕದಾಸರ ಕೀರ್ತನೆಗಳನ್ನು ಅಧ್ಯಯನ ಮಾಡುವಂತಾಗಬೇಕು. ಶತಮಾನಗಳ ಹಿಂದೆಯೇ ಸಾಮಾಜಿಕ ಅಸಮಾನತೆ ಇರುವುದನ್ನು ಕಾಣಬಹುದಾಗಿದೆ. ಶ್ರೀಮಂತರು ಮತ್ತು ಬಡವರ ನಡುವಿನ ಅಂತರವನ್ನು ಶರಣರು ಹಾಗೂ ದಾಸರ ಕಾಲದಲ್ಲಿಯೂ ಅವರ ವಚನಗಳು ಮತ್ತು ಕೀರ್ತನೆಗಳಲ್ಲಿ ಕಾಣಬಹುದಾಗಿದೆ ಎಂದರು.

ಕುಶಾಲನಗರ ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಜಯವರ್ಧನ ಅವರು ಮಾತನಾಡಿ, ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿನ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಪ್ರಯತ್ನಿಸಿದರು ಎಂದರು.

ಸಂಗೊಳ್ಳಿ ರಾಯಣ್ಣ ಕುರುಬ ಸಮಾಜದ ಹಿತರಕ್ಷಣಾ ವೇದಿಕೆಯ ಜಿಲ್ಲಾ ಅಧ್ಯಕ್ಷರಾದ ಪ್ರಭಾಕರ್ ಅವರು ಮಾತನಾಡಿ, ತಳಸಮುದಾಯಗಳನ್ನು ಮೇಲೆತ್ತಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದರು.

ಕನಕ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕರು ಅಗತ್ಯ ಸಹಕಾರ ನೀಡಿದ್ದಾರೆ. ಆ ನಿಟ್ಟಿನಲ್ಲಿ ಕನಕ ಸಮುದಾಯ ಭವನ ನಿರ್ಮಾಣ ಮಾಡುವಂತಾಗಲು ಕೈಜೋಡಿಸಬೇಕು ಎಂದು ಅವರು ಮನವಿ ಮಾಡಿದರು.

ಹೆಬ್ಬಾಲೆ ಸಂಯುಕ್ತ ಪದವಿಪೂರ್ವ ಕಾಲೇಜಿನ ಕನ್ನಡ ಶಿಕ್ಷಕರಾದ ವೆಂಕಟ ನಾಯಕ್, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ವಿ. ಸುರೇಶ್ ಅವರು ಮಾತನಾಡಿದರು.

ವಿದ್ಯಾರ್ಥಿನಿ ಶ್ರೀಷಾ, ಕನಕದಾಸರ ಕುರಿತು ಮಾತನಾಡಿದರು. ನಿವೃತ್ತ ಶಿಕ್ಷಕರು ಮತ್ತು ಕಲಾವಿದರಾದ ಬಿ.ಸಿ.ಶಂಕರಯ್ಯ ಅವರು ಕನಕದಾಸರ ಕೀರ್ತನೆಗಳನ್ನು ಹಾಡಿದರು. ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಕನ್ನಡ ಮತ್ತು ಇಂಗ್ಲೀಷ್ ನಿಘಂಟು ವಿತರಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತು ಕುಶಾಲನಗರ ತಾಲೂಕು ಘಟಕದ ಅಧ್ಯಕ್ಷ ಕೆ.ಎಸ್.ಮೂರ್ತಿ, ಉಪ ವಿಭಾಗಾಧಿಕಾರಿ ಯತೀಶ್ ಉಲ್ಲಾಳ್, ತಹಶೀಲ್ದಾರ್ ಪ್ರಕಾಶ, ನರಗುಂದ, ತಾ.ಪಂ. ಇಓ ಜಯಣ್ಣ, ಸಿಡಿಪಿಓ ಸಿ.ಎಂ.ಅಣ್ಣಯ್ಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕುಶಾಲನಗರ ತಾಲೂಕು ಅಧಿಕಾರಿ ಮೋಹನ್ ಕುಮಾರ್, ಪ್ರಮುಖರಾದ ಹೇಮಲತಾ ಇತರರು ಇದ್ದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಚಿನ್ನಸ್ವಾಮಿ ಸ್ವಾಗತಿಸಿದರು, ಮಣಜೂರು ಮಂಜುನಾಥ್ ನಿರೂಪಿಸಿದರು, ಶಂಕರಯ್ಯ ನಾಡಗೀತೆ ಹಾಡಿದರು, ಕ್ಷೇತ್ರ ಸಂಪನ್ಮೂಲ ಅಧಿಕಾರಿ ಲೋಕೇಶ್ ವಂದಿಸಿದರು.

ದಲಿತರು, ಆದಿವಾಸಿಗಳಿಗೆ ನಿವೇಶನಕ್ಕೆ ಆಗ್ರಹಿಸಿ ಪ್ರತಿಭಟನೆ



ವಿರಾಜಪೇಟೆ, ನ11– ಅಮ್ಮತ್ತಿ ಕಾರ್ಮಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ದಲಿತರು ಮತ್ತು ಆದಿವಾಸಿಗಳಿಗೆ ಸ್ವಂತ ಸೂರು ಇಲ್ಲದೆ ಬಾಡಿಗೆ ಮನೆಗಳಲ್ಲಿ ವಾಸಿಸುತ್ತಿರುವವರಿಗೆ ನಿವೇಶನ ನೀಡುವಂತೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ–ಎಂ) ವತಿಯಿಂದ ಕಾರ್ಮಾಡು ಗ್ರಾಮ ಪಂಚಾಯಿತಿ ಎದುರು ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆ ಸಂದರ್ಭದಲ್ಲಿ ಸಿಪಿಐ (ಎಂ) ಅಮ್ಮತ್ತಿ ಶಾಖೆಯ ಕಾರ್ಯದರ್ಶಿ ಎ.ಮಹದೇವ ಮಾತನಾಡಿ, ಹಲವು ವರ್ಷಗಳಿಂದ ನಿವೇಶನಕ್ಕಾಗಿ ದಲಿತರು ಮತ್ತು ಆದಿವಾಸಿಗಳು ಕಾರ್ಮಾಡು ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದ್ದರೂ ಇದುವರೆಗೆ ನಿವೇಶನ ನೀಡುವ ಕೆಲಸವಾಗಿಲ್ಲ. ಪಂಚಾಯಿತಿ ವ್ಯಾಪ್ತಿಯಲ್ಲಿರುವ ಪೈಸಾರಿ ಜಾಗವನ್ನು ಗುರುತಿಸಲು ಮುಂದಾಗಿಲ್ಲ. ನಮ್ಮ ಮನವಿಗೂ ಯಾವುದೇ ಸ್ಪಂದನೆ ದೊರಕಿಲ್ಲ ಎಂದರು.

ಇದರಿಂದ ಬೇಸತ್ತು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಕಾರ್ಮಾಡು ಗ್ರಾಮದ ಸ.ನ.295/1ಪಿ1ರಲ್ಲಿ 1,99 ಎಕ್ರೆ ಪೈಸಾರಿ ಜಾಗವಿದ್ದು, ಆ ಜಾಗವನ್ನು ನಿವೇಶನ ರಹಿತರಿಗೆ ನೀಡುವಂತೆ ಜಿಲ್ಲಾಧಿಕಾರಿ, ಕಂದಾಯ ಇಲಾಖೆ ಮನವಿ ಸಲ್ಲಿಸಲಾಗಿದ್ದರೂ ಕ್ರಮ ಕೈಗೊಂಡಿಲ್ಲ. ನಿವೇಶನ ರಹಿತರಿಗೆ ಪಂಚಾಯಿತಿ ನಿವೇಶನ ನೀಡುವರೆಗೂ ನಮ್ಮ ಹೋರಾಟ ಮುಂದುವರೆಯಲಿದೆ ಅಗತ್ಯವಿದ್ದಲ್ಲಿ ಕಾನೂನಿನ ಹೋರಾಟ ನಡೆಸುವುದಾಗಿ ಅವರು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಜಯಮ್ಮ ಮಾತನಾಡಿ, ಕಳೆದ 70 ವರ್ಷಗಳಿಂದ ಅಮ್ಮತ್ತಿ ಪಟ್ಟಣದ ಬಸ್ ತಂಗುದಾಣದ ಬಳಿಯಿದ್ದ ಶೌಚಾಲಯವನ್ನು ಇತ್ತೀಚೆಗೆ ಒಡೆದು ಹಾಕಿ ಅದೇ ಜಾಗದಲ್ಲಿ ಪಂಚಾಯಿತಿ ಅಂಗಡಿ ಮಳಿಗೆಗಳನ್ನು ನಿರ್ಮಿಸಲಾಗಿದೆ. ಪಟ್ಟಣಕ್ಕೆ ಬರುವ ಸಾರ್ವಜನಿಕರಿಗೆ, ಮಹಿಳೆಯರಿಗೆ ಶೌಚಾಲಯ ಇಲ್ಲದೆ ಸಮಸ್ಯೆ ಉಂಟಾಗಿದ್ದು, ಕೂಡಲೇ ಪಂಚಾಯಿತಿ ಅದೇ ಜಾಗದಲ್ಲಿ ಶೌಚಾಲಯ ನಿರ್ಮಿಸಿಕೊಡಬೇಕು. ಇಲ್ಲವಾದಲ್ಲಿ ನಿರಂತರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು. ಪ್ರತಿಭಟನೆ ಸ್ಥಳಕ್ಕೆ ಆಗಮಿಸಿದ್ದ ಕಾರ್ಮಾಡು ಗ್ರಾಪಂ ಅಧ್ಯಕ್ಷ ಕೆ.ಬಿ.ನಾಣಯ್ಯ ಹಾಗೂ ತಾಲೂಕು ಕಚೇರಿ ಶಿರಸ್ತೇದಾರ್ ಪೊನ್ನು ಅವರಿಗೆ ಸರಕಾರಕ್ಕೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು. ಈ ವೇಳೆ ಅಮ್ಮತ್ತಿ ಕಂದಾಯ ಪರಿವೀಕ್ಷಕ ಅನೀಲ್ ಕುಮಾರ್ ಮಾತನಾಡಿ, ಪೈಸಾರಿ ಜಾಗ ಎಡುಕಟೆ ಇದ್ದು ಅದನ್ನು ಸರ್ವೆ ಮಾಡಿ ನಂತರ ಸರ್ಕಾರದ ಆದೇಶದಂತೆ ನಿವೇಶನ ರಹಿತರಿಗೆ ನೀಡಲಾಗುವುದು. ಅದಕ್ಕೂ ಮೊದಲು ಫಲಾನುಭವಿಗಳು ನಿರಾಶ್ರಿತರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ತಿಳಿಸಿದರು.

ಇದಕ್ಕೂ ಮೊದಲು ರಾಮಮಂದಿರದಿಂದ ಪ್ರತಿಭಟನೆ ಮೆರವಣಿಗೆ ಹೊರಟು ಅಮ್ಮತ್ತಿ ಮುಖ್ಯ ರಸ್ತೆ ಮೂಲಕ ಸಾಗಿ ಕಾರ್ಮಾಡು ಪಂಚಾಯಿತಿ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಸಿಪಿಐ ಎಂ. ಪಕ್ಷದ ಇಬ್ರಾಹಿಂ, ಬಿ.ಕೆ.ಮಾಂಕು, ರಾಚಪ್ಪಾಜಿ, ಪಾರ್ವತಿ, ಹೊನ್ನಪ್ಪ ಕುಮಾರ, ಮನೋಜ್, ಹೆಚ್.ಬಿ. ರಮೇಶ್ ಉಪಸ್ಥಿತರಿದ್ದರು. ಪ್ರತಿಭಟನೆಯಲ್ಲಿ ಮಹಿಳಾ ಸದಸ್ಯರು ಹೆಚ್ಚು ಭಾಗವಹಿಸಿದ್ದರು.

ಗುಣಮಟ್ಟದ ಕಾಫಿ ಉತ್ಪಾದನೆಗೆ ಮೇಕ್ ಇನ್ ಇಂಡಿಯಾ ಯೋಜನೆ ಅನುಷ್ಠಾನ

ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಬೆಳೆಗಾರರ ಸಂಘದ ಅಧ್ಯಕ್ಷರ ಆಗ್ರಹ



ಮಡಿಕೇರಿ,ನ.11– ಕಾಫಿ ಉದ್ಯಮದಲ್ಲಿ ಆಧುನಿಕ ತಾಂತ್ರಿಕತೆ ಬಳಸಿಕೊಂಡು ಅತ್ಯುತ್ತಮ ಗುಣಮಟ್ಟದ ಕಾಫಿ ಉತ್ಪಾದನೆಗೆ 'ಮೇಕ್ ಇನ್ ಇಂಡಿಯಾ' ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಮುಂದಾಗಬೇಕೆಂದು ಕರ್ನಾಟಕ ಬೆಳೆಗಾರರ ಸಂಘದ ಅಧ್ಯಕ್ಷ ಎನ್. ರಾಮನಾಥನ್ ಆಗ್ರಹಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎನ್. ರಾಮನಾಥನ್, ವಿವಿಧ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಕೃಷಿ ಮತ್ತು ತೋಟಗಾರಿಕಾ ಯಂತ್ರೋಪಕರಣಗಳನ್ನು ಭಾರತದ ಹವಾಗುಣಕ್ಕೆ ಸರಿ ಹೊಂದುವಂತೆ ದೇಶೀಯವಾಗಿಯೇ 'ಆತ್ಮ ನಿರ್ಭರ್' ಯೋಜನೆಯಡಿ ಉತ್ಪಾದಿಸಲು ಸಾಧ್ಯವಾಗುವಂತೆ ಯೋಜನೆ ರೂಪಿಸಬೇಕಾಗಿದೆ ಹೀಗಾದಾಗ ತೋಟ ಮತ್ತು ಕಾರ್ಮಿಕರ ನಿರ್ವಹಣೆಯ ಅಧಿಕ ವೆಚ್ಚದಿಂದ ಬೆಳೆಗಾರರು ಪಾರಾಗಲು ಸಾಧ್ಯವಾಗಲಿದೆ ಅಂತೆಯೇ, ಕೃಷಿ ಮತ್ತು ತೋಟಗಾರಿಕಾ ಉಪಕರಣಗಳ ಮೇಲೆ ಈಗಿರುವ ವಾಣಿಜ್ಯ ತೆರಿಗೆಯ ಹೊರೆಯನ್ನೂ ಕಡಿಮೆ ಮಾಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದರು.

ಸರ್ಕಾರಗಳು ಆಗಿಂದಾಗ್ಗೆ ಜಾರಿಗೆ ತರುತ್ತಿರುವ ಕೃಷಿ ಭೂಮಿ ಹಾಗೂ ಪಾಸಿರ ಸಂಬಂಧಿತ ಕಾಯಿದೆಗಳು ಬೆಳೆಗಾರ ವಲಯದಲ್ಲಿ ಗೊಂದಲ ಮತ್ತು ಸಮಸ್ಯೆ ಸೃಷ್ಟಿಸುತ್ತಿದೆ. ಈ ನಿಟ್ಟಿನಲ್ಲಿ ಎಲ್ಲಾ ಕಾಲಕ್ಕೂ ಸಲ್ಲುವ ಸ್ಪಷ್ಟ ಕಾಯಿದೆಯ ಅಗತ್ಯವಿದೆ ಎಂದೂ ಅವರು ಹೇಳಿದರು.

ಕಾಫಿಯ ಆಂತರಿಕ ಬಳಕೆ ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಫಿ ಮಂಡಳಿ ಸಹಯೋಗದೊಂದಿಗೆ ಉತ್ತಮ ಕಾಫಿಯನ್ನು ಒದಗಿಸಬೇಕೆಂದು ರಾಮನಾಥನ್ ಸಲಹೆ ನೀಡಿದರು. ಕಾಫಿ ತೋಟಗಳ ಬಳಿ ಬ್ಯಾಂಕ್‌ಗಳು ಸೂಕ್ತ ಎಟಿಎಂ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಒತ್ತಾಯಿಸಿದ ಅವರು, ಭಾರತೀಯ ಕಾಫಿ ಮಂಡಳಿಯು ಈಗಾಗಲೇ ವಿಶ್ವ ವ್ಯಾಪಿಯ 30 ಕಾಫಿ ವೆರೈಟಿಗಳನ್ನು ತರಿಸಿಕೊಂಡಿದೆ. ಈ ವೆರೈಟಿಗಳನ್ನು ಶೀಘ್ರವೇ ಕಾಫಿ ಕೃಷಿ ಭೂಮಿಯಲ್ಲಿ ನೆಡಲು ಬಿಡುಗಡೆಗೊಳಿಸುವಂತೆಯೂ ಒತ್ತಾಯಿಸಿದರು.

ದಕ್ಷಿಣ ಭಾರತ ಬೆಳೆಗಾರರ ಸಂಘ, ಉಪಾಸಿ ಅಧ್ಯಕ್ಷ ಜೆಫ್ರಿ ರೆಬೆಲ್ಲೋ ಮಾತನಾಡಿ, ಅತ್ಯಧಿಕ ಸಂಖ್ಯೆಯಲ್ಲಿ ವಿದೇಶಿ ಮೂಲದ ಕಾಫಿ ಸಂಸ್ಥೆಗಳು ಭಾರತದಲ್ಲಿ ಕಾಫಿ ಕೆಫೆಯನ್ನು ಪ್ರಾರಂಭಿಸುತ್ತಿರುವ ದಿನಗಳಲ್ಲಿ ಕೇಂದ್ರ ಸರ್ಕಾರವು ಸ್ಥಳೀಯವಾಗಿ ಕಾಫಿ ಸಂಸ್ಕೃತಿಗೆ ಹೆಚ್ಚು ಒತ್ತು ನೀಡುವಂತಹ ಯೋಜನೆ ರೂಪಿಸಬೇಕೆಂದು ಸಲಹೆ ನೀಡಿದರು. ಬೆಳೆಗಾರರಿಗೆ ಬಹಳ ಪ್ರಯೋಜನಕಾರಿಯಾಗಿದ್ದ ಹಲವಾರು ಯೋಜನೆಗಳನ್ನು ಕಾಫಿ ಮಂಡಳಿಯು ಪುನರ್ ಜಾರಿಗೊಳಿಸುವಂತೆಯೂ ಜೆಫ್ರಿ ರೆಬೆಲ್ಲೋ ಒತ್ತಾಯಿಸಿದರು.

ಕಾಫಿ ಮಂಡಳಿ ಮಾಜಿ ಉಪಾಧ್ಯಕ್ಷ ಬೋಸ್ ಮಂದಣ್ಣ ಮಾತನಾಡಿ, ಕಾಫಿ ಬೆಳೆಗಾರರ ಹಿತಾಸಕ್ತಿ ಕಾಯುವಲ್ಲಿ ಎಲ್ಲಾ ಸಂಸ್ಥೆಗಳೂ ಒಗ್ಗೂಡಿ ಕಾರ್ಯನಿರ್ವಹಿಸುತ್ತಿವೆ. ಶೇ.90 ರಷ್ಟಿರುವ ಸಣ್ಣ ಬೆಳೆಗಾರರ ಹಿತಾಸಕ್ತಿಯನ್ನು ಆದ್ಯತೆಯಾಗಿ ಪರಿಗಣಿಸಲಾಗಿದೆ. ಸಣ್ಣ ಬೆಳೆಗಾರರ ಹಿತವನ್ನು ಖಂಡಿತಾ ಕಡೆಗಾಣಿಸಲಾಗಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಸಿ ಕಾರ್ಯದರ್ಶಿ ಆರ್.ಸಂಜಿತ್, ಕರ್ನಾಟಕ ಬೆಳೆಗಾರರ ಸಂಘದ ಕಾರ್ಯದರ್ಶಿ ಡಿ.ಅನಿಲ್ ಸವೂರು, ಉಪಾಸಿ ಕಾಫಿ ಸಮಿತಿ ಅಧ್ಯಕ್ಷ ಅಜೋಯ್ ತಿಪ್ಪಯ್ಯ ಉಪಸ್ಥಿತರಿದ್ದರು.

ತಾರ್ಕಿಕ ಚಿಂತನೆಗಳು, ಕೀರ್ತನೆಗಳ ಮೂಲಕ ಮನುಕುಲವನ್ನು ಬೆಳಗಿದವರು ಕನಕದಾಸರು

ಸಂಸದ ಶ್ರೀನಿವಾಸಪ್ರಸಾದ್ ಅಭಿಮತ



ಚಾಮರಾಜನಗರ, ನ.11– ತಾರ್ಕಿಕ ಚಿಂತನೆಗಳು, ಸಕಾರಾತ್ಮಕ ಕೀರ್ತನೆಗಳ ಮೂಲಕ ಇಡೀ ಮನುಕುಲವನ್ನೇ ಬೆಳಗಿದ ಕನಕದಾಸರು ದಾಸಶ್ರೇಷ್ಠರಲ್ಲಿ ಅಗ್ರಗಣ್ಯರಾಗಿದ್ದಾರೆ ಎಂದು ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ. ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಕನಕದಾಸ ಜಯಂತೋತ್ಸವ ಸಮಿತಿ ಮತ್ತು ಜಿಲ್ಲೆಯ ವಿವಿಧ ಸಂಸ್ಥೆಗಳ ಸಹಕಾರದೊಂದಿಗೆ ಆಯೋಜಿಸಲಾಗಿದ್ದ ದಾಸಶ್ರೇಷ್ಠ ಶ್ರೀ ಕನಕದಾಸರ 535ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಮಾನ್ಯ ಜನರಿಗೆ ಸರಳವಾಗಿ ಅರ್ಥವಾಗುವಂತಹ ಕೀರ್ತನೆಗಳನ್ನು ರಚಿಸಿ, ಸಮಾಜವನ್ನು ಸನ್ಮಾರ್ಗದೆಡೆಗೆ ನಡೆಸಿದ ಸಮಾಜ ಸುಧಾರಕರಲ್ಲಿ ಕನಕದಾಸರು ಪ್ರಮುಖರಾಗಿದ್ದಾರೆ. ದೇಶದಲ್ಲಿ ಮಹಾನ್ ಪುರುಷರು, ಚಿಂತಕರು, ಸಾಧು–ಸಂತರು ಸಾಕಷ್ಟು ವಿಚಾರಧಾರೆಗಳನ್ನು ಬಿತ್ತಿ ಹೋಗಿದ್ದಾರೆ. ಆದರೆ ಅವರ ಚಿಂತನೆಗಳು ಸಮರ್ಪಕವಾಗಿ ಅನುಷ್ಠಾನವಾಗಿಲ್ಲದಿರುವುದು ವಿಷಾದದ ಸಂಗತಿಯಾಗಿದೆ. ಕಾಲಮಾನ, ನಾಗರಿಕತೆ ಬದಲಾದಂತೆ ನಾವೆಲ್ಲರೂ ಸಹ ಪ್ರಜ್ಞಾವಂತ ನಾಗರಿಕರಾಗಬೇಕಾಗಿದೆ ಎಂದರು.

ಭಾರತದಲ್ಲಿ ಸಾವಿರಾರು ಜಾತಿ, ಉಪ ಜಾತಿಗಳಿವೆ. ಇಂದು ಎಲ್ಲೆಡೆ ಜಾತೀ ವೈಭವೀಕರಣವಾಗುತ್ತಿದೆ. ಇದು ಸಲ್ಲದು. ಪ್ರತಿಯೊಬ್ಬರು ಮನುಷ್ಯತ್ವ ಸಮಾಜದ ಬಗ್ಗೆ ಚಿಂತನೆ ಮಾಡಬೇಕು. ಭಾರತ ದೇಶ ದೊಡ್ಡದು. ಆದರೆ ದೇಶದ ಜನ ದೊಡ್ಡತನವಿಲ್ಲ. ಜಾತೀಯತೆಯ ಮನಸ್ಸುಗಳು ಪರಿವರ್ತನೆಯಾಗಬೇಕು. ಎಲ್ಲರನ್ನು ಪ್ರೀತಿ, ವಿಶ್ವಾಸದಿಂದ ಕಾಣುವ ಮೂಲಕ ಕನಕದಾಸರಿಗೆ ಗೌರವ ಸಲ್ಲಿಸಬೇಕು ಎಂದ ಶ್ರೀನಿವಾಸಪ್ರಸಾದ್ ಅವರು, ಜಿಲ್ಲಾ ಕೇಂದ್ರದಲ್ಲಿ ಕನಕ ಸಮುದಾಯ ಭವನ ನಿರ್ಮಾಣಕ್ಕೆ ಸಂಸದರ ನಿಧಿಯಿಂದ 10 ಲಕ್ಷ ರೂ.ಗಳ ನೀಡಲಾಗುವುದು ಎಂದು ತಿಳಿಸಿದರು.

ನಿವೃತ್ತ ಶಿಕ್ಷಕರಾದ ಶಿವಣ್ಣ ಇಂದ್ವಾಡಿ ಮುಖ್ಯ ಭಾಷಣ ಮಾಡಿ, ದಾಸಸಾಹಿತ್ಯದ ಪ್ರವರ್ತಕರಾಗಿದ್ದ ಕನಕದಾಸರು ಈ ಜಗತ್ತು ಕಂಡ ಶ್ರೇಷ್ಠಕವಿ, ಭಕ್ತರು, ವಾಗ್ಮೀಯಿ. ಅಖಂಡ ಕರ್ನಾಟಕದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷ ಸಾಹಿತ್ಯ ಪ್ರಾಕಾರ ಎಂದರೇ ಅದು ದಾಸಸಾಹಿತ್ಯ. ಸುಸಂಸ್ಕೃತ ಸ್ವಸ್ಥ ಸಮಾಜವನ್ನು ಕಟ್ಟಲು ದಾಸಶ್ರೇಷ್ಠರು ಕೀರ್ತನೆಗಳ ಮೂಲಕ ಆಂದೋಲನವನ್ನು ಪ್ರಾರಂಭಿಸಿದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಕನಕದಾಸರು ಬಹಳ ಅರ್ಥಗರ್ಭಿತ ಕೀರ್ತನೆಗಳನ್ನು ರಚಿಸಿ ಸಮಾಜವನ್ನು ತಿದ್ದಿ ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದವರು. ಅವರ ಕೀರ್ತನೆಗಳ ಸಾರವನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಮೈಸೂರು ಜಿಲ್ಲೆಯ ಕೆ.ಆರ್. ನಗರದ ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದ ಪುರಿ ಸ್ವಾಮಿಯವರು ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ನಗರಸಭೆ ಅಧ್ಯಕ್ಷೆ ಸಿ.ಎಂ. ಆಶಾ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯತ್ರಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರರಾಜು, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಗುರುಲಿಂಗಯ್ಯ, ಸಮಾಜದ ತಾಲೂಕು ಅಧ್ಯಕ್ಷ ಸಿ.ಎನ್. ಬಾಲರಾಜು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಆರಂಭದಲ್ಲಿ ಆರ್. ಮಹೇಂದ್ರ ಮತ್ತು ತಂಡದವರು ದಾಸರ ಪದಗಳು, ಕೀರ್ತನೆಗಳನ್ನು ಹಾಡಿದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ದಾಸಶ್ರೇಷ್ಠ ಶ್ರೀ ಕನಕದಾಸರ ಜಯಂತಿ ಅಂಗವಾಗಿ ನಗರದ ಪ್ರವಾಸಿಮಂದಿರದಲ್ಲಿ ವಿವಿಧ ಕಲಾ ತಂಡಗಳೊಡನೆ ಹೊರಟ ಕನಕದಾಸರ ಭಾವಚಿತ್ರದ ಮೆರವಣಿಗೆಗೆ ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಹನೂರಲ್ಲಿ ಕನಕದಾಸರ ಜಯಂತಿ ಆಚರಣೆ



ಹನೂರು, ನ.11– ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ದಾಸ ಶ್ರೇಷ್ಠ ಕನಕದಾಸರ ಜಯಂತಿ ಆಚರಿಸಲಾಯಿತು.

ಪಟ್ಟಣದ ಆರ್.ಎಂ.ಸಿ. ಆವರಣದಲ್ಲಿ ಶಾಸಕ ಆರ್.ನರೇಂದ್ರ ಅವರು ಬೆಳ್ಳಿ ಅಶ್ವಾರೂಢ ವಾಹನದಲ್ಲಿ ವಿರಾಜಮಾನವರಾಗಿದ್ದ ಕನಕದಾಸರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪ ನಮನಗಳನ್ನು ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ನಿರಂತರ ಮಳೆ ನಡುವೆ ಕಲಾತಂಡಗಳು, ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಸಾಗಿತು. ಈ ವೇಳೆ ಶಾಸಕ ಆರ್.ನರೇಂದ್ರ ತಹಸೀಲ್ದಾರ್ ಆನಂದಯ್ಯ ಅವರು ಸೇರಿದಂತೆ ವಿವಿಧ ಮುಖಂಡರುಗಳು ಮೆರವಣಿಗೆಯಲ್ಲಿ ಸಾಗಿದರು. ಮಳೆಯಲ್ಲೂ ಕೂಡ ತಾಳ ಮೇಳಗಳ ಸದ್ದಿಗೆ ಕುಣಿದು ಕುಪ್ಪಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಆರ್. ನರೇಂದ್ರ ಅವರು ಮಾತನಾಡಿ, ಸಮಾಜದಲ್ಲಿನ ಶ್ರೇಣಿಕೃತ ಜಾತಿ ವ್ಯವಸ್ಥೆಯನ್ನು ಕಟುವಾಗಿ ತಮ್ಮ ಕೀರ್ತನೆಗಳ ಮೂಲಕ ಖಂಡಿಸಿದ ದಾಸ ಶ್ರೇಷ್ಠ ಕನಕದಾಸರ ತತ್ವ ಆದರ್ಶಗಳು ಪ್ರಸ್ತುತ ಸಮಾಜಕ್ಕೆ ಅನುಕರಣೀಯ. 'ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನ್ನು ಬಲ್ಲಿರಾ' ಎನ್ನುವ ಮೂಲಕ 15–16ನೇ ಶತಮಾನದಲ್ಲೇ ಸಮಾಜದ ಅಂಕುಡೊಂಕುಗಳನ್ನು ತಮ್ಮ ಕೀರ್ತನೆಗಳ ಮೂಲಕ ಹೊರ ಹಾಕಿದ್ದರು. ಕನಕದಾಸರು ಒಂದು ಸಮುದಾಯಕ್ಕೆ ಸೀಮಿತವಾದ ವ್ಯಕ್ತಿಯಲ್ಲ ಎಂದು ತಿಳಿಸಿದರು.

ತಹಸೀಲ್ದಾರ್ ಆನಂದಯ್ಯ, ತಾ. ಪಂ. ಕಾರ್ಯನಿರ್ವಾಹಕ ಅಧಿಕಾರಿ ಶ್ರೀನಿವಾಸ್, ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ವಿವಿಧ ಗ್ರಾಮಗಳ ಕುರುಬ ಸಮುದಾಯದ ಯಜಮಾನರು, ಮುಖಂಡರು, ಜನಪ್ರತಿನಿಧಿಗಳು, ಜಿಪಂ ಮಾಜಿ ಉಪಾಧ್ಯಕ್ಷ ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಮುರುಡೇಶ್ವರ ಸ್ವಾಮಿ, ಅಜ್ಜೀಪುರ ನಾಗರಾಜು, ಮಂಗಲ ಪುಟ್ಟರಾಜು, ಕೊಪ್ಪಳಿ ಮಹಾದೇವ ನಾಯಕ, ಟೈಲರ್ ಅಧ್ಯಕ್ಷ ಚಂದ್ರು ಹಾಗೂ ಸಾರ್ವಜನಿಕರು ಇದ್ದರು.

ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಕನಕದಾಸರ ಜಯಂತಿ



ಬೇಗೂರು, ನ.11– ಗ್ರಾಮದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ ಕನಕದಾಸ ಜಯಂತಿ ಕಾರ್ಯಕ್ರಮ ನಡೆಯಿತು.

ಪ್ರಾಂಶುಪಾಲೆ ಕವಿತಾ ಎಸ್ ಮಾತನಾಡಿ, ಕನಕದಾಸರು ಕರ್ನಾಟಕ ಸಂಗೀತದ ಪ್ರಸಿದ್ಧ ಸಂಯೋಜಕ ಕವಿ ಮತ್ತು ತತ್ವಜ್ಞಾನಿಯಾಗಿದ್ದರು. ಸಂಗೀತ ಸಂಯೋಜನೆಗಳಿಗೆ ಪ್ರಸಿದ್ಧರಾಗಿದ್ದರು. ಅವರು ತಮ್ಮ ರಚನೆಗಳಿಗೆ ಸರಳವಾದ ಕನ್ನಡ ಭಾಷೆಯನ್ನು ಬಳಸಿದರು. ಕನಕದಾಸರು ಕೀರ್ತನೆಯ ಮೂಲಕ ಸಾಮಾಜಿಕ ಸಮಾನತೆ ಮತ್ತು ನ್ಯಾಯವನ್ನು ಪ್ರತಿಪಾದಿಸಿದ್ದರು. ಜಾತಿ ವ್ಯವಸ್ಥೆಯ ವಿರುದ್ಧ ಕುಲಕುಲವೆಂದು ಹೊಡೆದಾಡದಿರಿ ಎಂದು ಸಂದೇಶ ಸಾರಿದ ಕನಕದಾಸರು ಚಿಕ್ಕಂದಿನಿಂದಲೇ ಶ್ರೀ ಕೃಷ್ಣನ ಪರಮ ಭಕ್ತರಾಗಿದ್ದರು ಎಂದು ಸವಿವರವಾಗಿ ತಿಳಿಸಿದರು

ನಿಲಯಪಾಲಕ ಮಂಜುನಾಥ್ ಹೆಚ್.ಎನ್, ಶಿಕ್ಷಕರಾದ ನಳಿನಿ, ಮಹೇಂದ್ರ, ಸೌಮ್ಯ, ರಾಜೇಶ, ಮಧು, ಸುಮಲತಾ, ರಾಜೇಂದ್ರ, ಹಾಗೂ ರವಿರಾಜ್, ಶಿವಕುಮಾರ್, ಮಹೇಶ್, ಸೇರಿದಂತೆ ಮತ್ತಿತರರು ಹಾಜರಿದ್ದರು.

ವಿದ್ಯುತ್ ಕಡಿತ, ಊಟದ ವ್ಯವಸ್ಥೆ ಇಲ್ಲದ್ದಕ್ಕೆ ಪ್ರತಿಭಟನೆ

ಚಾಮರಾಜನಗರ, ನ.11– ಜಿಲ್ಲಾಡಳಿತದಿಂದ ನಗರದ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆಯೋಜಿಸಿದ್ದ ಕನಕ ಜಯಂತಿ ಕಾರ್ಯಕ್ರಮದಲ್ಲಿ ಪದೇ ಪದೆ ವಿದ್ಯುತ್ ಕಡಿತಗೊಳ್ಳುತ್ತಿದ್ದನ್ನು ಖಂಡಿಸಿ ಹಾಗೂ ಸಮರ್ಪಕವಾಗಿ ಊಟದ ವ್ಯವಸ್ಥೆ ಕಲ್ಪಿಸಿಲ್ಲ ಎಂದು ಆರೋಪಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದವರು ಪ್ರತಿಭಟನೆ ನಡೆಸಿದರು.

ಗಣ್ಯರು ಮಾತನಾಡುವ ಸಂದರ್ಭದಲ್ಲಿ ಪದೇ ಪದೆ ವಿದ್ಯುತ್ ಕಡಿತಗೊಳ್ಳುತ್ತಿತ್ತು. ಕೆ.ಆರ್.ನಗರದ ಕಾಗಿನೆಲೆ ಕನಕ ಗುರುಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅವರು ಮಾತನಾಡುವ ಸಂದರ್ಭದಲ್ಲಿ ವಿದ್ಯುತ್ ಕಡಿತಗೊಳ್ಳುವುದು ಹೆಚ್ಚಾಯಿತು. ಇದರಿಂದ ಕೆರಳಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಮುದಾಯದವರು ಸರ್ಕಾರ ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿದರು. ನಂತರ ಊಟ ಎಲ್ಲರಿಗೂ ಸಿಗಲಿಲ್ಲ. ಇದರಿಂದ ಮತ್ತಷ್ಟು ಕೆರಳಿದ ಜನರು, ಜಿಲ್ಲಾಡಳಿತ ಭವನದ ಮುಖ್ಯದ್ವಾರಕ್ಕೆ ಆಗಮಿಸಿ ಕಾರ್ಯಕ್ರಮದ ಆಯೋಜಕರ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಟಿ.ಎಸ್.ರಮೇಶ್ ಅವರು ಸಂಬಂಧಿಸಿದ ಅಧಿಕಾರಿಯ ವಿರುದ್ಧ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಗುಂಡ್ಲುಪೇಟೆ ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಸದ್ಯದಲ್ಲೇ ಚಾಲನೆ: ಶಾಸಕ ನಿರಂಜನಕುಮಾರ್



ಗುಂಡ್ಲುಪೇಟೆ, ನ.11– ಹಂಗಳ ಹೋಬಳಿಯ ಕೆರೆಗಳೂ ಸೇರಿದಂತೆ ತಾಲೂಕಿನ 110 ಕೆರೆಗಳಿಗೆ ನದಿ ಮೂಲದಿಂದ ನೀರು ತುಂಬಿಸುವ ಯೋಜನೆಗೆ ಸದ್ಯದಲ್ಲಿಯೇ ಚಾಲನೆ ನೀಡಲಾಗುವುದು ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ತಾಲೂಕಿನ ಕಲಿಗೌಡನಹಳ್ಳಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು. ಕಳೆದ 25 ವರ್ಷಗಳಿಂದ ಆಡಳಿತ ನಡೆಸಿದ್ದವರು ಹೆಚ್ಚು ಮತ ನೀಡಿದ ಗ್ರಾಮಗಳಿಗೆ ಮಾತ್ರ ಅನುದಾನ ನೀಡುವ ಪರಂಪರೆ ಬೆಳೆಸಿಕೊಂಡಿದ್ದರು. ಕೆರೆಗಳಿಗೆ ನೀರು ತುಂಬಿಸಲು ಆಸಕ್ತಿ ವಹಿಸದ ಪರಿಣಾಮ ತಾಲೂಕಿನ ರೈತರು ಅಂತರ್ಜಲ ಸಮಸ್ಯೆಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದರು. ನಾನು ಶಾಸಕನಾಗಿ ಆಯ್ಕೆಯಾದ ನಂತರ ಪ್ರತಿ ವರ್ಷವೂ ಕೆರೆಗಳಿಗೆ ನೀರು ತುಂಬಿಸುತ್ತಿದ್ದರೂ ವಿರೋಧ ಪಕ್ಷಗಳವರು ನೀರು ತುಂಬಿಸುವ ವಿಚಾರದಲ್ಲಿಯೂ ರಾಜಕೀಯ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಬಂಡೀಪುರ ಹುಲಿ ಯೋಜನೆಯ ಕಾಡಂಚಿನ ಕಲಿಗೌಡನಹಳ್ಳಿ ಗ್ರಾಮದಲ್ಲಿ ಹಿಂದುಳಿದ ವರ್ಗಗಳ ಜನರೇ ವಾಸಿಸುತ್ತಿದ್ದರೂ ಇವರಿಗೆ 25 ವರ್ಷಗಳಿಂದಲೂ ರಸ್ತೆ, ಕುಡಿಯುವ ನೀರು, ಚರಂಡಿ ಸೇರಿದಂತೆ ಕನಿಷ್ಠ ಮೂಲ ಸವಲತ್ತುಗಳನ್ನು ನೀಡಿರಲಿಲ್ಲ. ಆದರೆ ತಾವು ಆಯ್ಕೆಯಾದ ನಂತರ ಉತ್ತಮ ರಸ್ತೆ ಹಾಗೂ ಸಾರಿಗೆ ಸಂಪರ್ಕ ಕಲ್ಪಿಸಲಾಗಿದೆ. ಇಡೀ ಗ್ರಾಮವೊಂದಕ್ಕೆ ಶಾಸಕರ ಅನುದಾನದಲ್ಲಿ 50 ಲಕ್ಷ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಎಲ್ಲಾ ವರ್ಗದ ಜನರ ಬೀದಿಗಳಿಗೂ ಚರಂಡಿ, ಸಿಸಿ ರಸ್ತೆನಿರ್ಮಿಸಲಾಗಿದೆ ತಾಲೂಕಿನ ಹಲವಾರು ಗ್ರಾಮಗಳಲ್ಲಿ ಎಲ್ಲಾ ವರ್ಗಗಳ ಜನರ ಬೇಡಿಕೆಗನುಸಾರ ಅಂಬೇಡ್ಕರ್ ಭವನ, ಬಾಬು ಜಗಜೀವನರಾಂ ಭವನ, ವಿಶ್ವಕರ್ಮ ಭವನ, ಭಗೀರಥ ಭವನ, ಬಸವ ಭವನಗಳನ್ನು ನಿರ್ಮಿಸಲಾಗಿದೆ ಎಂದರು. ಹಂಗಳ ಗ್ರಾಪಂ ಅಧ್ಯಕ್ಷ ಮಲ್ಲಪ್ಪ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೊರೆಯಾಲ ಮಹೇಶ್, ಮುಖಂಡರಾದ ಹೆಚ್.ಸಿ.ಸಿದ್ದರಾಜಪ್ಪ, ಎಂ.ಸಿ.ನಾಗರಾಜು, ಕಣ್ಣೇಗಾಲ ಸ್ವಾಮಿ, ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಇದ್ದರು.

ಜಿಲ್ಲೆಯಾದ್ಯಂತ ತುಂತುರು ಮಳೆ

ಚಾಮರಾಜನಗರ, ನ.11– ಜಿಲ್ಲೆಯಾದ್ಯಂತ ಶುಕ್ರವಾರ ದಿನವಿಡೀ ತುಂತುರು ಮಳೆ ಸುರಿಯಿತು. ಇದರಿಂದ ಜನಜೀವನ ಅಸ್ತವ್ಯಸ್ತಗೊಂಡು ಪರದಾಡುವಂತಾಯಿತು.

ಬೆಳಗ್ಗೆ 10.30ಕ್ಕೆ ಆರಂಭವಾದ ಜಿಟಿ ಜಿಟಿ ಮಳೆ ಸಂಜೆವರೆಗೂ ಸುರಿಯಿತು. ಜನರು ಛತ್ರಿ, ಜರ್ಕಿನ್, ಸ್ವೆಟರ್ ಧರಿಸಿ ತಮ್ಮ ಕರ್ತವ್ಯದಲ್ಲಿ ನಿರತರಾಗಿದ್ದು ಕಂಡು ಬಂತು.

ದಿನವಿಡೀ ಮಳೆ ಸುರಿದ ಪರಿಣಾಮ ಪ್ರಮುಖ ರಸ್ತೆಗಳಲ್ಲಿ ಜನಸಂದಣಿ ಕಡಿಮೆ ಮತ್ತು ಕನಕ ಜಯಂತಿ ಪ್ರಯುಕ್ತ ಶಾಲಾ–ಕಾಲೇಜುಗಳಿಗೆ, ಬ್ಯಾಂಕ್‌ಗಳಿಗೆ ಹಾಗೂ ಸರ್ಕಾರಿ ಕಚೇರಿಗಳಿಗೆ ರಜೆ ಇದ್ದ ಕಾರಣ ಜನರ ಓಡಾಟ ಕಡಿಮೆಯಿತ್ತು. ಮಳೆ ನಡುವೆಯೂ ನಗರದಲ್ಲಿ ಕನಕ ಜಯಂತಿ ಮೆರವಣಿಗೆ ನಡೆದಿದ್ದು ವಿಶೇಷವಾಗಿತ್ತು.

ಮೈಸೂರು ಮಿತ್ರ ಶನಿವಾರ 12 ನವೆಂಬರ್ 2022

ವಿವಿಧೆಡೆ ಸಂತಕವಿ, ದಾಸಶ್ರೇಷ್ಠ ಕನಕದಾಸರ ಸ್ಮರಣೆ

ಕನಕದಾಸರ ಕೀರ್ತನೆಗಳ ಆಶಯ ಸಂವಿಧಾನದ ಮೂಲಕ ಸಾಕಾರ



ತಿ.ನರಸೀಪುರ ನ.11– ಸಂತಶ್ರೇಷ್ಠ, ದಾರ್ಶನಿಕ ಕನಕದಾಸರ ಸಾಮಾಜಿಕ ಅಸಮಾನತೆಯ ವಿರುದ್ಧದ ಕೀರ್ತನೆಗಳ ಆಶಯ ಇಂದು ಸಂವಿಧಾನದ ಮೂಲಕ ಸಾಕಾರಗೊಳ್ಳುತ್ತಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ಶುಕ್ರವಾರ ನಡೆದ ಶ್ರೀಭಕ್ತ ಕನಕದಾಸರ ಜಯಂತೋತ್ಸವ ಉದ್ಘಾಟಿಸಿ, ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಅವರು, ನಾವೆಲ್ಲರೂ ಪ್ರಸ್ತಾಪಿಸುತ್ತಿರುವ ಸಮಾನತೆ, ಒಗ್ಗಟ್ಟಿನ ಮಂತ್ರವನ್ನು ಅಂದೇ ಜಪಿಸಿದ್ದ ಕನಕದಾಸರು ಕನ್ನಡ ನಾಡಿನ ಆಸ್ತಿಯಾಗಿದ್ದಾರೆ. ಅಸಮಾನತೆ ವಿರುದ್ಧ ಜನಜಾಗೃತಿ ಮೂಡಿಸಿದ ಕೀರ್ತನೆಗಳ ಆಶಯವನ್ನು ಅಂಬೇಡ್ಕರ್ ಸಂವಿಧಾನದಲ್ಲಿ ಅಳವಡಿಸಿದ್ದಾರೆ ಎಂದರು.

ಸರ್ಕಾರದ ಆದೇಶದಂತೆ ತಾಲೂಕು ಆಡಳಿತದಿಂದ ಕನಕದಾಸರ ಜಯಂತೋತ್ಸವ ಆಚರಿಸಲಾಗುತ್ತಿದೆ. ಗಣ್ಯರನ್ನು ಆಹ್ವಾನಿಸಿ, ಅದ್ಧೂರಿಯಾಗಿ ಜಯಂತಿಯನ್ನು ಮತ್ತೊಂದು ದಿನ ಆಚರಿಸಲು ಸಮುದಾಯದವರು ಸಿದ್ಧತೆ ಮಾಡಿಕೊಂಡರೆ ನಾನು ಸೇರಿದಂತೆ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು. ಅದ್ಧೂರಿ ಜಯಂತೋತ್ಸವದ ದಿನವನ್ನು ಶೀಘ್ರ ನಿಗದಿಗೊಳಿಸಬೇಕು ಎಂದರು.

ಕನಕದಾಸರ ಜೀವನ ಚರಿತ್ರೆ ರೋಚಕ

ಮುಖ್ಯ ಭಾಷಣಕಾರರ, ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕುಪ್ಯ ಪುಟ್ಟಸ್ವಾಮಿ ಮಾತನಾಡಿ, ಕನಕದಾಸರ ಜೀವನ ಚರಿತ್ರೆ ಬಹಳ ರೋಚಕವಾಗಿದೆ. ಹೆತ್ತವರ ಪ್ರಾರ್ಥನೆಗೆ ಶ್ರೀವಿಷ್ಣುವಿನ ಆಶೀರ್ವಾದದಿಂದ ಜನಿಸಿದ ಕನಕದಾಸರು ಬಾಲ್ಯದಿಂದಲೂ ಶಕ್ತಿವಂತರು. ಜಯನಗರ ಅರಸರ ಗೌರವಕ್ಕೂ ಪಾತ್ರರಾಗಿ ಪಾಳೇಗಾರರಾಗಿದ್ದರು. ಉಳುವ ಭೂಮಿಯಲ್ಲಿ ಚಿನ್ನದ ಕೊಪ್ಪರಿಕೆ ಪಡೆದು, ದಾಸರಾಗಿ ಶ್ರೀಕೃಷ್ಣ ಪರಮಾತ್ಮನನ್ನೇ ತನ್ನತ್ತ ಸೆಳೆದುಕೊಂಡರು. ರಾಮಧಾನ ಚರಿತೆಯ ಮೂಲಕ ಬಡವರ ರಾಗಿ ಮಹತ್ವವನ್ನು ಜಗತ್ತಿಗೆ ತಿಳಿಸಿದರು. ಕೀರ್ತನೆಗಳ ಮೂಲಕ ಸಮಾಜದ ಅಸಮಾನತೆಯ ವಿರುದ್ಧ ಧ್ವನಿ ಎತ್ತಿ ಸಂತ ಶ್ರೇಷ್ಠರಾದರು ಎಂದರು.

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಮಾತನಾಡಿದರು. ತಹಸೀಲ್ದಾರ್ ಸಿ.ಜಿ.ಗೀತಾ, ತಾಪಂ ಇಓ ಸಿ.ಕೃಷ್ಣ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ಪುರಸಭೆ ಉಪಾಧ್ಯಕ್ಷೆ ನಾಗರತ್ನ, ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ಎಸ್.ಸೋಮಣ್ಣ, ಬಾದಾಮಿ ಮಂಜು, ಸಿದ್ದು, ಕೆ.ನಂಜುಂಡಸ್ವಾಮಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಜಿಪಂ ಎಇಇ ಪಿ.ಲಕ್ಷ್ಮಣ್ ರಾವ್, ಶಿರಸ್ತೇದಾರ್ ಪ್ರಭು ರಾಜ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಉಪನ್ಯಾಸಕ ಕುಮಾರಸ್ವಾಮಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ, ನಾಯಕರ ಸಂಘದ ಅಧ್ಯಕ್ಷ ಚಿಕ್ಕಯ್ಯ, ಗ್ರಾಪಂ ಸದಸ್ಯರಾದ ಕುಪ್ಯ ಭಾಗ್ಯಮ್ಮ, ಕೆ.ಎಂ.ಕುಮಾರ್, ಕುರುಬರ ಸಂಘದ ಉಪಾಧ್ಯಕ್ಷ ಎಂ.ವೆಂಕಟೇಶ್, ಸಹ ಕಾರ್ಯದರ್ಶಿ ಎಸ್.ಎಲ್.ಲಿಂಗಣ್ಣ, ಖಜಾಂಚಿ ಮಲ್ಲೇಶ್, ನಿರ್ದೇಶಕರಾದ ಎಂ. ಬಿ.ಚಂದ್ರಶೇಖರ್, ಹೆಚ್.ಸಿ.ಅರುಣ್ ಕುಮಾರ್, ಪಿ.ಮಹೇಶ್, ಲೋಕೇಶ್, ಕೆ.ಅಶ್ವಿನ್ ಕುಮಾರ್, ಮುಖಂಡರಾದ ಎಂ.ಆರ್.ಶಿವಮೂರ್ತಿ, ಹಾಳೇಗೌಡ, ಶಿವಕುಮಾರ, ಪುಳ್ಳಾರಿ ಮಾದೇಶ್, ಎಸ್.ಮಾದಯ್ಯ, ಚೌಹಳ್ಳಿ ಮಲ್ಲೇಶ್, ವಿ.ಪಿ.ಹುಂಡಿ ಬಸವರಾಜು, ಸಂತೃಪ್ತಿ ಕುಮಾರ್ ಇನ್ನಿತರರಿದ್ದರು.

ಪ್ರತಿಯೊಬ್ಬರೂ ಕನಕದಾಸರ ತತ್ವಾದರ್ಶ ಪಾಲಿಸಿ: ಹರ್ಷವರ್ಧನ್



ನಂಜನಗೂಡು, ನ.11– ಮಹನೀಯರ ಜಯಂತಿಗಳು ಕೇವಲ ಒಂದು ಜಾತಿಗೆ ಸೀಮಿತಗೊಳ್ಳಬಾರದು. ಎಲ್ಲಾ ಸಮುದಾಯಗಳೂ ಭಾಗವಹಿಸುವ ಮೂಲಕ ಸಾಮಾಜಿಕ ಸಂದೇಶ ರವಾನಿಸಬೇಕು ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಮತ್ತು ತಾಲೂಕು ಆಡಳಿತದಿಂದ ಆಯೋಜಿಸಿದ್ದ ಭಕ್ತ ಕನಕದಾಸರ 535ನೇ ಜಯಂತಿ ಹಾಗೂ ಒನಕೆ ಓಬವ್ವರ ಜಯಂತೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಭಕ್ತ ಕನಕದಾಸ, ಕಿತ್ತೂರು ರಾಣಿ ಚೆನ್ನಮ್ಮ, ಮದಕರಿ ನಾಯಕ, ಒನಕೆ ಓಬವ್ವ ವಾಲ್ಮೀಕಿ, ಅಂಬೇಡ್ಕರ್ ಅವರಂತಹ ಮಹನೀಯರು ದೇಶದಲ್ಲಿ ಜನಿಸಿರುವುದು ಈ ಮಣ್ಣಿನ ಪುಣ್ಯ. ಅವರ ಜಯಂತೋತ್ಸವಗಳು ಕೇವಲ ಒಂದು ಜಾತಿಗೆ ಸೀಮಿತಗೊಳ್ಳುತ್ತಿರುವುದು ವಿಷಾದನೀಯ. ಎಲ್ಲಾ ಮಹನೀಯರ ತತ್ವಾದರ್ಶ ಅರಿತು, ಅನುಸರಿಸುವಂತಾಗಬೇಕು. ಆಗ ಮಾತ್ರ ಸಾಮಾಜಿಕ ಬದಲಾವಣೆ ಸಾಧ್ಯ. ಎಲ್ಲಾ ಸಮುದಾಯಗಳು ಎಲ್ಲಾ ಮಹನೀಯರ ಜಯಂತಿಯಲ್ಲಿ ಭಾಗವಹಿಸಬೇಕು. ಆ ಮೂಲಕ ಎಲ್ಲರೂ ಒಂದೇ ಎಂಬ ಸಂದೇಶ ರವಾನಿಸಬೇಕು. ಈ ಉದ್ದೇಶದಿಂದಾಗಿ ಕ್ಷೇತ್ರದಲ್ಲಿ ಎಲ್ಲಾ ಸಮುದಾಯಗಳಿಗೂ ಸಾಮಾನತೆ ದೊರಕಿಸಿಕೊಡಲು ಅಂಬೇಡ್ಕರ್ ಪ್ರತಿಮೆ ಎದುರು ಎಲ್ಲಾ ಜನಾಂಗದ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಭಕ್ತ ಕನಕದಾಸರೂ ಸಹ ಮೇಲು–ಕೀಳು ಎಂಬ ಭಾವನೆಯನ್ನು ಹೋಗಲಾಡಿಸಲು ತಮ್ಮ ಕೀರ್ತನೆಗಳ ಮೂಲಕ ಸಾಮಾಜಿಕ ಕ್ರಾಂತಿಗೆ ಮುಂದಾದವರು. ಅವರ ತತ್ವ ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದು ಕಿವಿಮಾತು ಹೇಳಿದರು.

ಮುಖ್ಯ ಭಾಷಣಕಾರ ಬಸವರಾಜು ಮಾತನಾಡಿ, ಸಮಾಜದಲ್ಲಿದ್ದ ಜಾತಿಯತೆ, ಅಸಮಾನತೆ ತೊಡೆದು ಹಾಕಲು ಕೀರ್ತನೆಗಳ ಮೂಲಕ ಜಾಗೃತಿ ಮೂಡಿಸಿದವರು ಭಕ್ತ ಕನಕದಾಸರು. ಅಲ್ಲದೆ ಅವರ ಕೀರ್ತನೆಗಳು ಕನ್ನಡ ಸಾಹಿತ್ಯ ಶ್ರೀಮಂತಗೊಳಿಸಿವೆ ಎಂದರು.

ಇದೇ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕುರುಬರ ಸಂಘದ ತಾಲೂಕು ಅಧ್ಯಕ್ಷ ಕೆಂಪಣ್ಣ, ಮುಖಂಡರಾದ ಕುರಿಹುಂಡಿರಾಜು, ಹುಚ್ಚಯ್ಯ, ಟಿ.ಎಲ್.ಮೋಹನ್, ನಾಗೇಂದ್ರ ನೀಲಿಸಿದ್ದು, ಶ್ರೀಕಂಠ, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಇಮ್ಮಾವು ರಘು, ಸತೀಶ್‌ರಾವ್, ತಹಶೀಲ್ದಾರ್‌ಎಂ.ಶಿವಮೂರ್ತಿ, ತಾಪಂ ಇಓ ಹೆಚ್.ಜಿ.ಶ್ರೀನಿವಾಸ್, ನಗರಸಭಾ ಆಯುಕ್ತ ರಾಜಣ್ಣ, ಸಿಪಿಐ ಲಕ್ಷ್ಮಿಕಾಂತ ತಳವಾರ್ ಸೇರಿದಂತೆ ಇಲಾಖೆಯ ಅಧಿಕಾರಿಗಳು ಇದ್ದರು.

ಶ್ರೇಷ್ಠ ಕೀರ್ತನೆ ರಚಿಸಿದ ಮಹಾನ್ ವ್ಯಕ್ತಿ ಕನಕದಾಸರು



ಸರಗೂರು, ನ.11– ಕನಕದಾಸರು ಮನುಕುಲಕ್ಕೆ ಕೊಟ್ಟ ಜ್ಞಾನ ಅಮೋಘ. ಅವರ ಸಾಹಿತ್ಯ ಮನುಕುಲದ ಆಸ್ತಿ. ದಾಸವರೇಣ್ಯ ಕನಕದಾಸರ ಜಯಂತಿಯನ್ನು ಪ್ರತಿಯೊಬ್ಬರೂ ಆಚರಿಸುವ ಮೂಲಕ ಅವರ ಆದರ್ಶ ಪಾಲಿಸೋಣ ಎಂದು ತಹಸೀಲ್ದಾರ್ ಚಲುವರಾಜು ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ ಕನಕದಾಸ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಶ್ರೇಷ್ಠ ಕೀರ್ತನೆಗಳನ್ನು ರಚಿಸಿದ ಮಹಾನ್ ವ್ಯಕ್ತಿ ಕನಕದಾಸರು. ಅಂತಹ ದಾಸಶ್ರೇಷ್ಠರ ಜಯಂತಿ ಆಚರಿಸುವ ಮೂಲಕ ಅವರ ಆಲೋಚನೆ ಮತ್ತು ಆದರ್ಶಗಳನ್ನು ಸಾರ್ವಜನಿಕರಿಗೆ ತಲುಪುವಂತೆ ಮಾಡಬೇಕು ಎಂದರು. ಕುರುಬ ಸಮಾಜದ ಮುಖಂಡ ಚನ್ನೇಗೌಡ ಮಾತನಾಡಿದರು. ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಶಿಕ್ಷಕ ಸಿದ್ಧಲಿಂಗಸ್ವಾಮಿ ಕನಕದಾಸರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಕುರುಬ ಸಮಾಜದ ಅಧ್ಯಕ್ಷ ಆನಂದ್, ಮುಖಂಡರಾದ ದೇವರಾಜು, ಶಿವಮಲ್ಲು, ಚಿನ್ನಸ್ವಾಮಿ, ಗಿರೀಶ್, ಮಹದೇವಗೌಡ, ಕೆ.ಸಿ.ಮಹದೇವ್, ಬೀರೇಗೌಡ, ರಾಜೇಗೌಡ, ಮಹದೇವ್, ಮರಿಮಲ್ಲೇಗೌಡ, ಸಂತೋಷ್, ಗ್ರೇಡ್–2 ತಹಸೀಲ್ದಾರ್ ಪರಶಿವಮೂರ್ತಿ, ಶಿಕ್ಷಣ ಇಲಾಖಾಧಿಕಾರಿ ಜಿ.ನಾಗೇಶ್, ಎಸ್‌ಐ ಶ್ರಾವಣದಾಸ್ ರೆಡ್ಡಿ, ಪಪಂ ಮುಖ್ಯಾಧಿಕಾರಿ ಸತೀಶ್, ಅಧ್ಯಕ್ಷೆ ರಾಧಿಕಾ, ಸದಸ್ಯರಾದ ಶ್ರೀನಿವಾಸ್, ಚೆಲುವಕೃಷ್ಣ, ನೂರಳಸ್ವಾಮಿ, ರಮೇಶ್, ರಂಗಸ್ವಾಮಿ, ಎಪಿಎಂಸಿ ಅವಸಂತ್ ಕುಮಾರ್ ಇನ್ನಿತರರಿದ್ದರು.

ನಾಳೆ ಚುಂಚನಕಟ್ಟೆ ಕಾವೇರಿ ಜಲಪಾತೋತ್ಸವ



ಚುಂಚನಕಟ್ಟೆ, ನ.11– ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಕಾವೇರಿ ಜಲಪಾತೋತ್ಸವ ನ.13 ರಂದು ನಡೆಯಲಿದೆ.

ಅಂದು ಸಂಜೆ ಇಲ್ಲಿನ ಶ್ರೀರಾಮ ದೇವಾಲಯದ ಆವರಣದಲ್ಲಿ ನಡೆಯುವ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದು, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಉಪಸ್ಥಿತಿಯಲ್ಲಿ ಶಾಸಕ ಸಾ.ರಾ.ಮಹೇಶ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಸುಮಲತಾ, ಪ್ರತಾಪ್ ಸಿಂಹ ಹಾಗೂ ವಿ. ಶ್ರೀನಿವಾಸ ಪ್ರಸಾದ್ ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು ಮತ್ತು ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಪಾಲ್ಗೊಳ್ಳುವರು. ಕುಪ್ಪೆ ಗ್ರಾಪಂ ಅಧ್ಯಕ್ಷೆ ಗೌರಮ್ಮ, ಉಪಾಧ್ಯಕ್ಷೆ ಸವಿತಾ, ಜಿಲ್ಲೆಯ ಅಧಿಕಾರಿ ವರ್ಗದವರು ಉಪಸ್ಥಿತರಿರುವರು.

ಜಲಪಾತೋತ್ಸವದಲ್ಲಿ ನಟ ವಸಿಷ್ಠ ಸಿಂಹ, ನಟಿ ಅದಿತಿ ಪ್ರಭುದೇವ್ ಹಾಗೂ ರೆಮೋ ಚಿತ್ರ ತಂಡದವರು ಭಾಗಿಯಾಗಲಿದ್ದು, ವೇದಿಕೆಯಲ್ಲಿ ಖ್ಯಾತ ಗಾಯಕ, ಗಾಯಕಿಯರು ತಮ್ಮ ಸಂಗೀತದ ಮೂಲಕ ರಸದೌತಣ ಉಣಬಡಿಸಲಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ರದ್ದಾಗಿದ್ದ ಜಲಪಾತೋತ್ಸವ ಈ ಬಾರಿ ನಡೆಯುತ್ತಿದ್ದು, ಜನರಲ್ಲಿ ಭಾರೀ ಕುತೂಹಲ ಮೂಡಿಸಿದೆ. ಜಲಪಾತೋತ್ಸವ ಹಿನ್ನೆಲೆಯಲ್ಲಿ ಚುಂಚನಕಟ್ಟೆ ಮುಖ್ಯ ವೃತ್ತ, ದೇವಾಲಯದ ರಸ್ತೆ ಮತ್ತು ದೇವಾಲಯದ ಸುತ್ತಮುತ್ತ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ವೇದಿಕೆ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಜೂಜಾಡುವ ಬದಲು ಬಡವರ ಸೇವೆಗೆ ಸಹಾಯಹಸ್ತ ನೀಡಿ

ಸುರಕ್ಷಾ ಸ್ಪೋರ್ಟ್ಸ್ ಮತ್ತು ರಿಕ್ರಿಯೇಷನ್ ಕ್ಲಬ್ ಉದ್ಘಾಟಿಸಿ ಸಾ.ರಾ.ಮಹೇಶ್ ಸಲಹೆ



ಕೆ.ಆರ್.ನಗರ, ನ.11– ಜೂಜಾಡುವ ಬದಲು ಮನರಂಜನಾ ಕ್ರೀಡೆಗಳ ಜೊತೆಗೆ, ಆರೋಗ್ಯ ಶಿಬಿರ ನಡೆಸುವ ಮೂಲಕ ಬಡಜನರ ಸೇವೆಗೆ ಸಹಾಯಹಸ್ತ ನೀಡುವಂತೆ ಶಾಸಕ ಸಾ.ರಾ.ಮಹೇಶ್ ಸಲಹೆ ನೀಡಿದರು.

ಪಟ್ಟಣದ ಬಸವೇಶ್ವರ ಬ್ಲಾಕ್ 7ನೇ ರಸ್ತೆಯಲ್ಲಿ ನೂತನವಾಗಿ ಆರಂಭಗೊಂಡಿರುವ ಸುರಕ್ಷಾ ಸ್ಪೋರ್ಟ್ಸ್ ಮತ್ತು ರಿಕ್ರಿಯೇಷನ್ ಕ್ಲಬ್ ಉದ್ಘಾಟಿಸಿ ಮಾತನಾಡಿದ ಅವರು, ನಿಮ್ಮ ಸ್ಪೋರ್ಟ್ಸ್ ಕ್ಲಬ್ಬಿಗೆ ಸಿಎ ನಿವೇಶನ ನೀಡುತ್ತೇನೆ ಎಂದ ಅವರು, ರಾಜಕೀಯ ಹಾಗೂ ಜಾತಿ ವ್ಯವಸ್ಥೆಯಿಂದ ದೂರ ಇದ್ದರೆ ಮಾತ್ರ ನಿಮ್ಮ ಸ್ಪೋರ್ಟ್ಸ್ ಕ್ಲಬ್ ಬೆಳೆಯುತ್ತದೆ ಎಂದರು.

ನಾನು ಕೂಡ ಮೈಸೂರು ಕ್ಲಬ್ ಸದಸ್ಯನಾಗಿದ್ದೇನೆ. ಆದರೆ ಎಂದೂ ಸಹ ಅಲ್ಲಿ ಜೂಜಾಟವಾಡಿಲ್ಲ. ಆದರೆ ಆರೋಗ್ಯ ಶಿಬಿರ ಮತ್ತು ಮನರಂಜನೆ ಸೇರಿದಂತೆ ಕೆಲವು ಸ್ನೇಹಿತರ ಜೊತೆಗೂಡಿ ಹಲವು ವಿಷಯಗಳ ಬಗ್ಗೆ ಚರ್ಚೆ ಮಾಡಿ ಕಾಲ ಕಳೆದಿದ್ದೇವೆ ಎಂದು ತಮ್ಮ ಹಳೆಯ ನೆನಪುಗಳನ್ನು ಇದೇ ವೇಳೆ ಮೆಲಕು ಹಾಕಿದರು.

ಕ್ಲಬ್‌ಗೆ ಹೆಚ್ಚು ಸದಸ್ಯರನ್ನು ನೋಂದಣಿ ಮಾಡಿಕೊಳ್ಳಿ, ವಿಶಾಲವಾದ ಸ್ಥಳ ಕೊಂಡುಕೊಳ್ಳುವ ಮೂಲಕ ಈಜುಕೊಳ, ವಾಲಿಬಾಲ್, ಕ್ರಿಕೆಟ್ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿ ಎಂದ ಅವರು, ಜೂಜಾಡುವವರು ಹಣ ಇಲ್ಲದೇ ಆಡಿ. ಆದರೆ ಹಣ ಕಟ್ಟಿಕೊಂಡು ಆಡುವ ಮೂಲಕ ಮನೆ ಹಾಳು ಮಾಡಿಕೊಳ್ಳಬೇಡಿ ಎಂದು ಕಿವಿಮಾತು ಹೇಳಿದರು.

ಸುರಕ್ಷಾ ಸ್ಪೋರ್ಟ್ಸ್ ಮತ್ತು ರಿಕ್ರಿಯೇಷನ್ ಕ್ಲಬ್ ಅಧ್ಯಕ್ಷ ಶ್ರೀರಾಮಪುರ ಸಂತೋಷ್ ಮಾತನಾಡಿ, ಈ ಕ್ಲಬ್‌ನ ಉದ್ದೇಶಗಳು ಶಾಸಕರ ಆಣತಿಯಂತೆಯೇ ಇರುತ್ತದೆ. ಇಲ್ಲಿ ಸದಸ್ಯರ ಕುಟುಂಬದವರು ಬಂದು ಕಾಲ ಕಳೆಯಲು ಮನರಂಜನೆ ಒಳಗೊಂಡ ಎಲ್ಲಾ ವ್ಯವಸ್ಥೆ ಮಾಡಲಾಗುವುದು ಎಂದರು. ನಾನು ಒಬ್ಬ ಗುತ್ತಿಗೆದಾರನಾಗಬೇಕಾದರೆ ಬಹಳ ಶ್ರಮಪಟ್ಟಿದ್ದೇನೆ. ಪೊಲೀಸ್ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಬರುವಾಗ ನನ್ನನ್ನು ವಿರೋಧಿಸಿದವರೇ ಹೆಚ್ಚು. ಆದರೆ ನಮ್ಮ ಶಾಸಕರಾದ ಸಾ.ರಾ.ಮಹೇಶ್ ಅವರ ಮಾರ್ಗದರ್ಶನದಲ್ಲಿ ವೃತ್ತಿ ಮಾಡುವ ಛಲ, ಹಠ ಧೈರ್ಯದೊಂದಿಗೆ ಇಂದು ನಾನು ಹಲವರಿಗೆ ಉದ್ಯೋಗ ನೀಡಿದ್ದೇನೆ ಎಂದರು.

ಕಾರ್ಯಕ್ರಮದಲ್ಲಿ ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಎಂ.ಟಿ.ಕುಮಾರ್, ಸಂಘದ ಉಪಾಧ್ಯಕ್ಷ ಹರೀಶ್, ಕಾರ್ಯದರ್ಶಿ ಕೆ.ಆರ್.ಕೃಷ್ಣಮೂರ್ತಿ, ಸಹ ಕಾರ್ಯದರ್ಶಿ ಕೆ.ಎಸ್.ಮಹೇಶ್, ನಿರ್ದೇಶಕರಾದ ಕಾಂತರಾಜ್, ಎಸ್.ಟಿ.ಕೀರ್ತಿ, ಜಿ.ಆರ್.ಮಹೇಶ್, ಹೆಚ್.ಡಿ.ಮನುಗೌಡ, ವಕೀಲ ತಿಮ್ಮಪ್ಪ, ಡಿ.ಕಾಂತರಾಜ್, ಹೆಚ್.ಎಸ್.ಶಂಕರ್, ಮಂಜುನಾಥ್ ಸಿ.ಎನ್, ಭೋಜರಾಜ್, ಅಭಿಲಾಷ್, ಸುಜಯ್, ಶಿಕ್ಷಕ ಕುಚೇಲ ಸೇರಿದಂತೆ ಇನ್ನಿತರರಿದ್ದರು.

ದಾಸ ಸಾಹಿತ್ಯ ಬರೆದು ಶ್ರೇಷ್ಠರಾದ ಕನಕದಾಸರು



ಹುಣಸೂರು, ನ.11– ನಗರದ ತಾಲೂಕು ಕಚೇರಿಯಲ್ಲಿ ಶುಕ್ರವಾರ ಕನಕದಾಸ ಜಯಂತಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಸಂತ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಶಾಸಕ ಹೆಚ್.ಪಿ.ಮಂಜುನಾಥ್, ಕನಕದಾಸರು ಸಮಾಜದ ಅಂಕುಡೊಂಕುಗಳನ್ನು ಬದಲಿಸುವ ನಿಟ್ಟಿನಲ್ಲಿ ದಾಸ ಸಾಹಿತ್ಯ ಬರೆದು ಸಾಮಾನ್ಯ ಜನರಿಗೆ ಅರ್ಥೈಸುವ ಮೂಲಕ ಸರ್ವಶ್ರೇಷ್ಠರಾದರು ಎಂದರು. ಈ ವೇಳೆ ಉಪವಿಭಾಗಾಧಿಕಾರಿ ರುಚಿ ಜಿಂದಾಲ್, ತಹಸೀಲ್ದಾರ್ ಡಾ.ಅಶೋಕ್, ತಾಪಂ ಇಓ ಮನು, ನಗರಸಭಾಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ, ಸದಸ್ಯರಾದ ಸ್ವಾಮಿಗೌಡ, ಬ್ಲಾಕ್ ಅಧ್ಯಕ್ಷರಾದ ಟಿ.ವಿ.ನಾರಾಯಣ್, ದೇವರಾಜು, ರಮೇಶ್, ಎ.ಪಿ.ಸ್ವಾಮಿ ಇನ್ನಿತರರಿದ್ದರು.

ನ.16ಕ್ಕೆ, ಸರಗೂರಲ್ಲಿ ಅಪ್ಪಾಜಿ ಕ್ಯಾಂಟೀನ್ ಉದ್ಘಾಟನೆ

ಮಾಜಿ ಸಿಎಂ ಕುಮಾರಸ್ವಾಮಿ ಮಾರ್ಗದರ್ಶನದಲ್ಲಿ ಕ್ಯಾಂಟೀನ್ ಆರಂಭ: ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ



ಹೆಚ್.ಡಿ.ಕೋಟೆ, ನ.11– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಕೂಲಿ ಕಾರ್ಮಿಕರು, ಬಡವರು, ವಿದ್ಯಾರ್ಥಿಗಳು ಹಾಗೂ ಸಂಕಷ್ಟದಲ್ಲಿರುವ ಜನತೆಯ ಅನುಕೂಲಕ್ಕಾಗಿ ಸರಗೂರು ಪಟ್ಟಣದಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆಯಲಾಗುತ್ತಿದೆ ಎಂದು ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ತಿಳಿಸಿದರು.

ಸರಗೂರಿನ ಸಾರಿಗೆ ಬಸ್ ನಿಲ್ದಾಣದ ಎದುರು ನ.16ರಂದು ಅಪ್ಪಾಜಿ ಕ್ಯಾಂಟೀನ್ ಉದ್ಘಾಟನೆ ಹಿನ್ನೆಲೆಯಲ್ಲಿ ತಾಲೂಕಿನ ಮಾದಾಪುರ ಸಮೀಪದ ಫಾರಂ ಹೌಸ್‌ನಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಹೆಚ್.ಡಿ.ಕೋಟೆಯಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಉದ್ಘಾಟಿಸಿ, ಆಶೀರ್ವದಿಸಿದ್ದ ಅಪ್ಪಾಜಿ ಕ್ಯಾಂಟೀನ್ ಯಶಸ್ವಿಯಾಗಿ ನಡೆಯುತ್ತಿದೆ. ಇದರಿಂದ ಶಾಲಾ ಮಕ್ಕಳು, ರೈತರು, ಬಡವರು ಸೇರಿದಂತೆ ಎಲ್ಲಾ ವರ್ಗದ ಜನತೆಗೆ ಅನುಕೂಲವಾಗಿದೆ. ಇದೀಗ ಕುಮಾರಸ್ವಾಮಿ ಅವರ ಮಾರ್ಗದರ್ಶನದ ಮೇರೆಗೆ ನನ್ನ ಸ್ವಂತ ಖರ್ಚಿನಲ್ಲಿ ಸರಗೂರಿನಲ್ಲೂ ಅಪ್ಪಾಜಿ ಕ್ಯಾಂಟೀನ್ ಅನ್ನು ನ.16ರಂದು ತಾಲೂಕಿನ ಮುಖಂಡರು, ಕಾರ್ಯಕರ್ತರ ಸಮ್ಮುಖದಲ್ಲಿ ಉದ್ಘಾಟಿಸಲಾಗುವುದು ಎಂದರು.

ಕ್ಯಾಂಟೀನ್ ಅನ್ನು ಕುಮಾರಸ್ವಾಮಿ ಅವರೇ ಉದ್ಘಾಟಿಸಬೇಕಿತ್ತು. ಆದರೆ ಪಂಚರತ್ನ ಯಾತ್ರೆಯಲ್ಲಿ ಅವರು ಬ್ಯುಸಿಯಾಗಿರುವುದರಿಂದ ಕಾರ್ಯಕ್ರಮಕ್ಕೆ ಅವರು ಬರಲು ಸಾಧ್ಯವಾಗದ ಹಿನ್ನೆಲೆಯಲ್ಲಿ ನಿಗದಿಯಂತೆ ಕ್ಯಾಂಟೀನ್ ಉದ್ಘಾಟಿಸಲಾಗುವುದು. ಮುಂಬರುವ ದಿನಗಳಲ್ಲಿ ತಾಲೂಕಿಗೆ ಜೆಡಿಎಸ್ ಪಂಚರತ್ನ ಯಾತ್ರೆ ಆಗಮಿಸಿದ ವೇಳೆ ಕ್ಯಾಂಟೀನ್‌ಗೆ ಭೇಟಿ ನೀಡಿ ನಿಮ್ಮೆಲ್ಲರೊಂದಿಗೆ ಊಟ ಮಾಡುವುದಾಗಿ ಕುಮಾರಸ್ವಾಮಿ ತಿಳಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಒಕ್ಕಲಿಗ ಸಮಾಜದ ತಾಲೂಕು ಅಧ್ಯಕ್ಷ ಟಿ.ವೆಂಕಟೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಸವರಾಜು, ನಿರ್ದೇಶಕರಾದ ಶಂಕರಲಿಂಗೇಗೌಡ, ತಾಪಂ ಮಾಜಿ ಸದಸ್ಯ ಶಂಭೇಗೌಡ, ಎಂ.ಡಿ.ಮಂಚಯ್ಯ, ದಾಸೇಗೌಡ, ಎಂ.ರಾಜಣ್ಣ, ಬಸವರಾಜು, ಚಾ.ಶಿವಕುಮಾರ್, ಯತೀಶ್, ಶಿವಮಲ್ಲಪ್ಪ, ಶಿವಯ್ಯ, ವೈಕುಂಠನಾಯಕ, ರಘು, ಕಾಳಪ್ಪಾಜಿ, ಸೋಮಣ್ಣ, ವೆಂಕಟೇಶ್, ಹರೀಶ್, ವಕೀಲರಾದ ಪ್ರಶಾಂತ್, ಪ್ರಸನ್ನ, ಜಿತೇಂದ್ರ ಮಾರುತಿ, ಜವರೇಗೌಡ, ರಾಮೇಗೌಡ, ದಿನೇಶ್, ನವೀನ, ನಿಂಗರಾಜು, ವೆಂಕಟೇಶ, ಬಸವಣ್ಣ, ಮುದ್ದರಾಮೇಗೌಡ, ಪ್ರಕಾಶ, ಕೆಂಪೇಗೌಡ, ಶಿವಶಂಕರ್, ರಮೇಶ, ನಿಂಗಣ್ಣಸ್ವಾಮಿ, ನಾಗರಾಜಪ್ಪ, ಡಿ.ನಾಗರಾಜು, ಸತೀಶ್, ರಾಮೇಗೌಡ, ಕಿಟ್ಟಿ ಪುಟ್ಟಸಿದ್ದನಾಯಕ, ಪ್ರಭಾಕರ್, ಸುರೇಶ್, ಬಿ.ವಿ.ರವಿ, ಮಹೇಂದ್ರ ಡಿ.ಆರ್.ನಾಗರಾಜು, ಕೆಂಡಗಣ್ಣಸ್ವಾಮಿ ಇತರರು ಹಾಜರಿದ್ದರು.

ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧೆ ಖಚಿತ

ಮುಂಬರುವ ಚುನಾವಣೆಯಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ನೀಡುವುದಾಗಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದ್ದಾರೆ. ಹೀಗಾಗಿ ಚುನಾವಣೆಯಲ್ಲಿ ನಾನು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಕ್ಷೇತ್ರದಲ್ಲಿ ಹಲವು ವರ್ಷಗಳಿಂದ ಜಾತ್ಯಾತೀತವಾಗಿ ಜನಸೇವೆ ಮಾಡುವ ಮೂಲಕ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ ಎಂದ ಅವರು, ಕೊರೊನಾ ವೇಳೆ ಸಂಕಷ್ಟಕ್ಕೊಳಗಾದ 25 ಸಾವಿರ ಮಂದಿಗೆ ಆಹಾರ ಕಿಟ್, 10 ಸಾವಿರ ಔಷಧಿ ಕಿಟ್, ಆಂಬುಲೆನ್ಸ್, ಆಕ್ಸಿಜನ್ ಘಟಕ ನೀಡುವ ಮೂಲಕ ತಾಲೂಕಿನ ಜನತೆಯ ಹಿತ ಕಾಯಲಾಗಿದೆ ಎಂದರು. ಅಲ್ಲದೇ ಕುಮಾರಸ್ವಾಮಿ ಅವರ ಆದೇಶದ ಮೇರೆಗೆ ಈಗಾಗಲೇ ಕೋಟೆಯಲ್ಲಿ ಕೂಲಿ ಕಾರ್ಮಿಕರು, ಬಡವರು, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅಪ್ಪಾಜಿ ಕ್ಯಾಂಟೀನ್ ತೆರೆಯಲಾಗಿದೆ. ಇದೀಗ ಸರಗೂರಿನಲ್ಲೂ ಕ್ಯಾಂಟೀನ್ ತೆರೆಯಲಾಗುತ್ತಿದೆ. ಈ ಹಿಂದೆಯೇ ಟಿಕೆಟ್ ನೀಡುವುದಾಗಿ ತಿಳಿಸಿದ್ದ ಕುಮಾರಸ್ವಾಮಿ ಅವರು, ಕ್ಯಾಂಟೀನ್ ಉದ್ಘಾಟಿಸುವಂತೆ ಆಹ್ವಾನ ನೀಡಲು ಹೋದಾಗಲೂ ಟಿಕೆಟ್ ನೀಡುವುದಾಗಿ ಭರವಸೆ ನೀಡಿದ್ದಾರೆ. ಹೀಗಾಗಿ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ ಎಂದ ಅವರು, ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಒಗ್ಗಟ್ಟಿನಿಂದ ಶ್ರಮಿಸೋಣ ಎಂದರು.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1 ಗಂಧದ ಗುಡಿ (ಕ): ಬೆ.10.05ಕ್ಕೆ, ಮ.12.05ಕ್ಕೆ, ಮ.2.10ಕ್ಕೆ, ಕಾಂತಾರ (ಕ): ಸಂ.4.10ಕ್ಕೆ, ರಾ.7.05ಕ್ಕೆ, ಜಯ ಜಯ ಜಯ ಜಯ ಹೇ (ಮ): ರಾ.10ಕ್ಕೆ.

ಸ್ಕ್ರೀನ್ 2 ದಿಲ್‌ಪಸಂದ್ (ಕ): ಬೆ.10ಕ್ಕೆ, ಸಂ.4.05ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ಮ.1.15ಕ್ಕೆ, ಉಂಚೈ (ಹಿಂ): ರಾ.7ಕ್ಕೆ, ರಾ.10.10ಕ್ಕೆ.

ಸ್ಕ್ರೀನ್ 3 ಓ (ಕ): ಬೆ.10.30ಕ್ಕೆ, ರಾಣಾ (ಕ): ಮ.1.35ಕ್ಕೆ, ಯಶೋಧಾ (ತೆ): ಸಂ.4.20ಕ್ಕೆ, ರಾ.7.15ಕ್ಕೆ, ಕಾಂತಾರ (ಕ): ರಾ.10ಕ್ಕೆ.

ಸ್ಕ್ರೀನ್ 4 ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಬೆ.9.50ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1 ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಬೆ.10ಕ್ಕೆ, ಮ.1.20ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಗಂಧದ ಗುಡಿ (ಕ): ಸಂ.4.40ಕ್ಕೆ.

ಸ್ಕ್ರೀನ್ 2 ಕಾಂತಾರ (ಕ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ, ದಿಲ್ ಪಸಂದ್ (ಕ): ಸಂ.4.05ಕ್ಕೆ.

ಸ್ಕ್ರೀನ್ 3 ಯಶೋಧಾ (ತೆ): ಬೆ.9.40ಕ್ಕೆ, ಮ.2.55ಕ್ಕೆ, ರಾಣಾ (ಕ): ಮ.12.25ಕ್ಕೆ, ಸಂ.5.45ಕ್ಕೆ, ಗಂಧದ ಗುಡಿ (ಕ): ರಾ.8.20ಕ್ಕೆ, ಉಂಚೈ (ಹಿಂ): ರಾ.10.30ಕ್ಕೆ.

ಸ್ಕ್ರೀನ್ 4 ಗಂಧದ ಗುಡಿ (ಕ): ಬೆ.10ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ಮ.12.10ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಮ.3.15ಕ್ಕೆ, ಉಂಚೈ (ಹಿಂ): ಸಂ.6.35ಕ್ಕೆ, ದಿಲ್ ಪಸಂದ್ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1 ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.

ಸ್ಕ್ರೀನ್ 2 ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.

ಸ್ಕ್ರೀನ್ 3 ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.

ಸ್ಕ್ರೀನ್ 4 ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.9.20ಕ್ಕೆ, ಮ.12.30ಕ್ಕೆ, ಮ.1ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.45ಕ್ಕೆ, ದಿ ಬ್ಲ್ಯಾಕ್ ಆಡಮ್ (ಇ): ಬೆ.9.55ಕ್ಕೆ, ಮ.12.45ಕ್ಕೆ, ಸ.7.05ಕ್ಕೆ, ರಾ.9.50ಕ್ಕೆ, ಪ್ರಿನ್ಸ್ (ತ): ಮ.12.40ಕ್ಕೆ, ರಾ.7.10ಕ್ಕೆ ಸರ್ದಾರ್ (ತ): ಬೆ. 9.15ಕ್ಕೆ ಮ.3.45ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಹುಬ್ಬಳ್ಳಿ ಡಾಬಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹುಬ್ಬಳ್ಳಿ ಡಾಬಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬನಾರಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಯಶೋಧಾ (ತೆ)	4 ಪ್ರದರ್ಶನಗಳು
ಸಂಗಂ	
ಗಂಧದಗುಡಿ (ಕ)	4 ಪ್ರದರ್ಶನಗಳು
ಲಿಡೋ	
ರಾಣಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಹುಬ್ಬಳ್ಳಿ ಡಾಬಾ (ಕ)	4 ಪ್ರದರ್ಶನಗಳು
ಪ್ರಭಾ	
ಊರ್ವಶಿವೋ ರಾಕ್ಷಸಿವೋ (ತೆ)	4 ಪ್ರದರ್ಶನಗಳು



ಮೈಸೂರು ತಾಲೂಕಿನ ಮೆಲ್ಲಹಳ್ಳಿ ಸಹಿ.ಪ್ರಾ.ಶಾಲೆಯಲ್ಲಿ ಕನಕದಾಸರ ಜಯಂತಿ ಆಚರಿಸಲಾಯಿತು. ಈ ವೇಳೆ ಪ್ರಭಾರ ಮುಖ್ಯ ಶಿಕ್ಷಕಿ ಕೆ.ವಿ.ಪುಷ್ಪಲತಾ, ಶಿಕ್ಷಕ ಟಿ.ಸತೀಶ್ ಜವರೇಗೌಡ, ಹಿರಿಯ ಶಿಕ್ಷಕಿಯರಾದ ಪಿ.ಎಲ್. ಭಾಗ್ಯ, ಕಲ್ಪನಾ, ಪಿ.ಎನ್.ವೀಣಾ, ಸುಜಾತ ಮತ್ತಿತರರಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಹುಣಸೂರು, ನ.11– ನಗರದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ನ.12 ರಂದು ಬೆಳಗ್ಗೆ 10 ರಿಂದ 6 ಗಂಟೆವರೆಗೆ ಹುಣಸೂರು ನಗರದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಕಂಪಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಕನಕದಾಸ ಜಯಂತಿ ಆಚರಿಸಲಾಯಿತು. ಮುಖ್ಯ ಶಿಕ್ಷಕ ಮಹದೇವಯ್ಯ, ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ರಾಣಿ, ಶಹಜಾನ್, ಯಶ್ವಂತ್, ಶಿವರಾಜ್, ಶಾರದಮ್ಮ, ಭಾಗ್ಯ, ಲಕ್ಷ್ಮಿ, ಪೂರ್ಣಿಮಾ, ಸುಜಾತ, ಗೀತಾ ಇತರರಿದ್ದರು.

ಭಾಗ್ಯಮ್ಮ ನಿಧನ



ಹುಣಸೂರು, ನ.11– ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್ ಅವರ ಚಿಕ್ಕಮ್ಮ ಹಾಗೂ ತಾಲೂಕಿನ ಹೊಸೂರು ಕೊಡಗು ಕಾಲೋನಿ ನಿವಾಸಿ ಭಾಗ್ಯಮ್ಮ(68) ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಸ್ವಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜವರೇಗೌಡ




ಹುಣಸೂರು, ನ.11– ತಾಲೂಕಿನ ರೈತ ಸಂಘದ ಹಳೇಪುರ ಗ್ರಾಮ ಶಾಖೆ ಅಧ್ಯಕ್ಷ ರಾಮಕೃಷ್ಣೇಗೌಡರ ತಂದೆ ಜವರೇಗೌಡ(86) ಗುರುವಾರ ರಾತ್ರಿ ನಿಧನರಾದರು. ಮೃತರು ನಾಲ್ವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮೃತರ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಡಪ್ರಭು ಕೆಂಪೇಗೌಡರ ಪ್ರತಿಮೆ ಉದ್ಘಾಟನೆ ಕಾರ್ಯಕ್ರಮ ಒಂದು ಪಕ್ಷಕ್ಕೆ ಸೀಮಿತವಾಯ್ತು...

• ವಿಧಾನಪರಿಷತ್ ಸದಸ್ಯ ಅಡಗೂರು ವಿಶ್ವನಾಥ್ ಬೇಸರ • ಇದು ಸರ್ಕಾರದ ಕಾರ್ಯಕ್ರಮ; ಇಡೀ ರಾಜ್ಯದ ಜನ ಸಂಭ್ರಮಿಸಬೇಕಿತ್ತು • ದೇವೇಗೌಡರು, ಸಿದ್ದರಾಮಯ್ಯ, ಕುಮಾರಸ್ವಾಮಿ ಆಹ್ವಾನಿಸಬೇಕಿತ್ತು

ಮೈಸೂರು, ನ.11(ಎಂಟಿವೈ)– ಬೆಂಗಳೂರಲ್ಲಿ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆ ಉದ್ಘಾಟನೆ ಸಂಭ್ರಮ ಕೇವಲ ಒಂದು ಪಕ್ಷಕ್ಕೆ ಸೀಮಿತವಾಗಿದ್ದು ಖಂಡನೀಯ ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಸ್ವಪಕ್ಷದ ವಿರುದ್ಧವೇ ಹರಿಹಾಯ್ದರು.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾಡು ಕಟ್ಟಿದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಪ್ರಧಾನಿ ಮೋದಿ ಆಗಮಿಸಿದ್ದಾರೆ. ನಾಡಪ್ರಭುವಿನ ಉತ್ಸವವನ್ನು ನಾಡಿನ ಜನರು ಸಂಭ್ರಮಿಸಬೇಕಾಗಿತ್ತು. ಆದರೆ, ಆ ಕಾರ್ಯಕ್ರಮದ ಸಂಭ್ರಮ ಕೇವಲ ಒಂದು ಪಕ್ಷಕ್ಕೆ ಸೀಮಿತಗೊಳಿಸಿ, ಇನ್ನಿತರರು ಸಂಭ್ರಮಪಡುವ ಅವಕಾಶವನ್ನು ಕಿತ್ತುಕೊಂಡಿದ್ದು ಅಕ್ಷಮ್ಯ. 108 ಅಡಿ ಎತ್ತರದ ಪ್ರತಿಮೆಯನ್ನು ಸರ್ಕಾರದ ಹಣದಿಂದ ನಿರ್ಮಿಸಲಾಗಿದೆ. ಇದೊಂದು ಸರ್ಕಾರಿ ಕಾರ್ಯಕ್ರಮ. ಆದರೆ. ಬಿಜೆಪಿ ಪಕ್ಷಕ್ಕೆ ಸೀಮಿತಗೊಳಿಸಬಾರದಿತ್ತು. ಸರ್ಕಾರ ಈ ವಿಚಾರದಲ್ಲಿ ಎಡವಿದೆ ಎಂದರು.

ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದ ಹೆಚ್.ಡಿ. ದೇವೇಗೌಡರು, ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಬಹುದಾಗಿತ್ತು. ಆದರೆ, ಸರ್ಕಾರದ ಕಾರ್ಯಕ್ರಮಕ್ಕೆ ಗಣ್ಯರಿಗೆ ಆಹ್ವಾನ ನೀಡದೇ ತಮ್ಮ ಪಕ್ಷದ ಕಾರ್ಯಕ್ರಮವಾಗಿ ನಡೆಸಿರುವುದು ವಿಷಾದಕರ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಾಯಿಗೆ ಬಂದಂತೆ ಮಾತನಾಡಬಾರದು: ಸಂಸದ ಪ್ರತಾಪಸಿಂಹ ಸುಮ್ಮನೆ ಬಾಯಿಗೆ ಬಂದಂತೆ ಮಾತಾಡುತ್ತಾರೆ. ಎಲ್ಲವೂ ನಾನೇ ಮಾಡಿದೆ, ನನ್ನಿಂದಲೇ ಎನ್ನುತ್ತಾರೆ. ಬಾಯಿಗೆ ಬಂದಂತೆ ಮಾತನಾಡುವುದೇ ರಾಜಕಾರಣವಲ್ಲ. ನೀವು ಸಂಸದರಾಗಿ ಯಾರಿಂದ ಗೆದ್ದಿದ್ದು ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಉಪಕಾರ ಸ್ಮರಣೆ ಮಾಡಿಕೊಳ್ಳಬೇಕು. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ನಾಯಕರಾಗಿರುವ ಸಿದ್ದರಾಮಯ್ಯ ಬಗ್ಗೆ ಹಗುರ ಹೇಳಿಕೆ ಸಲ್ಲ. ಸಿದ್ದರಾಮಯ್ಯ 5 ವರ್ಷ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು. ಪ್ರಸ್ತುತ ಶಾಸಕಾಂಗ ಪಕ್ಷದ ನಾಯಕ, ವಿರೋಧ ಪಕ್ಷದ ನಾಯಕನಾಗಿಯೂ ಇದ್ದಾರೆ. ಸುಮ್ಮನೆ ಅವರ ಬಗ್ಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದು ತಾಕೀತು ಮಾಡಿದರು.

ಮುಗಿದ ಅಧ್ಯಾಯ: ಮಾಜಿ ಸಚಿವ ಸತೀಶ್ ಜಾರಕಿಹೊಳಿ ಈ ಹಿಂದೆ ನೀಡಿದ್ದ ಹೇಳಿಕೆಯಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದಿಸುತ್ತೇನೆ ಎಂದಿದ್ದಾರೆ. ಇದರಿಂದ ಆ ವಿವಾದ ಮುಗಿದ ಅಧ್ಯಾಯ. ಮತ್ತೆ ಅದನ್ನು ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ ಎಂದರು.

ಜಿಲ್ಲಾಡಳಿತದ ಉಪೇಕ್ಷೆ ಸಹಿಸಲ್ಲ: ಇಂದು ನಾಡಿನಾದ್ಯಂತ ಭಕ್ತ ಕನಕ ದಾಸರ ಜಯಂತಿ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಪ್ರಸ್ತುತ ಎಲ್ಲಾ ರಾಜಕೀಯ ಪಕ್ಷದ ನಾಯಕರು ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಮಾತನಾಡಬೇಕಾದರೆ ಅದು ಕನಕದಾಸರ ಸಿದ್ಧಾಂತವೇ ಕಾರಣ. ಅವರ ಸಾಮಾಜಿಕ ನ್ಯಾಯ ದೇಶ ಮತ್ತು ಜಗತ್ತಿಗೆ ಗೊತ್ತಿದೆ. ಅವರು ಸದಾಕಾಲ ಸ್ಮರಣೀಯರು. ಅವರ ತತ್ವ ಸಿದ್ಧಾಂತದ ನಮಗೆ ಅಭಿಮಾನ ಮೂಡಿಸಿದೆ. ಆದರೆ, ಮೈಸೂರಲ್ಲಿ ಅದ್ಧೂರಿಯಾಗಿ ನೆರವೇರಬೇಕಾಗಿದ್ದ ಕಾರ್ಯಕ್ರಮವನ್ನು ನಿರ್ಲಕ್ಷ್ಯ ಮಾಡಲಾಗಿದೆ. ಅಧಿಕಾರಿಗಳು ಒಂದೂವರೆ ಗಂಟೆಯಾದರೂ ಮೆರವಣಿಗೆ ಸಂದರ್ಭದಲ್ಲಿ ಹಾಜರಾಗಿಲ್ಲ. ಕನಕದಾಸರ ಸಮುದಾಯವನ್ನೇ ಜಿಲ್ಲಾಡಳಿತ ನಿರ್ಲಕ್ಷಿಸಿ, ಉಪೇಕ್ಷೆ ಮಾಡಿದೆ. ಇದು ಸರ್ಕಾರದ ಕಾರ್ಯಕ್ರಮ ಎನಿಸುತ್ತಿಲ್ಲ.

ಇಂದಿನಿಂದ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಕುಂಭಾಭಿಷೇಕ

ಮೈಸೂರು, ನ.11– ಮೈಸೂರಿನ ಕನ್ನೇಗೌಡನ ಕೊಪ್ಪಲು ಪೈಲ್ವಾನ್ ಬಸವಯ್ಯನವರ ವೃತ್ತದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ 12ನೇ ವರ್ಷದ ಕುಂಬಾಭಿಷೇಕ ಮಹೋತ್ಸವ ನಾಳೆ(ನ.12) ಆರಂಭಗೊಳ್ಳಲಿದೆ.

ಶನಿವಾರ ಗೋಧೂಳಿ ಲಗ್ನದಲ್ಲಿ ಅನುಜ್ಞೆ, ಅಗ್ರತೀರ್ಥ ಸಂಗ್ರಹ, ಯಾಗ ಶಾಲಾ ಪ್ರವೇಶ, ಗಣಪತಿ ಪೂಜಾ ಪೂರ್ವಕ, ಪುಣ್ಯಾಹ, ಪಂಚಗವ್ಯ ಸಾಧನ, ಸಂಪ್ರೋಕ್ಷಣೇ, ಗಣಹೋಮ, ನವಗ್ರಹಪೂಜೆ, ಮೃತ್ಯುಂಜಯ ಪೂಜೆಹೋಮ, ಪ್ರಧಾನ ಕಳಸ ಸ್ಥಾಪನೆ ನೆರವೇರಲಿದೆ. ನ.13ರಂದು ಪ್ರಧಾನ ಹೋಮ, ಪೂರ್ಣಾಹುತಿ, ಕುಂಭಾಭಿಷೇಕ, ಅಲಂಕಾರ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ.

ಚಿರತೆ ಸೆರೆ



ಮೈಸೂರು, ನ.11(ಎಂಟಿವೈ)– ಮೈಸೂರಿನ ಬೆಳವಾಡಿ ಕೈಗಾರಿಕಾ ಪ್ರದೇಶದಲ್ಲಿ ಕಾಣಿಸಿಕೊಂಡು ಸ್ಥಳೀಯರಲ್ಲಿ ಆತಂಕವನ್ನುಂಟು ಮಾಡುತ್ತಿದ್ದ ಚಿರತೆಯೊಂದು ಅರಣ್ಯ ಇಲಾಖೆ ಇಟ್ಟಿದ್ದ ಬೋನ್‌ಗೆ ಬಿದ್ದಿದೆ.

ಬೆಳವಾಡಿಯ ಡಿಕೇವ್ ರೆಜಿನ್ಸ್ ಕಾರ್ಖಾನೆ ಆವರಣದಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನ್‌ನಲ್ಲಿದ್ದ ನಾಯಿಯ ತಿನ್ನಲು ಬಂದ ಸುಮಾರು 6 ರಿಂದ 7 ವರ್ಷದ ಗಂಡು ಚಿರತೆ, ಮುಂಜಾನೆ ಸೆರೆ ಸಿಕ್ಕಿದೆ. ಬೋನಿಗೆ ಚಿರತೆ ಬಿದ್ದಿರುವ ವಿಷಯ ತಿಳಿದು ಕಾರ್ಖಾನೆಯ ಸಿಬ್ಬಂದಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ತೆರಳಿ ಚಿರತೆಯಿದ್ದ ಬೋನ್ ಅನ್ನು ಅರಣ್ಯ ಭವನಕ್ಕೆ ಕೊಂಡೊಯ್ದರು. ಸೆರೆಸಿಕ್ಕ ಚಿರತೆ ದಷ್ಟಪುಷ್ಟವಾಗಿದ್ದು, ಆರೋಗ್ಯದಿಂದಿದೆ ಬಳಿಕ ಹಿರಿಯ ಅಧಿಕಾರಿಗಳ ಅನುಮತಿ ಮೇರೆಗೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮೂಲೆಹೊಳೆ ವಲಯದಲ್ಲಿ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಆರ್‌ಎಫ್‌ಓ ಕೆ.ಸುರೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಬೆಟ್ಟದ ನಂದಿಗೆ ಮಹಾಭಿಷೇಕ

ಮೈಸೂರು,ನ.11(ಎಂಟಿವೈ)– ಕಾರ್ತಿಕ ಮಾಸದ ಹಿನ್ನೆಲೆಯಲ್ಲಿ ನ.13ರಂದು ಬೆಳಗ್ಗೆ 9ಕ್ಕೆ ಚಾಮುಂಡಿಬೆಟ್ಟದ ನಂದಿ ಮೂರ್ತಿಗೆ ಬೆಟ್ಟದ ಬಳಗ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮಹಾಭಿಷೇಕ ಹಾಗೂ ಪೂಜಾ ಮಹೋತ್ಸವ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಎನ್. ಗೋವಿಂದ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವರ್ಷದ ಮಹಾಭಿಷೇಕ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್‌ನ 17ನೇ ವರ್ಷದ ಕಾರ್ಯಕ್ರಮವಾಗಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಸಮ್ಮುಖದಲ್ಲಿ ನಡೆಯಲಿದೆ. ಬೆಟ್ಟದ ನಂದಿ ರಸ್ತೆ ದುರಸ್ತಿಯಾಗುತ್ತಿರುವ ಹಿನ್ನೆಲೆಯಲ್ಲಿ ಸರಳವಾಗಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಖಾದ್ಯ, ಮಧುಪರ್ಕ, ಖರ್ಜೂರ, ಅರಿಶಿನ, ಕುಂಕುಮ, ಹಾಲು, ತುಪ್ಪ ಜೇನುತುಪ್ಪ ಸೇರಿದಂತೆ 38 ರೀತಿಯ ವಸ್ತುಗಳನ್ನು ಬಳಸಿ ಮಹಾಭಿಷೇಕ ಮಾಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಬೆಟ್ಟದ ಬಳಗ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಪ್ರಕಾಶ್, ಪದಾಧಿಕಾರಿಗಳಾದ ಶಿವಕುಮಾರ್, ಸುಂದರ್ ಇದ್ದರು.

ಬೋಗಾದಿಯಲ್ಲಿ ಪ್ರತ್ಯೇಕ ಪೊಲೀಸ್ ಠಾಣೆಗೆ ಪ್ರಜಾಪಾರ್ಟಿ ಆಗ್ರಹ

ಮೈಸೂರು, ನ.11(ಎಂಟಿವೈ)– ಮೈಸೂರು ನಗರಕ್ಕೆ ಹೊಂದಿಕೊಂಡಂತೆ ಇರುವ ಬೋಗಾದಿಗೆ ಪ್ರತ್ಯೇಕ ಪೊಲೀಸ್ ಠಾಣೆ ಸ್ಥಾಪಿಸುವಂತೆ ಕರ್ನಾಟಕ ಪ್ರಜಾಪಾರ್ಟಿ ರೈತ ಪರ್ವದ ಅಧ್ಯಕ್ಷ ಡಾ.ಬಿ. ಶಿವಣ್ಣ ಒತ್ತಾಯಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ನಗರದಿಂದ ಕೂಗಳತೆಯಷ್ಟು ದೂರದಲ್ಲಿರುವ ಬೋಗಾದಿ ವಿಶಾಲವಾದ ಭೌಗೋಳಿಕ ವ್ಯಾಪ್ತಿ ಹಾಗೂ ಅಧಿಕ ಜನಸಂಖ್ಯೆ ಹೊಂದಿರುವ ಬಡಾವಣೆಯಾಗಿದೆ. ಈ ಬಡಾವಣೆಗೆ ಹೊಂದಿಕೊಂಡಂತೆ ಇರುವ ಕೆಲ ಗ್ರಾಮ ಹಾಗೂ ಇನ್ನಿತರ ಬಡಾವಣೆಯನ್ನು ಒಳಗೊಂಡಂತೆ ಪ್ರತ್ಯೇಕವಾದ ಪೊಲೀಸ್ ಠಾಣೆಯ ಅಗತ್ಯವಿದೆ. ಬೋಗಾದಿ ಗ್ರಾಮ ಪ್ರಸ್ತುತ ಸರಸ್ವತಿಪುರಂ ಠಾಣೆ ವ್ಯಾಪ್ತಿಗೆ ಸೇರಿದೆ. ಈ ಬಡಾವಣೆಗಳಲ್ಲಿ ಏನಾದರೂ ಅಹಿತಕರ ಘಟನೆ ಸಂಭವಿಸಿದರೆ ಹಾಗೂ ಅಪರಾಧ ತಡೆ ವಿಷಯದಲ್ಲಿ ಪೊಲೀಸರು ಸ್ಥಳ ತಲುಪಲು ಸಾಕಷ್ಟು ಸಮಯ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸ್ಥಳೀಯರಿಗೆ ಸೂಕ್ತ ಸಂದರ್ಭದಲ್ಲಿ ರಕ್ಷಣೆ ಒದಗಿಸಲು ಹಿನ್ನಡೆಯಾಗುತ್ತಿದೆ ಎಂದು ವಿಷಾದಿಸಿದರು.

ಬೋಗಾದಿಯಲ್ಲಿ ಉತ್ತಮ ಜನಸಂಪರ್ಕ ರಸ್ತೆಯಿದ್ದು, ಹಲವಾರು ಪ್ರಮುಖ ಕಚೇರಿ, ಕಟ್ಟಡಗಳಿವೆ. ಹೀಗಾಗಿ ಇಲ್ಲಿನ ಜನಸಂಖ್ಯೆ ಹಾಗೂ ಭೌಗೋಳಿಕ ವ್ಯಾಪ್ತಿ ಪರಿಗಣಿಸಿ ಪ್ರತ್ಯೇಕ ಠಾಣೆ ಆರಂಭಿಸಬೇಕು. ಇಲ್ಲದಿದ್ದಲ್ಲಿ ಪಕ್ಷದ ವತಿಯಿಂದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಪ್ರಜಾ ಪಾರ್ಟಿ ರೈತ ಪರ್ವ ಮುಖಂಡರಾದ ಎ.ಜಿ. ರಾಮ ಚಂದ್ರರಾವ್ ಇದ್ದರು.

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

PUBLIC NOTICE

NOTICE is hereby given that, my client **Mr. Neeraj Mittal.** S/o. Mr. Uma Shankar Mittal, R/at: #78, Rajendranagar, Lucknow, Uttar Pradesh intends to Purchase the schedule properties belonging to Sri. Sreenivas Prasad Sreenath, S/o. Late B.N. Sreenath, C/o. Sri. Keshava Murthy. K., R/at: # F14, 3rd Cross, Shanker Mutt Road, Fort Mohalla, Mysore - 570004

Any persons claiming right, title or interest in the said properties or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise how-so-ever are hereby required to make the same known to the undersigned at his office within 7 days from the date hereof, falling which, the said transactions will be completed, without any reference to such claim and the same, if any shall be considered as waived.

SCHEDULE

Al the piece and parcel of Residential House Property bearing Corporation Door No.2877/14, New No. K-13, Katha No.31, situated at J.L.B. Road, Chamundipuram, Krishnaraja Mohalla, Mysore, measuring East to West: 58-00 (Fifty-Eight) Feet and North to South: 104-00 (One Hundred & Four) Feet, in all measuring 6032 Sq. Feet and bounded on **East By:** Mr. Chidalingaiah's House, **West By:** Dr. Raghavendra Rao's House, **North By:** Portion of Property belongs to Mr. R.V. Venkatesh, **South By:** J.L.B. Road.

Sd/- ABHINANDAN. H., Advocate
Office Address:- 990, First Floor, 'E' & 'F' Block, Panchamanthra Road, Kuvempunagar, Mysuru - 570023.
Phone No.9964426903:
E-Mail: advabhinandan@gmail.com
Dated: 11-11-2022 Place: Mysuru